# ಅಪರಂಜಿ

ತಿಳಿನಗೆಯ ಕಾರಂಜಿ

ಜನವರಿ–2024




ಬಿಡಿ ಪ್ರತಿ: ರೂ. 10/–

# Ravi Graphics
OFFSET PRINTERS

*Bringing colours alive*

***What we specialize into :***

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com

Bag is everything

# bag factory
bagfactory.co.in

## Our Promise

- 100% recyclable paper bags & pouches
- Pan-India delivery
- Premium customisation for high-street brands




Reach us for your paper bag requirements

+91 89719 95599 | sales@bagfactory.co.in | bagfactory.co.in

# ನ್ಯೂ ರೆಸೊಲ್ಯೂಷನ್ ! ನೋ ರೆಸೊಲ್ಯೂಷನ್ !

ಐಡಿಯಾ : ಚಾಟ್ ಜಿ ಪಿ ಟಿ
ವ್ಯಂಗ್ಯಚಿತ್ರ: ರಾಂಕಿ ಬೆಳ್ಳೂರ್



Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

www.mallige.com

Certificate No.: MC-2068



Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages : 40+4 APARANJI KANNADA MONTHLY.

# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪುಟ 41
ಸಂಚಿಕೆ – 04
ಡಿಸೆಂಬರ್–2023

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ...*

| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ನಗುವಿನ ಮತಾಪು | ಸುಕೇಶವ | 5 |
| ಮೆಚ್ಚುಗೆಯೆಂಬ ಮಾಯಾವಿ | ಪ್ರಭಾಮಣಿ ನಾಗರಾಜ | 7 |
| ಪದಕುಲುಮೆ | ಎಸ್.ಎನ್. ಗಣನಾಥ | 10 |
| ತಿಪ್ಪಿಯೂ | ಕಲ್ಲೇಶಿಯೂ, ತಿಪ್ಪಿಯೂ | 11 |
| ಶಿರೋಮಣಿ | ವಿ. ವಿಜಯೇಂದ್ರ ರಾವ್ | 14 |
| ಅದ್ಭುತ | ಮಂಗಳ ಎಂ ನಾಡಿಗ್ | 15 |
| ಪ್ರಯಾಣದ | ಕೆ.ಎಸ್. ಸೋಮೇಶ್ವರ | 19 |
| ಸನ್ ಸಂಡೇ ಕಲಿಸಿದ | ಸುಮವೀಣಾ | 24 |
| ಪತಿಗೊಂದು ಕಿವಿಮಾತು | ಜ್ಯೋತಿ ರಾಜೇಶ್ | 26 |
| ದಂನಳ | ದಂನಳ | 27 |
| ರಂಗೋಲಿಯ ಚಕ್ರವ್ಯೂಹದಲ್ಲಿ | ಕವಿತ ಹೆಗಡೆ ಅಭಯಂ | 28 |
| ದಂಪತ್ವೈರಿ | ಸಂತೋಷ್ ತಾಮ್ರಪರ್ಣಿ | 30 |
| ಗುಂಡಣ್ಣ ಮತ್ತು ಉಪ್ಪಿಟ್ | ಸಿ.ಎ. ನಾ ವಿಲಾಸ ಹುದ್ದಾರ | 32 |
| ಮ್ಯಾರೇಜ್ ಸೂಟ್ | ರಮೇಶ್ ಚಂದ್ರ | 34 |
| ಪುಸ್ತಕ ಪರಿಚಯ | ಶಿವಕುಮಾರ್ | 37 |
| ಸ್ವರ್ಗಲೋಕದಲ್ಲಿ ಓಷಧಿ | ಎನ್ ರಾಮನಾಥ್ | 38 |

**ವ್ಯಂಗ್ಯ ಚಿತ್ರಗಳು :**
**ಹೊರಪುಟ** : ರಾಂಕಿ
**ಒಳಪುಟಗಳು** : ರಾಂಕಿ ಮತ್ತು ಏಐ

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,*
*ಬೆಂಗಳೂರು – 560 003,* email: koravanjiaparanji@gmail.com ಮೊಬೈಲ್:9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488.email:belururamamurthy@gmail.com

**For Online payment of ubscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

***ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ***



# ಅಪರಂಜಿ ಕಿಡಿ

● ಪ್ರಕಾಶ್

ನಮ್ಮ ಬಳಗದ ಎಲ್ಲರಿಗೂ, ಹೊಸ ವರ್ಷದ ಶುಭಾಶಯಗಳು !!

* * *

ಸುಳ್ಳು ಸುದ್ದಿ ಪತ್ತೆಗೆ ಐದು ಸಂಸ್ಥೆ ಆಯ್ಕೆ

ಪತ್ರಿಕೆ

ಸಂಸ್ಥೆಗಳ ನಡುವೆ ಭಿನ್ನಾಭಿಪ್ರಾಯ ಆಗದಿರಲಿ !!

* * *

ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ಜಯ

ಪತ್ರಿಕೆ

ಇದು ಕ್ರೀಡಾಪುಟದಲ್ಲೋ ಮುಖಪುಟದಲ್ಲೋ !!

* * *

ಟ್ರಕ್ ಚಾಲಕರಿಗೆ ಏರ್ ಕಂಡಿಕ್ಷನ್ ಕ್ಯಾಬಿನ್ ಕಡ್ಡಾಯ

ಪತ್ರಿಕೆ

ಚಳಿಗಾಲದಲ್ಲಿ ?!

* * *

ಅಧಿಕಾರವನ್ನು ಶಾಸಕರಿಂದ ವಿಕೇಂದ್ರೀಕರಿಸಿ

ಪತ್ರಿಕೆಯಲ್ಲಿ ಹೇಳಿಕೆ

* * *

ಅರಣ್ಯ ರೋದನಕ್ಕೆ ಸುಪ್ರೀಂ ಉದಾಹರಣೆ ಅಂತ ಅಪರಂಜಿ ನಕ್ಕಳಂತೆ !

* * *

ಉತ್ತರ ಪ್ರದೇಶದ ಉತ್ತರಾಧಿಕಾರಿ ಆಕಾಶ್ ಆನಂದ್

ಸುದ್ದಿ

ಇದು ಭಗವಂತನ ಮಾಯೆ ಇರಬೇಕು !!

* * *

ಜ್ಞಾನ, ಸತತ ಶ್ರಮದಿಂದ ಯಶಸ್ಸು ಸಾಧ್ಯ

ಶ್ರೀ ಸತ್ಯ ಶ್ರೀನಿವಾಸ್

ಇದಕ್ಕಿಂತ ಕಠೋರ ಸತ್ಯ ಯಾರಿಗೂ ಹೊಳೆದಿಲ್ಲ !!

* * *

ಅಮೆರಿಕಾದ ರಾಜಕೀಯ ದುಃಖ--ನಾಟಕವನ್ನು ನೋಡಿ,
"ನಮ್ಮ ದೇಶವೇ ವಾಸಿ ಅಂತ ಅಪರಂಜಿ ಪಲುಕಿದಳಂತೆ !!

■

# ನಮ್ಮ ನಿಮ್ಮಲ್ಲಿ

**ಶಿವಕುಮಾರ್**

ಮೊನ್ನೆ ಅರವಿಂದನ ಜೊತೆ ಮಾತಾಡ್ತಾ ಇದ್ದೆ. "ಈ ಆರ್ಟಿಫಿಸಿಯಲ್ ಇಂಟೆಲಿಜೆನ್ಸ್ ಬಹಳಾ ಅಪಾಯಕಾರಿ ಅಂತೆಲ್ಲಾ ಹೇಳ್ತಾರಲ್ಲಾ, ಅಪಾಯ ಏನು ಬಂತು? ಇದು ಕೇವಲ ಒಂದು ಕಂಪ್ಯೂಟರ್ ಪ್ರೋಗ್ರಾಮ್ ಅಲ್ವಾ ?" ಅಂತ ನಾನು ಅವನನ್ನ ಕೇಳಿದೆ. ಅರವಿಂದ ನಮ್ಮ ವಾಣಿ ಸುರೇಶ್ ಮಗ. ಅಮೆರಿಕೆಯಿಂದ ಯಾವುದೋ ಕೆಲಸದ ನಿಮಿತ್ತ ಬೆಂಗಳೂರಿಗೆ ಬಂದಿದ್ದ. ನಮ್ಮ ಮನೆಯಲ್ಲಿ ಇಳಿದುಕೊಂಡಿದ್ದರಿಂದ ಮಾತುಕತೆಗೆ ಹೆಚ್ಚು ಅವಕಾಶ ಒದಗಿತ್ತು. ಟೆಸ್ಲಾ ಕಂಪನಿಯಲ್ಲಿ ಅವನ ಕೆಲಸ. ಸ್ವಯಂಚಲಿತ ಕಾರುಗಳು ಹೆಸರೇ ತಿಳಿಸುವಂತೆ, ಯಾರ ಸಹಾಯವಿಲ್ಲದೇ ಅವು ಕಾರು ಡ್ರೈವ್ ಮಾಡುವಂತೆ ಮಾಡುವ ಎ ಐ ಸಾಧನಗಳ ವಿನ್ಯಾಸ ಮತ್ತು ಜೋಡನೆಯ ವಿಭಾಗಕ್ಕೆ ಅವನೇ ಇನ್‌ಛಾರ್ಜ್.

" ಅಯ್ಯೋ ಹಾಗಲ್ಲ ಅಂಕಲ್, ನಿಮ್ಮ ಕಾಲದ ಪ್ರೋಗ್ರಾಮುಗಳಂತಲ್ಲ ಇದು. ತಾನೇ ಯೋಚಿಸಿ ನಮಗೆ ಗೊತ್ತಿಲ್ಲದ ವಿಷಯಗಳನ್ನು ಬಳಸಿ ಹೊಸ ಅವಿಷ್ಕಾರಗಳನ್ನು ಸೃಷ್ಟಿಸುವ ಅತಿಮಾನವರು ಇವು. ನಮ್ಮ ಎಐ ಕಂಮ್ಯೂನಿಟಿಯಲ್ಲಿ ಒಂದು ಜೋಕ್ ಹರಿದಾಡುತ್ತಿದೆ. ಎಐ ಬಂದಮೇಲೆ ಅವು ಕವನಗಳನ್ನ, ವ್ಯಂಗ್ಯ ಚಿತ್ರಗಳನ್ನು ರಚಿಸುವ ಕೆಲಸಗಳನ್ನು ಮಾಡುತ್ತಿರುವಾಗ ನಮ್ಮ ಮಾನವ ಯುವಕರು ಡನ್ಜೋ, ಸ್ವಿಗ್ಗಿ ಡೆಲಿವೆರಿ ಹುಡುಗರಾಗಿ ಕೆಲಸಮಾಡುವ ದಿನಗಳು ಬಂದಿವೆ ಅಂತ. ..."

" ಅರೆ, ಎ ಐ, ವ್ಯಂಗ್ಯ ಚಿತ್ರ ಬರೆಯುತ್ತೇ ? ಹಾಗಾದ್ರೆ ನಮ್ಮ ಅಪರಂಜಿಗೆ ಇನ್ನು ಮೇಲೆ ಅದರಿಂದ ಚಿತ್ರಗಳನ್ನು ಬರೆಸಬಹುದೇ ?" ಅಂತ ನಾನು ಕೇಳಿದೆ.

ಅವನು ಉತ್ತರಿಸಲಿಲ್ಲ. ನೇರವಾಗಿ ನನ್ನನ್ನ ಡೆಸ್ಕ್‌ಟಾಪಿನ ಹತ್ತಿರ ಕರೆದುಕೊಂಡು ಹೋಗಿ ಸ್ಟೇಬಲ್ ಡಿಫ್ಯೂಜನ್ ಅನ್ನೋ ವೆಬ್ ಸೈಟ್ ತೆರೆದ. ಅದರಲ್ಲಿ ಪ್ರಾಮ್ಟ್ ಅನ್ನೋ ಬಾಕ್ಸ್ ನಲ್ಲಿ ನನಗೆ ಬೇಕಾಗಿರೋ ಚಿತ್ರದ ವಿವರಣೆಯನ್ನ ಟೈಪಿಸಲು ಹೇಳಿದ.

ನಾನು ಸ್ವಲ್ಪ ಯೋಚಿಸಿದೆ. ಹೇಗಿದ್ರೂ ನಾನು ಆಗಾಗ ಶರಲೇಖನ ಸಾಹಸಗಳನ್ನು ಬರೆಯೋದರಿಂದ, ಶರಲೇಖ ನಮ್ಮ ದೇಶಕ್ಕೆ ಬಂದು ಇಲ್ಲಿನ ಮಹಿಳೆಯೊಬ್ಬಳ ಹತ್ತಿರ ಸಮಾಲೋಚನೆ ಮಾಡ್ತಾ ಇರೋ ಚಿತ್ರ ಬರೆಯುಕ್ಕೆ ಹೇಳೋಣ ಅನ್ನಿಸಿತು. ಸರಿ ಅದನ್ನೇ ಪ್ರಾಮ್ಟ್ ಮಾಡಿದೆ. ಅದು ಚಿತ್ರ ಯಾವ ಶೈಲಿಯಲ್ಲಿ ಬೇಕು ಅಂತ ಕೇಳಿತು. ಅನೇಕ ಆಯ್ಕೆಗಳನ್ನೂ ನೀಡಿತು. ಡಿಜಿಟಲ್ ಆರ್ಟ್, ಹೈಪರ್ ರಿಯಲಿಸಮ್, ಲೈನ್ ಡ್ರಾಯಿಂಗ್ ಮತ್ತು ಇನ್ನೂ ಏನೇನೋ. ಡಿಜಿಟಲ್ ಆರ್ಟ್ ಆರಿಸಿದೆ. ಪ್ರಾಸೆಸಿಂಗ್ ಪ್ರಾರಂಭವಾಯಿತು ಸೆಕೆಂಡುಗಳು ಉರುಳುವುದನ್ನು ಒಂದು ಮೀಟರ್ ದಾಖಲಿಸುತ್ತಿತ್ತು. ಎಪ್ಪತ್ತು ಸೆಕೆಂಡುಗಳ ನಂತರ ತೆರೆಯ ಮೇಲೆ ಮೂಡಿದ ಚಿತ್ರ.





ಅರವಿಂದ, " ಇನ್ನೊಂದು ಪ್ರಾಮ್ಟ್ ಕೊಡಿ ಅಂಕಲ್ " ಅಂತ ನನ್ನನ್ನ ಹುರಿದುಂಬಿಸಿದ. ನನಗೆ ನಳ ದಮಯಂತಿ ಕಥೆ ನೆನಪಿಗೆ ಬಂತು. ನಳ, ದಮಯಂತಿಗೆ ಹಂಸದ ಮೂಲಕ ತನ್ನ ಪ್ರೇಮ ಸಂದೇಶವನ್ನು ಕಳಿಸುವ ಚಿತ್ರ ಬರೆದರೆ ಹೇಗಿರುತ್ತೆ ನೋಡೋಣ ಅಂದುಕೊಂಡು "ಎನ್ ಇಂಡಿಯನ್ ಪ್ರಿನ್ಸೆಸ್ ಕನ್ವರ್ಸಿಂಗ್ ವಿತ್ ಎ ಸ್ವಾನ್ ಇನ್ ಎ ಬ್ಯೂಟಿಫುಲ್ ಗಾರ್ಡನ್ " ಅಂತ ಟೈಪ್ ಮಾಡಿದೆ. ಸ್ಟೈಲ್ ಕೇಳಿತು. ರಿನೇಸಾನ್ಸ್ ಪೇಂಟಿಂಗ್ ಅಂತ ಹೇಳಿದೆ. ಎಂಭತ್ತು ಸೆಕೆಂಡುಗಳ ನಂತರ ಈ ಚಿತ್ರ ಮೂಡಿತು.

ಮೈಕ್ರೊಸಾಫ್ಟ್ ಬಿಂಗ್ ಇಮೇಜ್ ಕ್ರಿಯೇಟರ್ ಕೂಡಾ ಇನ್ನೊಂದು ಚಿತ್ರ ರಚಿಸೋ ಎ ಐ ಸಾಫ್ಟ್‌ವೇರ್.



ಇದನ್ನ ನೋಡ್ತಾ, ಪ್ರಾಮ್ಟ್ ನಲ್ಲಿ " ಜೂ ನಲ್ಲಿ ಒಬ್ಬ ಮಹಿಳೆ ಒಂದು ಸಿಂಹದ ಮರಿಯನ್ನ ನೋಡ್ತಾ ಇರ್ತಾಳೆ " ಅಂತ ಬರೆದೆ. ಅದು ಕೊಟ್ಟ ಚಿತ್ರ ಇಲ್ಲಿ ನೋಡಿ.

ಸಿಂಹದ ಮರಿ ಮತ್ತು ಮಹಿಳೆಯನ್ನು ಅದಲುಬದಲು ಮಾಡಿ ಕೊಟ್ಟಿದ್ದು ನೋಡಿ ಪರವಾಗಿಲ್ಲ. ಎ ಐ ಕೂಡ ತಪ್ಪು ಮಾಡೋದು ಸಾಧ್ಯ ಅಂತ ತಿಳಿಯಿತು.

ಕೊನೆಯದಾಗಿ ಚಾಟ್ ಜಿಪಿಟಿಯ ಸಹಾಯದಿಂದ ನಮ್ಮ ಹೊಸವರ್ಷದ ಸಂಚಿಕೆಗೆ ಒಂದು ತಮಾಷೆ ಕಾರ್ಟೂನ್ ಬರೆಸೋಣ ಅನ್ನಿಸಿತು.

" ನಮ್ಮ ನಗೆ ಮಾಸಪತ್ರಿಕೆಗೆ ಹೊಸವರ್ಷದ ಸಲುವಾಗಿ ಒಂದು ಕಾರ್ಟೂನ್ ಐಡಿಯಾ ಕೊಡುಕ್ಕಾಗುತ್ತಾ?" ಅಂತ ಕೇಳಿದೆ.

ಅದು " ಅಗತ್ಯವಾಗಿ " ಅಂತ ಹೇಳಿ ಒಂದು ಸ್ಕ್ರಿಪ್ಟ್ ಕೊಟ್ಟಿತು. ಆ ಸ್ಕ್ರಿಪ್ಟನ್ನ ನಮ್ಮ ವ್ಯಂಗ್ಯಚಿತ್ರಕಾರ ರಾಮ್ಕಿ ಬೆಳ್ಳೂರ್ ಗೆ ಕೊಟ್ಟು ಒಂದು ಚಿತ್ರ ಬರೆಸಿದೆ. ಇದನ್ನು ಈ ಸಂಚಿಕೆಯ ಕೊನೆಯ ಒಳ ರಕ್ಷಾಪುಟದಲ್ಲಿ ನೋಡಬಹುದು.

ಒಟ್ಟಿನಲ್ಲಿ ನಮ್ಮ ಬಳಗದ ಹೊಸ ಸೇರ್ಪಡೆ ಚಾಟ್‌ಜಿಪಿಟಿಗೆ ಸ್ವಾಗತ ಸುಸ್ವಾಗತ.

■

# ನಗುವಿನ ಮತಾಪು

**ಸುಕೇಶವ**

**ಅಂಬರದ ಅಂಗಳದಿ ಬೆಳಕಿನಾ ಛಾಪು**

**ರವಿತೇಜ ತಂದಿಹನು ಬೆಳ್ಳಿಯ ಮತಾಪು**

**ಬೆಳಕು ಬದುಕಿನ ಬಂಡಿಗೆ ಕೀಲೆಣ್ಣೆ**

**ನಗದೇ ಬದುಕಿದವ ನಿಜಕೂ ಮಂಕುದಿಣ್ಣೆ**

ಆಗಸದ ಅಂಗಳದಲ್ಲಿ ಬೆಳಕು ಝಗಮಗಿಸುತ್ತಿರುತ್ತದೆ. ಬೆಳಕಿಲ್ಲದೇ ಏನೂ ಆಗುವುದಿಲ್ಲ. ಆಗಸದ ಅಂಗಳದಿಂದ ನಮ್ಮ ಬದುಕಿನ ಅಂಗಳಕ್ಕೆ ಮೂಡಿಬರುವ ಬೆಳಕು, ಶಾಖ ನಿಜಕೂ ನಮ್ಮ ಬದುಕಿಗೆ ಆಧಾರವಾಗಿದೆ. ಬೆಳಕು ಅಂದರೆ ಬೆಳ್ಳಿ. ಬೆಳ್ಳಿ ಅಂದರೆ ಬೆಳಕು. ತೇನ ವಿನಾ ತೃಣಮಪಿನಚಲತಿ ಎನ್ನುವ ಮಾತು ನಮ್ಮ ರವಿತೇಜನಿಗೂ ಅನ್ವಯಿಸುತ್ತದೆ. ಬೆಳ್ಳಿಯ ಮತಾಪು ಎಂದರೆ ನಾವು ದೀಪಾವಳಿಯಂದು ಹಚ್ಚುವ ಮತಾಪಿನಿಂದ ಬಣ್ಣ ಬಣ್ಣದ ಬೆಳಕು ಮೂಡಿ ನಮ್ಮ ಮನಸ್ಸನ್ನು ಅರಳಿಸುತ್ತದೆ. ಹಾಗೆಯೇ ಸೂರ್ಯನ ಬೆಳಕೂ ನಮ್ಮಲ್ಲಿ ಬಣ್ಣ ಬಣ್ಣದ ಭಾವನೆಗಳನ್ನು ಅರಳಿಸುತ್ತದೆ. ರವಿತೇಜನ ಬೆಳಕು ಪ್ರತಿ ಜೀವಿಗೂ ಅವಶ್ಯಕ. ಹಾಗೆಯೇ ಬೆಳಕು ನಮ್ಮ ಬದುಕಿಗೆ ಕೀಲೆಣ್ಣೆ ಇದ್ದಂತೆ. ಹೇಗೆ ಕೀಲೆಣ್ಣೆ ಇಲ್ಲದೇ ಬಂಡಿ ಸಾಗುವುದು ಕಷ್ಟವೋ ಹಾಗೆ ಬೆಳಕು ಇಲ್ಲದಿದ್ದರೆ ನಮ್ಮ ಬದುಕಿನ ಬಂಡಿಯೂ ನಡೆಯುವುದು ಕಷ್ಟ. ಅಂತೆಯೇ ನಗು, ತಿಳಿ ಹಾಸ್ಯ, ಮಂದಹಾಸ, ಇವೆಲ್ಲವೂ ನಮ್ಮ ಬದುಕಿಗೆ ಕೀಲೆಣ್ಣೆ ಇದ್ದಂತೆ. ದಿನಂಪ್ರತಿ ನಗುವುದು, ನಗಿಸುವುದು ನಮ್ಮ ಕಾಯಕವಾಗಬೇಕು. ಹೇಗೆ ಸೂರ್ಯ ನಿರಂತರ ತನ್ನ ಬೆಳಕಿನಿಂದ ಜಗವನ್ನು ಬೆಳಗುತ್ತಾನೋ ಹಾಗೆ ನಾವೂ ನಮ್ಮ ನಗುವಿನ ಮನೋಭಾವದಿಂದ ನಗು ತರಿಸುವ ಮಾತುಗಳಿಂದ, ಮನ ಮುದಗೊಳಿಸುವ ಮಂದಹಾಸಭರಿತ ಸರಸ ಸಂಭಾಷಣೆಗಳಿಂದ ನಮ್ಮ ಬದುಕಿನ ಜೊತೆಗೆ ಇತರರ ಬದುಕನ್ನೂ ಬೆಳಕಾಗಿಸಬಹುದು. ನಮ್ಮ ವ್ಯಕ್ತಿತ್ವವನ್ನು ಮೇರೆತ್ತರಕ್ಕೆ ಕೊಂಡೊಯ್ಯಲು ಭಗವಂತ ನಮಗೆ ಕೊಟ್ಟಿರುವ ಅನೇಕ ಸಾಧನಗಳ ಪೈಕಿ ನಗುವೂ ಒಂದು. ನಗುವೇ ಪ್ರಧಾನ ಎಂದರೂ ಸರಿಯೇ. ಅದನ್ನು ನಾವು ಸದಾ ಸದುಪಯೋಗಪಡಿಸಿಕೊಳ್ಳೋಣ. ನಾವೂ ನಗೋಣ, ನಮ್ಮೊಡನಿರುವವರನ್ನೂ ನಗಿಸೋಣ, ನಗು ಇಲ್ಲದೇ ಬದುಕೇ ಇಲ್ಲ ಎನಿಸಿಬಿಡೋಣ. ಸದಾ ನನಗೆ ನನ್ನ ಸ್ವಂತಕ್ಕೆ, ನನ್ನ ಕುಟುಂಬಕ್ಕೆ ನಗದೇ ಇರಲಿ ಎಂದು ಹಾತೊರೆದುಕೊಂಡು ಬದುಕುವವರು ಮನವ ಅರಳಿಸಿ, ಹೃದಯ ಅರಳಿಸಿ ನಗಬಹುದು ಎನ್ನುವುದನ್ನೇ ಮರೆತಿರುತ್ತಾರೆ. ಅದಕ್ಕೆ ನಗದೇ ಬದುಕಿದವ ನಿಜಕ್ಕೂ ಮಂಕುದಿಣ್ಣೆ ಎನ್ನುವುದು. ನಗದು ಇದ್ದಾಕ್ಷಣ ನಗದೇ ಇರಬಾರದು ಎಂದೇನಿಲ್ಲ. ನಗದು ಇಲ್ಲದಿರುವಾಗಲೂ ನಮ್ಮ ಬದುಕಿನಲ್ಲಿ ನಗು ಇದ್ದು ನಮ್ಮನ್ನು ಇತರರು ನೋಡಿ ಅದು ನಗದು ಅಂದುಕೊಳ್ಳುವುದು ತಪ್ಪುತ್ತದೆ.

## ಭಾರ

**ಅವರವರ ಬದುಕು ಅವರವರಿಗೆ ಭಾರ**

**ಇರಲಿ ಅಷ್ಟಿಷ್ಟು ಮಂದಹಾಸದ ರಾಯಭಾರ**

**ಅಂತಕನ ಆಹ್ವಾನ ಬಂದಾಗಲೂ ಬೇಸರ**

**ಅತ್ತ ಸರಿಸಿ ಹರಿಸಿ ಒಂದಿಷ್ಟು ನಗೆಪೂರ**

ಬದುಕು ಯಾರಿಗೆ ಭಾರವಲ್ಲ ಹೇಳಿ. ಈ ಮಾತು ದಢೂತಿ ಆಸಾಮಿಗಳಿಗೆ ಮಾತ್ರ ಹೇಳಿದ್ದಲ್ಲ. ಎಲ್ಲವನ್ನೂ ನಾನೇ ಮಾಡುತ್ತಿದ್ದೀನಿ ನಾನೇ ಮಾಡಬೇಕು ಎನ್ನುವಂತಹ ಮನೋಭಾವ ಇರುವಂತಹ ಜನರನ್ನು ನಾವು ನೋಡಿದ್ದೇವೆ. ಅಂತಹವರು ಎಲ್ಲವನ್ನೂ ತಮ್ಮ ತಲೆಯ ಮೇಲೆ ಹಾಕಿಕೊಂಡು ಅದನ್ನೂ ಮಾಡಲಾಗದೇ ಇದನ್ನೂ ಮಾಡಲಾಗದೇ ಅಯ್ಯೋ ಇದೇನಪ್ಪಾ ಎಲ್ಲ ಭಾರವೂ ನನ್ನ ಮೇಲೆಯೇ ಬಿದ್ದಿದೆ ಎಂದು ಗೊಣಗುವುದನ್ನು ನಾವು ಕೇಳಿದ್ದೇವೆ. ಭಾರವಾಗದ ಬದುಕು ನಿಜಕ್ಕೂ ಒಳ್ಳೆಯದು. ಆದರೆ ಇಲ್ಲಿ ಮುಖ್ಯವಾದದ್ದು ಏನೆಂದರೆ ಭಾರವನ್ನು ನಾವೇ ಎಳೆದುಕೊಂಡರೂ, ಪರಿಸ್ಥಿತಿಯೇ ನಮ್ಮ ಮೇಲೆ ಹೊರೆಸಿದರೂ ಅದನ್ನು ನಿಭಾಯಿಸುವಾಗ ಮನದಲ್ಲಿ ನಗುವಿನ ಛಾಪು ಇದ್ದರೆ ಒಳ್ಳೆಯದು. ಒಬ್ಬ ಭಾರವಾದ ಮೂಟೆ ಹೊತ್ತು ಸಾಗುತ್ತಿದ್ದಾನೆ. ಆದರೆ ಅವನಿಗೆ ಆ ಭಾರ ತಿಳಿಯಬಾರದು ಎಂದರೆ ಅವನು ಇತರರೊಂದಿಗೆ ಮಧುರ ಮಾತುಗಳನ್ನಾಡುತ್ತಾ ಸಾಗುತ್ತಾನೆ. ಅದಕ್ಕೇ ನಾವು ಎಲ್ಲೇ ಇರಲಿ, ಹೇಗೇ ಇರಲಿ ಏನೇ ಮಾಡುತ್ತಿರಲಿ ನಮ್ಮ ಮುಖದಲ್ಲಿ ಮಂದಹಾಸ ಮೂಡಿಸುತ್ತಾ ಮಂದಹಾಸದ ಮುಖಭಾವಕ್ಕೆ ನಾವೇ ರಾಯಭಾರಿಗಳೇನೋ ಅನಿಸಿಬಿಡಬೇಕು. ಹೆಚ್ಚು ಜನರು ನಮ್ಮ ನಗುವಿನಿಂದಲೇ ನಮ್ಮನ್ನು ಗುರುತಿಸುವಂತಾಗಬೇಕು. ನಾವು ಎಷ್ಟೆಷ್ಟು ಬದುಕಿನಲ್ಲಿ ತೊಡಗಿಸಿ ಕೊಳ್ಳುತ್ತೇವೋ ಅಷ್ಟಷ್ಟು ಬದುಕು ನಮಗೆ ಭಾರವೇ. ಭಾರ ಹೊರುವುದರಲ್ಲೂ ನಮಗೆ ಉತ್ಸಾಹ ಆಸಕ್ತಿ ಉಲ್ಲಾಸ ಎಲ್ಲ ಇರಬೇಕು. ಆಗಲೇ ಬದುಕು ಹಗುರ ಮತ್ತು ಮಧುರ. ಎಲ್ಲ ಸಮಸ್ಯೆಗಳೂ ನನಗೇ ಬಂದು ಮೆಟ್ಟಿಕೊಂಡಿವೆ ಎಂದು ಬೇಸರಿಸಿಕೊಂಡರೆ ಬದುಕು ಶೂನ್ಯ. ಈ ದಿಶೆಯಲ್ಲಿ ನಮಗೆ ಆಸರೆಯಾಗುವುದು ಮಂದಹಾಸ. ನಮ್ಮ ಬದುಕನ್ನು ನಾವು ಎಷ್ಟು ಪ್ರೀತಿಸಬೇಕು ಎಂದರೆ ನಮಗೆ ಅಂತಕನ ಆಹ್ವಾನ ಬಂದು ನಡೀ ಇಲ್ಲಿಗೆ ನಿನ್ನ ಆಟ ಮುಗಿಯಿತು ಎಂದರೂ ಮುಖದಲ್ಲಿ ಮಂದಹಾಸ ಮೂಡಿಸಿಕೊಂಡೇ ತೆರಳುವಂತಿರಬೇಕು. ಸಾರಾಂಶ ಇಷ್ಟೇ ಏನೇ ಬರಲಿ ಧೈರ್ಯ ಇರಲಿ, ಏನೇ ಬರಲಿ ಉತ್ಸಾಹ ಇರಲಿ ಎನ್ನುವುದರ ಜೊತೆಗೆ ಏನೇ ಬರಲಿ ನಗು ಇರಲಿ, ಮಂದಹಾಸ ಮರೆಯಾಗದಿರಲಿ. ಎಲ್ಲ ಶಕ್ತಿಗಳಿಗಿಂತ ನಗುವಿನ ಶಕ್ತಿ ನಮಗೆ ಹೆಚ್ಚು ಉತ್ತೇಜನ ಕೊಡುತ್ತದೆ. ನಗು ನಮ್ಮ ಬದುಕನ್ನು ಎದುರಿಸುವ ಮಹತ್ತರವಾದ ಶಕ್ತಿಯಾಗಲಿ .

# ಮೆಚ್ಚುಗೆಯೆಂಬ ಮಾಯಾವಿ!

ಪ್ರಭಾಮಣಿ ನಾಗರಾಜ

ಎದ್ದ ತಕ್ಷಣವೇ ಬಂದ ಆ ಮೊದಲ ಕಾಲಿನಿಂದಲೇ ಎಂದಿನಂತೆ ಪತ್ರಿಕೆಯಲ್ಲಿ ನನ್ನದೊಂದು ಲೇಖನ ಬಂದಿದೆ ಎಂದು ತಿಳಿದದ್ದು. ಇತ್ತೀಚೆಗೆ ದಿನವಿಡೀ ಒಂದೂ ಕರೆಯೂ ಇಲ್ಲದೇ ಮನೆಯ ಯಾವುದೋ ಮೂಲೆಯಲ್ಲಿ ಮುದುರಿ ಮಲಗಿರುವ ನನ್ನ ಮೊಬೈಲ್‌ಗೆ ಹೀಗೆಯೇ ಒಮ್ಮೊಮ್ಮೆ ಜೀವ ಬಂದು ನನ್ನನ್ನು ಚುರುಕುಗೊಳಿಸಿಬಿಡುತ್ತದೆ. ದಿನದಲ್ಲಿ ಒಂದೋ ಎರಡೋ ಸಾರಿ ನಾನೇ ಪಾಪ ಎಂದು ಕನಿಕರಿಸಿ ಮಲಗಿದ ಮಗುವಿನ ಮುದ್ದು ಮೈಯನ್ನು ಮೃದುವಾಗಿ ನೇವರಿಸುವಂತೆ ಪ್ರೀತಿಯಿಂದ ಸವರಿ ಅದನ್ನು ವಿಚಾರಿಸಲು ಪ್ರಯತ್ನಿಸಿದರೂ ಅದು ಬಹುತೇಕ ರಚ್ಚೆಹಿಡಿದ ಕಂದ, 'ನಾನು ಹೋಮ್ ವರ್ಕ್‌ನೂ ಮಾಡಲ್ಲ, ಸ್ಕೂಲಿಗೂ ಹೋಗಲ್ಲ, ಟ್ಯೂಷನ್‌ಗೂ ಹೋಗಲ್ಲ.....' ಎನ್ನುವಂತೆ, ಅನ್‌ಫಾರ್ಚುನೇಟ್ಲೀ ವಾಟ್ಸಪ್ ಹ್ಯಾಸ್ ಸ್ಟಾಪ್ಡ್.......ಫೇಸ್ ಬುಕ್ ಹ್ಯಾಸ್ ಸ್ಟಾಪ್ಡ್........ ಕ್ರೋಮ್ ಹ್ಯಾಸ್ ಸ್ಟಾಪ್ಡ್...... ಎಂದು ಒಂದಾದ ನಂತರ ಒಂದರಂತೆ ತನಗೆ ತಾನೇ ಘೋಷಿಸಲಾರಂಭಿಸಿ ನನ್ನನ್ನು ಬಾಹ್ಯ ಜಗತ್ತಿನ ಸಕಲ ಸಂಪರ್ಕಗಳಿಂದಲೂ ವಂಚಿತಳನ್ನಾಗಿಸಿಬಿಡುತ್ತದೆ! ಒಮ್ಮೊಮ್ಮೆ ಅನ್‌ಫಾರ್ಚುನೇಟ್ಲೀ ಕಾಂಟ್ಯಾಕ್ಟ್ಸ್ ಹ್ಯಾವ್ ಸ್ಟಾಪ್ಡ್ ಎಂದೂ ಇತಿಶ್ರೀ ಹಾಡಿ ನಾನೆಷ್ಟು ಅನ್‌ಫಾರ್ಚುನೇಟ್ಲೀ ಎನ್ನುವುದನ್ನು ದೃಢಪಡಿಸಿ ಪುನಃ ಬೆಚ್ಚಗೆ ಹೊದ್ದು ಮಲಗಿಯೂ ಬಿಟ್ಟರೆ ಅಲ್ಲಿಗೆ ಮುಗಿಯಿತು. ಆದರೆ ಈ ರೀತಿಯ ಮೆಚ್ಚುಗೆಯ ಕರೆಗಳು ಬರಲಾರಂಭಿಸಿದಾಗ ಮಾತ್ರ ಸಡಗರದಿಂದ ಜಡತ್ವವನ್ನೊದ್ದು ಮೈಕೊಡವಿ ಮೇಲೆದ್ದು ಅತ್ಯಂತ ವಿಧೇಯ ವಿದ್ಯಾರ್ಥಿಯಂತೆ ಪ್ರತಿ ಕರೆಯನ್ನೂ ಪ್ರೀತಿಯಿಂದ ಅರುಹಲಾರಂಭಿಸುತ್ತದೆ! ಬೆಳಗಿನಿಂದ ಒಂದರೊಳಗೊಂದರಂತೆ ಓವರ್ ಲ್ಯಾಪ್ ಆಗಿ ಬರಲಾರಂಭಿಸಿದ ಕರೆಗಳಿಂದ ನಗುವುದೋ ಅಳುವುದೋ ನೀವೇ ಹೇಳಿ ಎನ್ನುವಂತಿರುವಾಗಲೇ ಹಿಂದಿನ ದಿನ ಸಂಜೆ ತಾನೇ ನಡೆದ ನಮ್ಮ ತಿಂಗಳ ಸಾಹಿತ್ಯ ಕಾರ್ಯಕ್ರಮದಲ್ಲಿ ಲೇಖನದೊಂದಿಗೆ ಪ್ರಕಟಿಸುವ ಮೊಬೈಲ್ ಸಂಖ್ಯೆಯಿಂದ ಏನೆಲ್ಲಾ ಪಜೀತಿಯಾಗುತ್ತದೆ ಎನ್ನುವ ಬಗ್ಗೆ ನಡೆದ ಚರ್ಚೆಯಲ್ಲಿ ನಾನೂ ನನ್ನ ಹಿರಿತನದ ಅನಿವಾರ್ಯ ಬೆನಿಫಿಟ್ ಪಡೆದು ಎಲ್ಲರಿಗೂ ನನಗಾದ ಈ ಮುಂಚಿನ ಕಿರಿಕಿರಿ ಅನುಭವಗಳನ್ನು ಹೇಳಿ, ಅದಕ್ಕೆ ಪರಿಹಾರೋಪಾಯವನ್ನೂ ಬಹಳ ಆಢ್ಯತೆಯಿಂದಲೇ ಸೂಚಿಸಿದ್ದೆ. ಆಗ ನನ್ನ ಸಾಹಿತ್ಯಲೋಕದ ಸಹಭಾಗಿನಿಯರು ಕ್ಲಿಕ್ಕಿಸಿ ಕಳುಹಿಸಿದ ಫೋಟೋಗಳನ್ನೆಲ್ಲಾ ಫೇಸ್ ಬುಕ್, ವಾಟ್ಸ್ಯಾಪ್‌ಗಳಲ್ಲೆಲ್ಲಾ ಹಾಕುವ ಸಡಗರದಲ್ಲಿರುವಾಗಲೇ ಮತ್ತೊಮ್ಮೆ ಇದೇ ವ್ಯೂಹದೊಳಗೆ ಸೆಳೆದುಕೊಂಡಂತಾಯಿತಲ್ಲಾ ಎಂದುಕೊಳ್ಳುವಾಗಲೇ ಗತನೆನಪುಗಳು ಸರಸರನೆ ನನ್ನ ಮನಃಪಟಲದ ಮೇಲೆ ಸರಿಯಲಾರಂಭಿಸಿದವು.....

ನಮ್ಮ ಅನುಭವಗಳ ಕಣಜ ತುಂಬಿದಷ್ಟೂ ತುಳುಕದ, ಮೊಗೆದಷ್ಟೂ ಬರಿದಾಗದ ವಿಶಿಷ್ಟ ಅಕ್ಷಯ ಪಾತ್ರೆ ಎನ್ನುವುದಕ್ಕೆ ಮತ್ತೊಂದು ಪುರಾವೆ ಸಿಕ್ಕಂತಾಯಿತೇನೋ ಎನ್ನುವಂತಿತ್ತು ಆ ಘಟನೆಗಳ ಸರಮಾಲೆ. ಒಂದು ಅನುಭವವು ಮತ್ತೊಂದು ಅನುಭವಕ್ಕೆ ಕೈಮರವಾಗುತ್ತದೆ ಎನ್ನುವಂತೆ.....ಎಂದು ಘನಘೋರ ರೀತಿಯಿಂದಲೇ ತೆರೆದುಕೊಳ್ಳಲಾರಂಭಿಸುವ ನನ್ನ ನೆನಪುಗಳ ಕಥನ ಹೀಗಿದೆ:

ಕೆಲವು ದಿನಗಳ ಹಿಂದೆ ಪತ್ರಿಕೆಯೊಂದರಲ್ಲಿ ಬಂದ ಪುಟ್ಟ ಅನುಭವ

ಲೇಖನವೊಂದನ್ನು ಓದಿದವರೊಬ್ಬರು ಲೇಖನದೊಡನೆ ಪ್ರಕಟಿಸಿದ್ದ ನನ್ನ ಮೊಬೈಲ್ ಸಂಖ್ಯೆಯನ್ನು ಬಳಸಿಕೊಂಡು ನನಗೆ ಕರೆ ಮಾಡಿದರು. ಆ ಪುಟ್ಟ ಲೇಖನದಲ್ಲಿ ಒಬ್ಬರು ಅಜ್ಜಿಯ ಕರುಣಾಜನಕ ಅಸಹಾಯಕ ಸ್ಥಿತಿಯ ಬಗ್ಗೆ ಬರೆದಿದ್ದೆ. ಅದು ತಮ್ಮ ಮನಸ್ಸಿಗೆ ಎಷ್ಟೊಂದು ನೋವುಂಟು ಮಾಡಿತೆಂದರೆ ತಮಗೆ ನನ್ನೊಡನೆ ಮಾತನಾಡದೇ ಇರಲು ಸಾಧ್ಯವಾಗಲೇ ಇಲ್ಲವೆಂದು ಮಾತಿಗಾರಂಭಿಸಿದ ಆಕೆ ಸಹಜವಾಗಿಯೇ ನಮ್ಮ ಮನೆಯ ವಿವರವನ್ನೂ ಪಡೆದುಕೊಂಡರು. ನನ್ನನ್ನು ಫೋನಿನಲ್ಲಷ್ಟೇ ಮಾತನಾಡಿಸಿದ್ದರಿಂದ ತನಗೆ ಸಮಾಧಾನವಾಗುತ್ತಿಲ್ಲವೆಂದೂ ಎದುರಿಗೇ ಕುಳಿತು ಮಾತನಾಡಬೇಕೆಂದೂ 'ಕಾಕರಾಜ ನೀನು ನಮ್ಮ ವನಕೆ ಬಹಳ ದಿನಕೆ ಬಂದೆ ನಿನ್ನ ಕಂಡು ನನ್ನ ಮನಕೆ ಹರುಷವಾಯಿತು...' ಎಂದು ಕಪಟಿ ನರಿಯು ಕಾಗೆಯನ್ನು ಉಬ್ಬಿಸಿದಂತೆ ಪರಿಪರಿಯಾಗಿ ಹೊಗಳಲಾರಂಭಿಸಿದರು. ಅಮಾವಾಸ್ಯೆಗೋ ಹುಣ್ಣಿಮೆಗೋ ಒಮ್ಮೆ ಪ್ರಕಟವಾಗುವ ನನ್ನ ಬರಹಕ್ಕೆ ಇಂಥಾ ಪ್ರಶಂಸೆಯೇ ಎನಿಸಿತು! ಆ ಲೇಖನದ ಶೀರ್ಷಿಕೆಯೇ(ಏಕೆ ಹೀಗೆ?) ತಮ್ಮನ್ನು ಚಿಂತನೆಗೆ ಹಚ್ಚಿತು ಎಂದೂ ಹೇಳಿದರು! ಅದರ ಬಗ್ಗೆ ಎಳೆಎಳೆಯಾಗಿ ವಿಶ್ಲೇಷಿಸಿ ವೃದ್ಧರ ಸಮಸ್ಯೆಗಳಿಗೆ ಏನಾದರೂ ಪರಿಹಾರವನ್ನು ಮಾಡಲೇಬೇಕು, ಆ ಬಗ್ಗೆ ನಿಮ್ಮೊಂದಿಗೆ ಮಾತನಾಡಲು ನಿಮ್ಮ ಮನೆಗೇ ಬರುತ್ತೇನೆ ಎಂದೂ ಆತ್ಮೀಯತೆಯ ಮಳೆಗರೆದರು. ಅವರ ಈ ಮಟ್ಟದ ಆಗ್ರಹ ನನಗೆ ಕಸಿವಿಸಿಯುಂಟುಮಾಡಿದರೂ ಬರಹಗಳು ಪ್ರಕಟವಾದಾಗ ಓದುಗರಿಂದ, ಹಿಂದಿನ ದಿನಗಳಲ್ಲಿಯಾದರೆ ಪತ್ರಗಳು, ನಂತರ ಫೋನು, ಇತ್ತೀಚೆಗೆ ಈಮೇಲ್, ಬ್ಲಾಗ್, ಫೇಸ್‌ಬುಕ್, ವಾಟ್ಸ್ಯಾಪ್.....ಗಳಲ್ಲಿನ ಪ್ರತಿಕ್ರಿಯೆಗಳು ಇವೆಲ್ಲಾ ಸಾಮಾನ್ಯವಾಗಿ ಬರುತ್ತಿದ್ದುದರಿಂದ ಸಹಜವಾಗಿಯೇ ಸ್ವೀಕರಿಸಿದೆ. ವೃದ್ಧರ ಬಗೆಗಿನ ಆಕೆಯ ಕಾಳಜಿ ಮೆಚ್ಚುವಂತಹದಾಗಿತ್ತು. ಇದಾದ 2–3ದಿನಗಳಲ್ಲಿಯೇ ಇನ್ನೂ ಬೆಳ್ಳಂಬೆಳಿಗ್ಗೆಯೇ ನಮ್ಮತ್ತೆ ಹೇಳುವಂತೆ ಕೋಳಿ ಕೊಕ್ ಅನ್ನೋಹೊತ್ತಿಗೇ ಆಕೆ ಫೋನಾಯಿಸಿ ಯಾವುದೋ ಕಾರ್ಯನಿಮಿತ್ತ ನಮ್ಮ ಏರಿಯಾಕ್ಕೇ ಬಂದಿರುವುದಾಗಿ ತಿಳಿಸಿ 'ನಿಮ್ಮ ಮನೆಯ ಸಮೀಪದಲ್ಲೇ ಇದ್ದೇನೆ. ಹೇಗೆ ಬರುವುದು ಹೇಳಿ,' ಎಂದು ಅಚ್ಚರಿಯನ್ನುಂಟು ಮಾಡಿದರು. ಕೆಲವೇ ಕ್ಷಣಗಳಲ್ಲಿ ಅವರು ತಮ್ಮ ಗೆಳತಿಯೊಂದಿಗೆ ಬಂದವರೇ ಸೋಫಾದ ಮೇಲೆ ಆಸೀನರಾಗಿ ನನಗೆ ಸಖೇದಾಶ್ಚರ್ಯವನ್ನುಂಟು ಮಾಡುವಂತೆ ವರ್ತಿಸಲಾರಂಭಿಸಿದರು. ನನ್ನ ಆತಿಥೇಯ ಪ್ರಜ್ಞೆ ಎಚ್ಚೆತ್ತು ಎಂದಿನ 'ಬಾಬಿಬಾ' ಆತಿಥ್ಯಕ್ಕೆ ಮುಂದಾಗಿ ಬಾಳೆಹಣ್ಣು ಮತ್ತು ಬಿಸ್ಕತ್ತನ್ನು ಕೊಟ್ಟು ಬಾದಾಮಿಹಾಲು ತಯಾರಿಸಲು ಹೊರಟೆ. ಆಕೆ, 'ನಮಗೆ ಕುಡಿಯಲು ಏನೂ ಬೇಡ. ಬಿಸಿನೀರು ಕೊಡಿ ಸಾಕು' ಎಂದು ಸ್ವಲ್ಪ ಆಗ್ರಹಿಸುವಂತೆಯೇ ಹೇಳಿದರು. ಬಿಸಿನೀರಿಗೆ ತಾವೇ ತಂದಿದ್ದ ಗ್ರೀನ್ ಟೀ (ಸ್ಯಾಷೆಯಿಂದ) ಹಾಕಿಕೊಂಡು ಕುಡಿದು ಪೊರೆಕಳಚಿದ ಹಾವಿನಂತೆ ಸರಸರನೆ ತಮ್ಮ ಕೈ ಚೀಲದಿಂದ ನನ್ನ ಲೇಖನವು ಪ್ರಕಟವಾಗಿದ್ದ ಪತ್ರಿಕೆಯ ತುಣುಕನ್ನು ತೆಗೆದು ಅದರ ಕುರಿತು ಭಾವೋದ್ವೇಗದಿಂದ ಮಾತನಾಡಲಾರಂಭಿಸಿದರು, 'ಈ ಕಷ್ಟಗಳು ಏಕೆ ಬರುತ್ತವೆ? ಕೆಲವರಿಗೇ ಏಕೆ ನೋವು ಉಂಟಾಗುತ್ತದೆ? ಸಾವು ಎಂದರೇನು?......... ಎಲ್ಲವಕ್ಕೂ ಉತ್ತರ ಇಲ್ಲಿದೆ,' ಎಂದು ತಮ್ಮ ಟ್ಯಾಬನ್ನು ತೆಗೆದು ಒಂದು ವಿಡಿಯೋ ಪ್ಲೇ ಮಾಡಿದರು. 'ಎಲ್ಲವಕ್ಕೂ ಕಾರಣ ಮತ್ತು ಪರಿಹಾರ ಈ ...... ರಲ್ಲಿದೆ,' ಎಂದು ಆ ...ಸಂಸ್ಥೆಯ ಬಗ್ಗೆ ಹೇಳಲಾರಂಭಿಸಿದರು! ಬ್ರಿಟಿಷರು ಭಾರತದೊಳಗೆ ಉಪಾಯವಾಗಿ ನುಸುಳಿದರು ಎಂದು ಶಾಲೆಯಲ್ಲಿ ಓದಿದ್ದರ ನೆನಪಾಯಿತು. ಇದು ಪ್ರಚಾರ ಪ್ರಿಯತೆಯಲ್ಲದೇ

ಬೇರೇನೂ ಅಲ್ಲ ಎನ್ನುವುದು ನನ್ನ ಮಡ್ಡ ತಲೆಗೂ ಹೊಳೆಯಿತು. ಹಣ, ಜೀವನಾಗತ್ಯ ವಸ್ತುಗಳು ಮುಂತಾದವುಗಳ ಆಮಿಶವೊಡ್ಡಿ ತಮ್ಮತ್ತ ಸೆಳೆದುಕೊಳ್ಳುವುದರ ಬಗ್ಗೆ ಕೇಳಿದ್ದೆ. ಆದರೆ ಹೀಗೆ ನನ್ನಂಥಾ ಬಡಪಾಯಿ ಲೇಖಕರ ಬರಹಗಳನ್ನು ಪ್ರಶಂಸಿಸಿ, ಹೊಗಳಿಕೆಯ ಹೊನ್ನಶೂಲಕ್ಕೇರಿಸಿ ತಮ್ಮ ಕಾರ್ಯ ಸಾಧನೆ ಮಾಡಿಕೊಳ್ಳುವ ಹೊಸ ಜಾಲಕ್ಕೆ ನನ್ನಂಥವರನ್ನು ಮಿಕವಾಗಿಸುತ್ತಿದ್ದಾರಲ್ಲಾ! ನಾನು ನನ್ನ ಖಚಿತ ಅಭಿಪ್ರಾಯವನ್ನು ತಿಳಿಸಿ, 'ಒಂದು ಸೆಲ್ಫಿ ಪ್ಲೀಸ್,' ಎಂದು ಫೋಟೋ ತೆಗೆಯಲು ಸಿದ್ಧಳಾದಾಗ ಮೆಲ್ಲನೆ ಜಾಗ ಖಾಲಿಮಾಡಿದರು. ಇದಾದ ಕೆಲವೇ ದಿನಗಳ ನಂತರ ಒಂದು ಅನ್‌ನೋನ್ ನಂಬರ್‌ನಿಂದ ಕಾಲ್ ಬಂತು. ಪುನಃ ಆಕೆಯೇ, 'ನಮ್ಮದೊಂದು ವೆಬ್ ಸೈಟ್ ಇದೆ,.......' ಎಂದು ಮತ್ತೆ ತಮ್ಮ ಹಳೆಯ ಶೈಲಿಯಲ್ಲಿಯೇ, '........ಕೆಲವರಿಗೇಕೆ ನೋವು ಉಂಟಾಗುತ್ತದೆ? ಸಾವು ಎಂದರೇನು?.........'ಮುಂತಾಗಿ ತಮ್ಮ ಓಲ್ಡ್ ಪ್ಲೇಟನ್ನೇ ರೀಪ್ಲೇ ಮಾಡಿದರು! ನಮ್ಮ ಮನೆಗೆ ನೀವು ಈಗಾಗಲೇ ಬಂದಿದ್ದಿರಿ ಎಂದರೆ ಆಕೆಗೆ ನೆನಪೇ ಇಲ್ಲ! ಮತ್ತೊಮ್ಮೆ ಈ ಮೊದಲಿನಂತೆಯೇ ನನ್ನ ವಿವರವನ್ನು ನನ್ನಿಂದಲೇ ಪಡೆಯುವ ಯತ್ನ ನಡೆಸಿದರು!

ಈಗ ಮತ್ತೊಮ್ಮೆ ಫೋನು, ಮೆಸೇಜು, ವಾಟ್ಸ್ಯಾಪು.....ಗಳೆಂಬ ಬಾಹ್ಯ ಪ್ರಪಂಚದ ಗೊಡವೆಯೇ ಬೇಡವೆಂದು ಮುಷ್ಕರಹೂಡಿ ನಿರ್ಲಿಪ್ತತಾ ಭಾವದಲ್ಲಿದ್ದ ನನ್ನ ಮೊಬೈಲೂ ಗರಿಗೆದರಿ ಕಿವಿನಿಮಿರಿಸಿ ಜಾಗರೂಕವಾಗಿಬಿಟ್ಟಿದೆ!

ಪ್ರತಿಕ್ರಿಯೆಯ ಮೂಲಕ ತಮ್ಮ ಮೆಚ್ಚುಗೆಯನ್ನು ತಿಳಿಸಿ ಪ್ರೋತ್ಸಾಹಿಸುವ ಸಹೃದಯರಿಗೆ ನನ್ನ ಅನಂತ ನಮನಗಳು. ಆದರೆ... ಲೇಖನದ ಹೊಗಳಿಕೆಯಿಂದಲೇ ಪ್ರಾರಂಭವಾಗುವ ಕೆಲವರ ಪ್ರತಿಕ್ರಿಯೆ ಎತ್ತೆತ್ತಲೋ ದಾರಿತಪ್ಪಿ ಹೊರಡುವುದೇ ಗೊಂದಲ. ಕೆಲವಂತೂ ಸೈಟ್ ಮಾರಾಟಕ್ಕಿದೆ ಸಂಪರ್ಕಿಸಿ, ಭವಿಷ್ಯ ಕೇಳಲು, ಜಾತಕ ಬರೆಸಲು ನನಗೇ ಕಾಲ್ ಮಾಡಿ, ಹಪ್ಪಳ–ಸಂಡಿಗೆ–ಉಪ್ಪಿನಕಾಯಿಗೆ ಈ ನಂಬರ್‌ಗೆ ರಿಂಗ್ ಕೊಡಿ ಮುಂತಾದ ಜಾಹಿರಾತುಗಳ ಮಹಾಪೂರ,.... ಒಮ್ಮೊಮ್ಮೆ ಕೆಲವರು ಅತ್ಯುತ್ಸಾಹದಲ್ಲಿ ನನ್ನ ವೈಯಕ್ತಿಕ ವಿವರಗಳನ್ನೇ ಪಡೆಯಲು ಮುಂದಾಗುವುದಿದೆ. 'ನಾನೀಗ ರಿಟೈರ್ಡ್....' ಎಂದು ಪ್ರವರಾರಂಭ ಮಾಡುವಾಗಲೇ ಅತ್ತಿಂದ ಕೇಳಿಬರುವ ಕಾಲ್ ಕಟ್ ಆದ ಸದ್ದು ಮಾತನಾಡುತ್ತಿರುವವರ ಮನಃಸ್ಥಿತಿಗೆ ಹಿಡಿದ ಕನ್ನಡಿಯಾಗಿರುತ್ತದೆ. ಬಹುತೇಕ ಸಂದರ್ಭಗಳಲ್ಲಿ ನಿವೃತ್ತಳು ನಾನು ಎನ್ನುವುದೇ ನನಗೆ ಶ್ರೀರಕ್ಷೆ! ಆದರೂ... ಇತ್ತೀಚೆಗೆ ಬಂದ ಒಂದು ಮೆಸೇಜ್, 'ನನಗೀಗ 33ವರ್ಷ, ನನಗೆ ಅಣ್ಣ, ಅಕ್ಕ, ತಮ್ಮ ಎಲ್ಲಾ ಇದಾರೆ. ಆದರೆ ತಂಗಿ ಇಲ್ಲ. ನೀವು ನನ್ನ ತಂಗಿ ಆಗಿ ಪ್ಲೀಸ್!' ಎನ್ನುವುದು ನನಗೆ ಅಚ್ಚರಿಯನ್ನೇ ಉಂಟುಮಾಡಿತು. ಇವರು ಈ ಮೊದಲೇ ನನ್ನೊಂದಿಗೆ ಮಾತನಾಡಿ ನನ್ನ ಧ್ವನಿಯಿಂದ ಮಿಸ್‌ಲೀಡ್ ಆದವರು ಇರಬಹುದೇನೋ ಎಂದುಕೊಂಡು ಎಂದಿನಂತೆ ನಾನು ಪ್ರತಿಕ್ರಿಯಿಸದೇ ಇದ್ದಾಗ ಅತ್ತಿಂದ ಪರಿಪರಿಯಾಗಿ ಪಿರಿಪಿರಿಯಾಗಲಾರಂಭಿಸಿತು. ಆತನಿಗೆ, 'ನೀವು ನನ್ನ ಅರ್ಧವಯಸ್ಸಿನವರಪ್ಪಾ...,' ಎಂದು ಪ್ರತಿಕ್ರಿಯಿಸಬಹುದಾದ ಘನತೆಯನ್ನು ದಯಪಾಲಿಸಿದ, ಆಹಾ ನನ್ನ ನಿವೃತ್ಯಾನಂದದ ಸೊಬಗೇ! ಏನಾದರಾಗಲಿ ತನ್ನನ್ನು ತಾನು ಬಚ್ಚಿಟ್ಟುಕೊಂಡು ತನ್ನ ಸುಮಧುರ ಗಾನದಿಂದಲೇ ಪ್ರಖ್ಯಾತವಾಗುವ ಕೋಗಿಲೆಯಂತಿದ್ದರೆ ಎಷ್ಟು ಚೆನ್ನ ಎಂದುಕೊಂಡರೂ ನಮ್ಮ ಸ್ಥಳೀಯ ಪ್ರತಿಭೆ ಕಾಕರಾಜನಂತಾಗಿರುವ ನನ್ನ ಪಾಡಿಗೆ ನಾನೇ ಸ್ವಾನುಕಂಪಿಸುವ ಸ್ಥಿತಿಯುಂಟಾಗಿದೆ ಎಂದು ಕನ್‌ಫ್ಯೂಜನ್ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ! ■

## ಪದಕುಲುಮೆ

✍ಎಸ್ ಎನ್ ಗಣನಾಥ

**ನವವಿವಾಹಿತ/ತೆ :** ಒಂಬತ್ತು ಮದುವೆ ಮಾಡಿಕೊಂಡವನು/ಳು

**ಜಾಬವಂತ :** ಉದ್ಯೋಗ ಪಡೆದವನು

**ವಿವಾದ್ಯ :** ಸಂಗೀತ ವಾದ್ಯಗಳ ಕುರಿತಾದ ಜಗಳ

**ಜ್ಯೋತಿರ್ವರ್ಷ :** ಬೆಳಕಿನ ಮಳೆ. ಸಿಕ್ಕಾಪಟ್ಟೆ ದೀಪಗಳನ್ನು ಹಾಕಿರುವುದು.

**ಕೃಪಣ :** "ಕೃ" ಸರಿಯೋ? "ಕ್ರು" ಸರಿಯೋ? ಎನ್ನುವ ಬಗ್ಗೆ ಕಟ್ಟುವ ಬೆಟ್

**ವಿಲಾಸಫಿ :** ಮೋಜು ಉಡಾಯಿಸುವವರ ಫಿಲಾಸಫಿ

**ನೀರಾಕರಣೆ :** ಒಂದು ರಾಜ್ಯ ಇನ್ನೊಂದು ರಾಜ್ಯಕ್ಕೆ ನೀರು ಬಿಡಲು ಒಪ್ಪದಿರುವುದು

**ಮೇಯರ್ ಪತ್ನಿ ಹೇಳಿದ್ದು:** ಪತಿಯೇ ಪುರದೈವ

**ಬ್ರಾಂಡ್ ಮೈಡೆಡ್ :** ಕೇವಲ ಬ್ರಾಂಡೆಡ್ ವಸ್ತುಗಳನ್ನೇ ಕೊಳ್ಳುವ ಹೈ-ಫೈ ಗ್ರಾಹಕರು

**ವಿಕಿಪೀಡಿತ :** ಎಲ್ಲದಕ್ಕೂ ವಿಕಿಪೀಡಿಯಾ ಬಳಸಿ ಬಳಸಿ ಅದನ್ನೇ ಗೀಳಾಗಿಸಿಕೊಂಡವರು

**ಕೀಡಾ ಮನೋಭಾವ :** ಕೀಟಗಳಂತೆ ವರ್ತಿಸುವುದು

**ಅಪಾತ್ರ ನಾದ :** ಸಂಗೀತ ಗೊತ್ತಿಲ್ಲದವರ ಎದುರು ಹಾಡಬೇಕಾದ ಕರ್ಮ

**ಪ್ರೂಫ್ ರೀಡರ್:** ಜಾಮಿಟ್ರಿ ಪುಸ್ತಕಗಳನ್ನು ಓದುವವರು

**ಕಾಮಾತುರ :** ಪೂರ್ಣವಿರಾಮದ ಬದಲು ಗಡಿಬಿಡಿಯಲ್ಲಿ ಅರ್ಧವಿರಾಮ ಚಿಹ್ನೆ ಹಾಕುವ ಆಸಾಮಿ.

**ಅಪರಿಚೀತಾ:** ಊರೊಳಗೆ ಬಂದ ಹೊಸ ಚಿರತೆ.

**ವಿಗ್ನಸಂತೋಷಿ:** ಇವನು ವಿಗ್ ಹಾಕ್ಕೊಳ್ತಾನೆ ಅಂತ ಎಲ್ಲ ಕಡೆ ಟಾಂಟಾಂ ಮಾಡಕೊಂಡ್ ಬರುವ ತರಲೆ ಗೆಳೆಯ.

**ಕೋರ್ಟ್ ನಿಂದನೆ:** ಟೆನಿಸ್ ಆಟದಲ್ಲಿ ಸೋತವರು ಸರ್ಫೇಸ್ ಸರಿಯಿಲ್ಲ, ಅದಕ್ಕೇ ಸೋತೆ ಎಂದು ನಿಂದಿಸುವುದು

**ಜಡ್ಡಿದ್ದವನೇ ದೊಡ್ಡಪ್ಪ :** ಹೈಟೆಕ್ ಹಾಸ್ಪಿಟಲ್‌ಗಳ ಟ್ಯಾಗ್ ಲೈನ್

**ಪ್ರಕಾಂಡ ಪಂಡಿತ:** ಪ್ರಥಮ ಕಾಂಡ ಕಲಿತು ದ್ವಿತೀಯ ಕಾಂಡಕ್ಕೆ ಹೋಗಲು ಉತ್ಸುಕನಾಗಿರುವ ವಿದ್ಯಾರ್ಥಿ

**ಮಾತಂಗಿ :** ಚಿಕ್ಕಮ್ಮ

**ಕಾಡುವಾಸಿ :** ಇವನ ಪ್ರಕಾರ ಊರಿಗಿಂತ ಕಾಡು ಬೆಟರ್

**ತೃತೀಯ ಲುಂಗಿ :** ಎರಡೇ ಲುಂಗಿ ಇದ್ದವರು ತಂದ ಹೊಸ ಲುಂಗಿ

**ನಾಷ್ಟಾಲ್ಜಿಕ್ :** ನಾವು ಚಿಕ್ಕವರಿದ್ದಾಗ ಬೆಳಗಿನ ತಿಂಡಿ ಎಷ್ಟೊಂದು ಚೆನ್ನಾಗಿರುತ್ತಿತ್ತುಎಂದು ಹಲುಬುವುದು. ■

# ಕಲ್ಲೇಶಿಯೂ... ತಿಪ್ಪಿಯೂ... ಸಂಧಾನವೂ!

ಲತಾ ಹೆಗಡೆ

ಆಹಾ...! ಅದೆಷ್ಟು ಚೆಂದದ ಸುಂದರಿ...! ಹಾಲ್ಬಣ್ಣದ ದಂತದ ಬೊಂಬೆಯೇ ಹೌದು... ಅದೋ ಅಲ್ಲಿವಳನ್ನು ಮೀರಿಸುವ ಮತ್ತೊಬ್ಬಳೂ ಇದ್ದಾಳಲ್ಲ? ಅವಳಂತೂ ಕೆತ್ತಿಟ್ಟ ಶಿಲಾಬಾಲಿಕೆಯೇ ಸೈ... ಹೆಚ್ಚೂ ಕಡಿಮೆ ದೀಪಿಕಾ ಪಡುಕೋಣೆಯ ನಿಲುವು, ಮೈ ಮಾಟ... ಆದರೆ ದಂತವರ್ಣದ ತಿದ್ದಿ ತೀಡಿದಂತಹ ಆ ಮುಖಾರವಿಂದಕ್ಕೆ ಯಾರನ್ನೂ ಹೋಲಿಸುವಂತೆಯೇ ಇಲ್ಲ... ಇನ್ನು ಗಾಳಿಗೆ ಹಾರಾಡುತ್ತಿರುವ ಆ ದಟ್ಟ, ನೀಳ ಕೇಶರಾಶಿಯೋ...ಬಾಪ್‌ರೇ! ನಾನೆಲ್ಲಿದ್ದೇನೆ...ಇದೇನಾದರೂ ಸ್ವರ್ಗವಿರಬಹುದೇ? ಖಂಡಿತಾ ಹೌದು, ನೆಲವೆಂಬುದಂತೂ ಕಾಣುತ್ತಲೇ ಇಲ್ಲ... ಕೆಳಗೆ, ಅಕ್ಕಪಕ್ಕ, ಎಲ್ಲೆಲ್ಲೂ ರೇಷ್ಮೆಯಂತಹ ಹಿಂಜಿದ ಹತ್ತಿಯಂತಹದ್ದು ಹರಡಿದೆಯಲ್ಲ... ಮತ್ತೆ ನಾನಂತೂ ಗಾಳಿಯಲ್ಲಿ ತೇಲುತ್ತಿದ್ದೇನೆ! ಅಂದಹಾಗೆ ನಾನೇಕೆ ಇಲ್ಲಿದ್ದೇನೇ? ನಾನೇನಾದರೂ ಸತ್ತಿರಬಹುದೇ? ನನಗೇ ಗೊತ್ತಿಲ್ಲದಂತೆ ಸತ್ತದ್ದು ಯಾವಾಗ? ಸತ್ತಿದ್ದೀನೋ ಬದುಕಿದ್ದೀನೋ ಒಟ್ಟಿನಲ್ಲಿ ವಜ್ರಾದಪಿ ಕಠೋರಾಣಿಯಂತಿರುವ ಹೆಂಡತಿ ಕಲಾರಾಣಿ ಅಲ್ಲಲ್ಲಾ... ಕಲಾವತಿ; ಕೋಳೀಗೂಡಿನಂತಹ ಮನೆಗಿಂತ ಪರಮಾನಂದವೀಯುತ್ತಿರುವ ಈ ಸ್ಥಳವೇ ಅದ್ಭುತವಾಗಿದೆ, ಯಾವುದಕ್ಕೂ ಮೋಡಿ ಮಾಡಿದ ಸುಂದರಿಯನ್ನೊಮ್ಮೆ ಕೇಳಿ ಕನ್ಫರ್ಮ್ ಮಾಡಿಕೊಳ್ಳುವುದು ಒಳಿತು, ಅದೇ ನೆಪದಲ್ಲಿ ಮಾತಾಡಿಸಿದಂತಾಗುತ್ತದೆ ಕೂಡ...

"ಎಲೈ ಸುಂದರಿಯೇ! ನೀನ್ಯಾರು? ಇದು ಯಾವ ಸ್ಥಳ? ನಾನೇಕೆ ಇಲ್ಲಿದ್ದೇನೆ?"

"ಎಲವೋ ನರೋತ್ತಮ...! ಇದೇ ಸ್ವರ್ಗ... ನಾವೆಲ್ಲರೂ ಅಪ್ಸರೆಯರು. ನಾನು ರಂಭೆ... ಮತ್ತವಳು ತಿಲೋತ್ತಮೆ. ಊರ್ವಶಿ, ಮೇನಕೆಯರು ಇಂದ್ರನ ಸೇವೆಯಲ್ಲಿ ನಿರತರಾಗಿದ್ದಾರೆ. ಹೇ ಪುರುಷ ಪುಂಗವ! ನಿನಗೇನು ಸೇವೆಗೈಯಬೇಕೆಂದು ಹೇಳುವಂಥವನಾಗು... ಶಿರಸಾ ಪಾಲಿಸುತ್ತೇನೆ..."

ವೈಯ್ಯಾರದಿಂದ ಬಳುಕುತ್ತಾ ಸಮೀಪಿಸಿದಾಗ ಎದೆಬಡಿತ ದುಪ್ಪಟ್ಟಾಗಿ, ನಖಶಿಖಾಂತ ಬೆವರಿದ ಕಲ್ಲೇಶಿಗೆ ಪ್ರತಿಕ್ರಯಿಸಲು ತಿಳಿಯದೇ ಗಾಬರಿಯಲ್ಲಿ ಥಟ್ಟನೆ ಹಿಂಸರಿದು ಜಿಗಿದೇಬಿಟ್ಟ. 'ಧಡ್!' ಬಿದ್ದ ರಭಸಕ್ಕೆ ಜಕಮ್ಮಾದ ಅಂಡಿನ ನೋವಿಗೆ ಮುಲುಗುತ್ತಲೇ ಸುತ್ತಲೂ ನೋಡುತ್ತಾ ಶೂನ್ಯಭಾವದಲ್ಲಿ ಪಿಳುಕಿಸಿದ, ರಂಭೆಯೂ ಇಲ್ಲ, ಹತ್ತಿಯೂ ಇಲ್ಲ! ವಾಸ್ತವಕ್ಕೆ ಬರಲು ಸಮಯ ಹಿಡಿಯಿತು. ಎಲ್ಲೆಂದರಲ್ಲಿ ಬಟ್ಟೆ ಹರವಿದ ಕೋಳೀಗೂಡಲ್ಲಿಯೇ ತಾನಿರುವುದು... ಓಹ್! ಅದೆಷ್ಟು ಸುಂದರ ಸ್ವಪ್ನವಾಗಿತ್ತು... ದಿನವೂ ಅಂತಹ ಕನಸು ಬಿದ್ದಲ್ಲಿ ಸ್ವರ್ಗಕ್ಕೆ ಮೂರೇ ಗೇಣು! ಬರೀ ಮೂರುಗೇಣೂ ಇಲ್ಲ, ಸ್ವರ್ಗದಲ್ಲಿಯೇ ಇರಬಹುದು... ಆದರೆ ಬ್ಯಾಡ್‌ಲಕ್ ಸುಂದರ ಕನಸು ಭಗ್ನವಾಯಿತಲ್ಲ... ಬೇಸರದ ಜೊತೆಗೆ ಜಜ್ಜಿದ ಅಂಡಿನ ನೋವೂ ತನ್ನ ಇರುವಿಕೆ ಸಾರಿತ್ತು, ಉಜ್ಜಿಕೊಳ್ಳುತ್ತಲೇ ಮಂಚ ಹಿಡಿದು ಮೇಲೆದ್ದು ಹಿಂಭಾಗವನ್ನು ಸೊಟ್ಟಗೆ ಮಾಡಿಕೊಂಡು ಒಂದೆಡೆ ವಾಲಿದ್ದೂ ಅಲ್ಲದೇ ಮುಂಬಾಗಿ ನಡೆದು ಅಷ್ಟಾವಕ್ರನಂತಾದ.

ಸ್ವಪ್ನದ ಗುಂಗಲ್ಲಿದ್ದುಕೊಂಡೇ ಪ್ರಾತರ್ವಿಧಿ ಮುಗಿಸುತ್ತಲೂ ಕರೆಗಂಟೆ ಡಿಂಗ್‌ಡಾಂಗೆಂದುಲಿಯಿತು, ಯಾಂತ್ರಿಕವಾಗಿ ಬಾಗಿಲು ತೆಗೆದು ಇಡ್ಲಿ ಪಾರ್ಸಲ್

ಪಡೆದು ಟೇಬಲ್ ಮೇಲಿಡುವಷ್ಟರಲ್ಲಿ ಮತ್ತೊಮ್ಮೆ ಕರೆಗಂಟೆ ಡಿಂಗ್‌ಡಾಂಗಿಸಿತು. ಕನಸಿನ ಗುಂಗಲ್ಲಿದ್ದಕೊಂಡೇ ಬಾಗಿಲು ತೆರೆದ, ಕೆಲಸದ ತಿಪ್ಪಿ ಎಕ್ಸ್‌ಪ್ರೆಸ್ ರೈಲಿನಂತೆ ಒಳನುಗ್ಗಿ ಹಿಂಬಾಗಿಲ ಸಂದಿಯಲ್ಲಿ ಶೀರ್ಷಾಸನದಲ್ಲಿದ್ದ ಪೊರಕೆ ಕೈಗೆತ್ತಿಕೊಂಡು ಕಾರ್ಯಾಚರಣೆಯಲ್ಲಿ ತೊಡಗಿದಳು. ಸೊಟ್ಟಸೊಟ್ಟಗೆ ನಡೆಯುತ್ತಿದ್ದ ಕಲ್ಲೇಶಿಯನ್ನು ನೋಡಿ 'ಯಾಕಣ್ಣೋ... ಎಂಗೆಂಗೋ ವೋಯ್ತಿದ್ದೀರಿ? ಯೆಲ್ಬಿದ್ರೀ...?'

"ಎಲವೋ ಸುಂದರಿಯೇ! ಏನೆಂದು ಹೇಳಲಿ? ತೈಲ ಪೂಸಿ ಮಾಲೀಶ್ ಮಾಡಿ ಸೇವೆಗೈದರೆ ರತ್ನಖಚಿತ ಹಾರವನ್ನ ಬಹುಮಾನವಾಗಿ ನೀಡುವೆ..."

"ಅಯ್ಯೋ ಸಿವನೇ! ಈ ವೈಯ್ಯಂಗೇನಾಯ್ತು ಅಂತೀನಿ... ಏನ್ಸಾಮೀ...! ಯೇನೇನೋ ಅಂತಿದ್ದೀರಿ? ನಿನ್ನೆ ಎಲ್ಲೋಗಿದ್ರೀ? ಅಮಾಸೆ ಬೇರೆ, ಗಾಳಿಗೀಳಿ ಮೆಟ್ಕಂಡೈಯ್ತೋ ಯೆಂಗೇ..."

ಚೊಂಬಲ್ಲಿ ನೀರು ತಂದು ಮುಖಕ್ಕೆ ಎರಚಿದ ರಭಸಕ್ಕೆ ಕಲ್ಲೇಶಿಯ ಗುಂಗು ಸರ್ರನೆ ಇಳಿದಿತ್ತು.

'ನೀ ಯಾವಾಗ್ಬಂದ್ಯೇ... ನಿಂಗೇನ್ ಬಂತೇ ದೊಡ್ರೋಗ... ಅಷ್ಟಕ್ಕೂ ನನ್ಮುಖಕ್ಕೆ ನೀರು ಯಾಕೆ ಹಾಕಿದ್ಯೇ...' ರೇಗುತ್ತಲೇ ಮುಖ ಒರೆಸಿಕೊಂಡ.

"ಅಲ್ಕಣಣ್ಣೋ... ಅದ್ಯೆಂತದೋ ಪೂಸೀಗೀಸಿ... ತೈಲ, ರತ್ನಪತ್ನ ಅಂತ ಕೆಲ್ಸಕ್ಬಾರದ್ದು ಪಲುಕಿದ್ರೆ ಗಾಬ್ರಿಯಾಗ್ದೇ ಇರುತ್ಯೇ? ಅದ್ಕೇಯ ನೀರಾಕಿದ್ದು. ಮೆಟ್ಕಂಡದ್ದು ನೀರ್ಗೊತ್ಗೇ ಯೆಂಗ್ ವಂಟೋಯ್ತು ನೋಡಿದ್ರಾ ಮತ್ತೆ... ಈಗ್ ನಂಬಾಸೇಲಿ ವಸಿ ಸಮಾಧಾನ್ವಾಗಿ ಯೋಳಿ ಯೇನಾಯ್ತು... ಯೆಲ್ಲೋಗಿದ್ರೀ ಅಂತ... ಅಣ್ಣಾವ್ರನ್ನ ಸಂದಾಗಿ ನೋಡ್ಕಬೇಕು ತಿಂಗ್ಳಾ ನೂರ್ರುಪಾಯಿ ಜಾಸ್ತಿ ಕೊಡ್ತೀನಂತ ಪ್ರಾಮೀಸೂ ಮಾಡವ್ರೆ... ಅವ್ರ ಮುಂದೆ ಹಿಂಗೇನಾರ ಐಲ್‌ಪೈಲಾಗಿ ಆಡುದ್ರೆ ವುಟ್ಲಿಲ್ಲ ಅನ್ಸ್‌ಬುಡ್ತಾರೆ ಅಟೇಯ..."

ಜೋರಾಗಿ ಗೊಣಗ್ತಾ ಚಾಮರಸೇವೆ ಮುಗ್ಸಿ ಅವಸರದಲ್ಲಿ ನೆಲ ಒರೆಸುತ್ತಿದ್ದಳು ತಿಪ್ಪಿ. ಇದೀಗ ಗುಂಗಿನಿಂದ ಪೂರ್ತಿಯಾಗಿ ಹೊರಬಂದ ಕಲ್ಲೇಶಿ "ಅಲ್ವೇ ತಿಪ್ಪೀ... ರೋಗಿಷ್ಟ್ರಿಗೆ ಕೊಟ್ಟಂಗೇ ದಿನಾಲೂ ಇಡ್ಲಿ ತಂದುಕೊಟ್ಟರೆ ಯಾರ್ತಾನೇ ತಿಂತಾರೆ? ತಿಂದೂ ತಿಂದು ನಾಲಿಗೆ ಜಡ್ಡುಗಟ್ಟಿದ್ದಕ್ಕೇ ಸರ್ಯಾಗಿ ಹೊರಳ್ದೇ ಹೆಂಗೆಂಗೋ ಹೊರಳಿದ್ದು... ನಿಜ್ವಾದ ರೋಗೀನೇ ಮೂಸ್ದಿರೋದು ನಂಗ್ಯಾಕೆ... ಇನ್ಮೇಲೆ ಮೂರ್ಹೊತ್ತೂ ನೀನೇ ತಿನ್ಕೊ, ಎಷ್ಟಂದ್ರೂ ಅಮ್ಮಾವ್ರ ಚೇಲಾ ಅಲ್ವೇ, ನೀನುಂಟು ನಿನ್ನಮ್ಮಾವ್ರುಂಟು..." ಮಾತು ಮರೆಸಿದ. ಅವನ ಅರ್ಧಾಂಗಿ ಕಲ್ಲಿ ಉರ್ಫ್ ಕಲಾವತಿ ಇದ್ದೊಬ್ಬ ಮಗಳ ಬಾಣಂತನಕ್ಕೆಂದು ಸಪ್ತಸಾಗರ ದಾಟಿದ್ದಾಗಿತ್ತು. ಸದಾ ಅದ್ಮಾಡ್ಬೇಡಿ, ಇದ್ಮಾಡ್ಬೇಡಿ, ಅಲ್ಹೋಗ್ಬೇಡಿ, ಇದನ್ನ ತಿನ್ಬೇಡಿ ಅಂತಾ ಬೇಡಗಳ ಬೇಡಿಯಲ್ಲಿ ಬಂಧಿಸಿದ್ದೂ ಅಲ್ಲದೇ ಎಕ್ಸ್‌ರೇ ಕಣ್ಣಿಂದ ಸ್ಕ್ಯಾನ್ ಮಾಡುತ್ತಾ ಯುದ್ಧಕ್ಕೆ ಸನ್ನದ್ಧಳಾಗೇ ಇದ್ದವಳು ವಿದೇಶಕ್ಕೆ ಹೋಗುವಾಗ ಗಂಡಂಗೊಂದು ವ್ಯವಸ್ಥೆ ಮಾಡೇ ಹೋಗಿದ್ದಳು. ಹಾಳೂಮೂಳು ತಿಂದು ಆರೋಗ್ಯ ಹಾಳು ಮಾಡಿಕೊಳ್ಳದಂತೇ ದಿನವೂ ಹಬೆಯಲ್ಲಿ ಬೇಯಿಸಿದ ಇಡ್ಲಿಯನ್ನೇ ತಿಂಡಿಗೆ ತಂದುಕೊಡಲು ವ್ಯವಸ್ಥೆ ಮಾಡಿದ್ದಳು. ತಿಂಡಿಯ ಬಗ್ಗೆ ಕಾಳಜಿ ವಹಿಸಿದವಳು ಊಟದ ಕುರಿತು ಅಲಕ್ಷ್ಯ ಮಾಡಲು ಸಾಧ್ಯವೇ... ಎರಡ್ಹೊತ್ತೂ ಸಪ್ಪೆ ಊಟದ ವ್ಯವಸ್ಥೆ ಮಾಡಿದ್ದರಿಂದಲೇ ದುರವಸ್ಥೆಗೀಡಾದ ಕಲ್ಲೇಶಿ ದುರ್ದಾನ ತೆಗೆದುಕೊಂಡಂತೆ ಜೊಮೊಟೋದಲ್ಲಿ ತರಿಸಿಕೊಂಡು ತಿನ್ನುವುದನ್ನು ಕಲಿತು ರೂಢಿಸಿಕೊಂಡಿದ್ದ. ನಿಂದಲೂ ವಯಸ್ಸನ್ನೂ ಮರೆತ ಕಲ್ಲೇಶಿ ಲಗಾಮಿಲ್ಲದ

ಕುದುರೆಯಾಗಿದ್ದ.

"ಏನಂದ್ರಿ? ಅಣ್ಣೋ... ಸುಮ್ಕಿರಿ, ಅಮ್ಮಾವ್ರ ಫೋನ್ ಬರ್ಲಿ... ನೀವ್ ಯೋಳಿದ್ದೆಲ್ಲಾ ಅಂಗೇ ಯೋಳ್ಬಿಡ್ತೀನಿ..." ತೋರುಬೆರಳಾಡಿಸುತ್ತಾ ಹೇಳಿದ ವರಸೆಗೆ ಮಾತು ಮರೆಸಿದ್ದರ ಪ್ರಭಾವ ಬೇರೆಯದ್ದೇ ಆಗಿದ್ದು ತಿಳಿಯುತ್ತಲೂ ನಮ್ ಕಲ್ಲೇಶಿ ಎಚ್ಚೆತ್ತುಕೊಂಡ.

"ಲೇ ತಿಪ್ಪೀ... ಅದ್ಯಾಕೆ ಆರ್ತಿಂಗ್ಳಿಗೆ ಹುಟ್ಟಿದ್ದಂಗೆ ಆಡ್ತಿದ್ದೀ? ನಾನ್ಹೇಳಿದ್ದೇನಂದ್ರೆ ತುಂಬಾ ತಂದ್ಕೊಡ್ತಾರೆ... ನನಗೆ ಸ್ವಲ್ಪ ಸಾಕಾಗುತ್ತೆ. ಉಳಿದದ್ದು ನೀ ತಿನ್ನು ಅಂತ ಹೇಳ್ದೆ ಅಷ್ಟೇ. ನಿಮ್ಮಮ್ಮಾವ್ರ ಕಾಳಜಿ ನಂಗೊತ್ತಿಲ್ವೇ... ಅಲ್ಲಿದ್ರೂ ಅವ್ರ ಮನ್ಸೆಲ್ಲಾ ಇಲ್ಲೇ!"

"ಅಣ್ಣೋ... ಯೆದ್ರುಕೋಬ್ಯಾಡಿ, ಸುಮ್ಕೇ ಯೋಳ್ದೆ ಅಟೇಯಾ... ವತ್ತಾರೆ ಅದೂ ದಿನ್ದಿನ್ವೂ ಇಡ್ಲಿ ಗಂಟ್ಲೊಳ್ಗೆ ಇಳ್ಯಾಕಿಲ್ಲಾ ಅಂಬೋದು ನಂಗೂ ಗೊತ್ತೈತೆ... ಯೆದ್ರುಕೋಬ್ಯಾಡಿ, ಅಮ್ಮಾವ್ರಿಗೆ ಹೇಳಿ ನಾ ಯಾಕ್ ಪಾಪ ಕಟ್ಕೊಳ್ಳೀ... ಕೆಲ್ಸ ಮುಗ್ಸಿ ವೋಗುವಾಗ ವಯ್ತೀನಿ... ಇಟ್ಟಿರಿ ಅಂಗೇಯಾ..." ಕಲ್ಲಿ ಮಾಡಿದ ಬಿಸ್ಬಿಸಿ ಇಡ್ಲಿ, ಬಾಯೂರಿಸೋ ಚಟ್ನಿ, ಸಾಂಬಾರ್ ಸವಿದವಳಿಗೆ ಅಂಗಡಿಯ ಆರಿದ ಇಡ್ಲಿ, ಹುರಿಗಡಲೇ ಹಿಟ್ಟು ಕರಡಿದಂತಹ ಪೇಸ್ಟ್ ಚಟ್ನಿ, ಅದೇ ಹಳಸಲು ರುಚಿಯ ಸಾಂಬಾರ್ ಹೇಗೆ ತಾನೇ ರುಚಿಸೀತು, ಅದೂ ದಿನವ್ರೂ! ಲೊಚಗುಡುತ್ತಾ ಕಲ್ಲೇಶಿಯ ದುರವಸ್ಥೆಗೆ ಮರುಗಿದಳು. ಅವಳ ತಗ್ಗಿದ ವರಸೆಗೆ ಇದೇ ಸುಸಮಯ ಅಂತ ಕಲ್ಲೇಶಿ "ನೋಡು ತಿಪ್ಪಿ, ನಾನೇನು ಚಿಕ್ಕಗೂನೇ? ಹಂಗೆಲ್ಲಾ ಏನೇನೋ ತಿಂದು ಆರೋಗ್ಯ ಹಾಳ್ಮಾಡ್ಕೊಳ್ಳೋ ವಯಸ್ಸೇ... ಅಷ್ಟೂ ಗೊತ್ತಾಗಲ್ವೇನು? ಅಮ್ಮಾವ್ರು ಬರೋ ತನ್ಕ ನಂಗೇನ್ಬೇಕೋ ತರಿಸ್ಕೊಂಡು ತಿಂತೀನಿ... ನಿಂಗೂ ಪಾಲಿಡ್ತೀನಿ... ಅಮ್ಮಾವ್ರಿಗೆ ಹೇಳ್ಬೇಡ ಅಷ್ಟೆ. ಮತ್ತೆ ಮನೇಗೆ ತಂದುಕೊಡೋ ಇಡ್ಲಿ, ಸಪ್ಪೆಯೂಟ ಬೇಕಂದ್ರೆ ತಿಂದ್ರಾಯ್ತು... ನಿಂಗ್ಬೇಕಾದ್ರೆ ತೊಗೊಂಡ್ಹೋಗು, ಬೇಡದಿದ್ರೆ ಬೀದಿ ನಾಯಿಗಳಿಗೋ, ದೇವಸ್ಥಾನದ ಹತ್ರ ಇರೋ ಅಮ್ಮಾತಾಯಿಗೋ ದಾಟ್ಸು... ದಾನ ಮಾಡಿದ ಪುಣ್ಯ ನಿಂಗೇ ಸಿಗುತ್ತೆ..." ಮಸ್ಕಾ ಹೊಡೆದ. ತಿಪ್ಪಿಯೇನು ಕಡಿಮೆಯವಳಲ್ಲ "ಸರಿ ಕಣಣ್ಣೋ... ನಿಮ್ದುಡ್ಡಲ್ಲಿ ತರಿಸ್ಕಂಡು ತಿಂದ್ರೆ ಬ್ಯಾಡ ಅಂದ್ರೆ ಸಿವಾ ಮೆಚ್ತಾನ್ಯೇ? ನೀವ್ಯೇನಾರ ತರಿಸ್ಕಳಿ, ತಿನ್ಕಳಿ... ನಂಗೇನ್ ಬ್ಯಾಡ. ಆದ್ರೆ ಅಮ್ಮಾವ್ರು ಬರೋಗಂಟ ತಿಂಗ್ಳಾ ಸಂಬ್ಳ ಬುಟ್ಟು ಯೆಲ್ಡ್ನೂರು ಸಪ್ರೇಟು ಕೈಯಲ್ಲಿ ಮಡಗ್ಬೇಕು ಅಟೇಯಾ... ನಿಮ್ಮೆಸ್ರು ಯೋಳ್ಕೊಂಡು ಬಡವ್ರು ಸಿವಾ ಮಡುಗ್ದಾಂಗೆ ಬದುಕ್ಕೋತೀನಿ... ಇಲ್ಲದ ತಂಟೆ ನಂಗ್ಯಾಕಣ್ಣೋ... ನಾ ಯೋಳಿದ್ದು ಗ್ಯಪ್ತಿ ಇರ್ಲಿ... ಬಾಗಿಲ್ಕಡೆ ಜ್ವಾಪಾನ... ಬರ್ತೀನ್ನಕಣಣ್ಣೋ..." ಗುನುಗುತ್ತಾ ಹೋದವಳ ಗಾಳಿ ಬೀಸಿದಂತೇ ನಮ್ ಕಲ್ಲೇಶಿಯೂ ಲಹರಿಯಲ್ಲಿ ಗುನುಗುತ್ತಾ ಶುಭ ಸಮಾಚಾರವನ್ನ ಗಳಸ್ಯಕಂಠಸ್ಯರಿಗೆ ತಿಳಿಸಲೆಂದು ಮೊಬೈಲು ಕೈಗೆತ್ತಿಕೊಂಡ. ■



**ಅಪರಂಜಿಯ ಓದುಗರಿಗೆ,**
**ಬರಹಗಾರರಿಗೆ, ಚಂದಾದಾರರಿಗೆ ಮತ್ತು**
**ಜಾಹೀರಾತುದಾರರಿಗೆ ಹೊಸವರ್ಷ**
**2024ರ ಶುಭಾಶಯಗಳು**



# ಸತಿ ಶಿರೋಮಣಿ......!

ವಿ. ವಿಜಯೇಂದ್ರ ರಾವ್

ಪಮ್ಮಿ ಪರಮೇಶಿಯರದು ಆದರ್ಶ ದಾಂಪತ್ಯ. ಇಬ್ಬರೂ ಒಬ್ಬರನ್ನೊಬ್ಬರು ತುಂಬಾ ಗೌರವಿಸುತ್ತಾ, ಪ್ರೀತಿಸುತ್ತಾ, ಉತ್ತೇಜಿಸುತ್ತಾ ಸದಾ ಇರುತ್ತಿದ್ದರು. ಪರಮೇಶಿಯು ಒಂದು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ನೌಕರಿ ಮಾಡುತ್ತಿದ್ದನು. ಪಮ್ಮಿಯು ಪತಿಯ ಏಳಿಗೆಯನ್ನು ಬಯಸುವ ಒಬ್ಬ ಸದ್ಗೃಹಿಣಿಯಾಗಿದ್ದಳು.

ಇತ್ತೀಚೆಗೆ, ಪರಮೇಶಿಯು ಬ್ಯಾಂಕಿಗೆ ಕೆಲಸಕ್ಕೆ ಹೋದ ಕೆಲವೇ ನಿಮಿಷಗಳಲ್ಲಿ ತಾನು ಸಹ ಅವನು ಕೆಲಸ ಮಾಡುವ ಬ್ಯಾಂಕಿಗೆ ಹೋಗಿ ಗ್ರಾಹಕರು ಕೂಡುವ ಜಾಗದಲ್ಲಿ ಕುಳಿತು, ಬೆಳಿಗ್ಗಿನಿಂದ ಸಂಜೆಯವರೆಗೂ ಪರಮೇಶಿಯು ಕೆಲಸ ಮಾಡುವುದನ್ನು ನೋಡುತ್ತಾ, ಆನಂದಿಸುತ್ತಾ, ಆಗಾಗ್ಗೆ ಅವನತ್ತ ಹೂನಗೆ ಬೀರುತ್ತಾ, ನಂತರ ಸಂಜೆ ಅವನು ಬರುವುದಕ್ಕೆ ಸ್ವಲ್ಪ ಮುಂಚೆಯೇ ಮನೆಗೆ ಬಂದು ಎಂದಿನ ನಿತ್ಯ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಿದ್ದಳು.

ಪಮ್ಮಿಯು ನಾಲ್ಕೈದು ದಿನದಿಂದ ಹೀಗೆ ಬಂದು, ಬೆಳಿಗ್ಗೆಯಿಂದ ಸಂಜೆಯವರೆಗೂ ಕೂತು ಹೋಗುತ್ತಿದ್ದದ್ದನ್ನು ಗಮನಿಸಿದ ಆ ಬ್ಯಾಂಕಿನ ಮ್ಯಾನೇಜರ್, ಅವಳ ಹತ್ತಿರ ಬಂದು – ಏನಮ್ಮಾ, ನಾನು ನಿಮ್ಮನ್ನು ಗಮನಿಸುತ್ತಿದ್ದೇನೆ.ಇಲ್ಲಿ ಏನೂ ವ್ಯವಹಾರ ಮಾಡದೇ, ಸುಮ್ಮನೆ ಬಂದು ಹೋಗಿ ಮಾಡುತ್ತಿದ್ದೀರಾ, ಹೀಗೆಲ್ಲಾ ನೀವು ಮಾಡಬಾರದಮ್ಮಾ ಎಂದಾಗ...

ಪಮ್ಮಿಯು – ಯಾಕ್ಸಾರ್ ಮಾಡಬಾರದು ? ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ರವೀಂದ್ರ ಜಡೇಜಾ ಅವರ ಪತ್ನಿಯರು, ತಮ್ಮ ಗಂಡಂದಿರು ಕೆಲಸ ಮಾಡುವ ಸ್ಥಳವಾದ ಕ್ರಿಕೆಟ್ ಸ್ಟೇಡಿಯಂಗೆ ಹೋಗಿ, ತಮ್ಮ ಗಂಡಂದಿರು ಕೆಲಸ ಮಾಡುವಾಗ, ಅಲ್ಲಿ ಅವರ ಕೆಲಸವನ್ನು ಮೆಚ್ಚಿ ಆಗಾಗ್ಗೆ ಚಪ್ಪಾಳೆ ತಟ್ಟಿ, ಫ್ಲೈಯಿಂಗ್ ಕಿಸ್ ಎಲ್ಲಾ ಕೊಟ್ಟು ಅವರುಗಳು ಇನ್ನೂ ಚೆನ್ನಾಗಿ ಆಡಲೆಂದು ಉತ್ತೇಜಿಸುತ್ತಾರೆ ತಾನೇ ? ಅದಕ್ಕೆ ನಾನು ಸಹ ನನ್ನ ಗಂಡನು ಕೆಲಸ ಮಾಡುವ ಜಾಗಕ್ಕೆ ಬಂದು, ಅವರ ಕೆಲಸ ಮೆಚ್ಚಿ ಆಗಾಗ್ಗೆ ಮೆಲ್ಲಗೆ ಚಪ್ಪಾಳೆ ತಟ್ಟಿ, ಹೂನಗೆ ಬೀರಿ ಅವರನ್ನು ಉತ್ತೇಜಿಸಿ, ಈ ಸರ್ತಿ ಹೇಗಾದರೂ ಈ ಬ್ಯಾಂಕ್ ಮ್ಯಾನೇಜರ್ ಮಾಡಲೇ ಬೇಕೆಂದು ಪಣ ತೊಟ್ಟಿದ್ದೇನೆ ಎಂದಾಗ...ದಂಗಾಗಿ ಆ ಮ್ಯಾನೇಜರ್, ಈಕೆ ಯಾಕೋ ನನ್ನ ಬುಡಕ್ಕೆ ಬೆಂಕಿ ಇಡ್ತಾಳಲ್ಲ, ಸ್ವಲ್ಪ ಹುಷಾರಾಗಿರಬೇಕು ಎಂದೆಣಿಸುತ್ತಾ ಮೆಲ್ಲಗೆ ಅವನ ಕ್ಯಾಬಿನ್ ಒಳಗೆ ನುಸುಳಿ, ಫ್ಯಾನ್ ಸ್ಪೀಡ್ ಜಾಸ್ತಿ ಮಾಡಿ ತನ್ನ ರಿವಾಲ್ವಿಂಗ್ ಚೇರಿನಲ್ಲಿ ಕುಸಿದು ಕುಳಿತನು....! ■

**ಹಿಂದೆ....ಆಹಾ ಅದೆಷ್ಟು ಚೆಂದವಿದ್ದೆ**
**ಹೇಗಿದ್ದೆ, ಹೇಗಾದೆ?.....**
**ಅಂತ ಅಳುತ್ತಿದೆಯಂತೆ ರೀಮಿಕ್ಸ್**
**ಆದ ಈ ಭಾವಗೀತೆ......**
**–ಜ್ಯೋತಿ ರಾಜೇಶ್**

# ಅಮ್ಮನೆಂಬ ಅಮೃತ

ಮಂಗಳ ಎಂ ನಾಡಿಗ್

ಓದನ್ನು ಬಿಡಿಸಿ ತಮ್ಮ, ತಂಗಿಯರನ್ನು ನೋಡಿಕೊಳ್ಳುವ ದೊಡ್ಡ ಜವಾಬ್ದಾರಿಯನ್ನು ಚಿಕ್ಕ ಹೆಗಲಿಗೆ ವಹಿಸಿ ಓದುವ/ಓಡುವ (ಓಡುವ – ಓಟ ಎಂದರೆ ಬಹಳ ಇಷ್ಟ, ಹಾಗೂ ಅದರಲ್ಲಿ ಮೊದಲು ಬರುತ್ತಿದ್ದಾಕೆ) ಕನಸಿಗೆ ತಣ್ಣೀರೆರಚಿದ ತಂದೆ–ತಾಯಿಯ  ಆ ನತದೃಷ್ಟ ಮಗಳು ನನ್ನಮ್ಮ. ಕನ್ನಡ ಪದ್ಯವನ್ನು ಚಾಚೂ ತಪ್ಪದೇ ರಾಗವಾಗಿ ಹೇಳಿ ಸೈ ಎನಿಸಿಕೊಂಡವಳು. ಊರಿನ ಹಿರಿಯರು ಯಾರಾದರೂ ಶಾಲೆಗೆ ಬಂದರೆ ಶಿಕ್ಷಕರು ಅಮ್ಮನನ್ನು ಕರೆಸಿ, ಈ ಮಗು ಎಷ್ಟ್ ಚೆನಾಗ್ ಪದ್ಯ ಹೇಳುತ್ತೆ ಅಂತ ಹೇಳಿಸುತ್ತಿದ್ದರಂತೆ. ಸೋದರಮಾವನ ಮನೆಯಲ್ಲಿದ್ದು ತನ್ನ ಪಾಡಿಗೆ ತಾನು ಮಗ್ಗಿ ಹೇಳುವುದರಿಂದ ಎಲ್ಲವುದರಲ್ಲೂ ಮುಂದಿದ್ದವಳನ್ನು ಶಾಲೆ ಬಿಡಿಸಿ, ಮನೆಗೆ ಕರೆತರುವಾಗ ಸೋದರ ಮಾವ ಹೇಳಿದ್ದು ಚೆನ್ನಾಗಿ ಓದ್ತಿದಾಳೆ, ನಮ್ಮನೇಲಿ ಇರ್ಲಿ ಎಂದು. ಆದರೆ ವರ್ಷಕ್ಕೊಂದೊಂದು ಮಗು ಹೆರುವ ತಾಯಿಗೆ ತಮ್ಮ ಅವಶ್ಯಕತೆಗೆ ಬಳಕೆಯಾಗಿದ್ದು ಹಿರಿಯ ಮಗಳಾದ ನನ್ನಮ್ಮ.

ಬೆಳಕು ಹರಿಯುವ ಮುನ್ನವೇ ಏಳಿಸಿ ಒಲೆ ಮುಂದೆ ಕೂರಿಸುತ್ತಿದ್ದರಂತೆ. ನಿದ್ದೆಯಿಂದ ಕುಗುರಿ ಒಮ್ಮೆ ಅಲ್ಲೇ ಪಾತ್ರೆ ಮೇಲೆ ಬಿದ್ದಿದ್ದರಂತೆ. ತಮ್ಮ, ತಂಗಿಯರೆಲ್ಲಾ ಶಾಲೆಗೆ ಹೋಗುವಾಗ ಆಸೆ ಕಂಗಳಿಂದ ನೋಡಿ ಕಣ್ತುಂಬಿಕೊಂಡು ಮನೆಯ ಎಲ್ಲಾ ಜವಾಬ್ದಾರಿ ಮೈಮೇಲೆ ಹೊತ್ತುಕೊಂಡವಳು ನನ್ನಮ್ಮ. ಕಾಫಿ, ಕಷಾಯ, ಊಟ–ತಿಂಡಿ, ಪಾತ್ರೆ, ಬಟ್ಟೆ, ನೀರು ತರುವುದು, ಚಿಕ್ಕ ಮಕ್ಕಳಿಗೆ ಬಾಟಲಿ ಹಾಲು ಕುಡಿಸುವುದರಿಂದ ಅವರ ಉಚ್ಚೆಬಟ್ಟೆ ಒಗೆಯುವುದು, ಅವರಿಗೆ ಸ್ನಾನ ಮಾಡಿಸುವುದು, ತಲೆ ಬಾಚುವುದು ಹೀಗೆ ಎಲ್ಲವನ್ನೂ ಮಾಡಿದಾಕೆ. ಏಕೆಂದರೆ, ವಯಸ್ಸಾದ ಅವರ ಅಜ್ಜಿ ಸ್ವಲ್ಪ ದಿನದ ಮಟ್ಟಿಗೆ ತಾಯಿಯ ಬಾಣಂತನಕ್ಕೆ ಬಂದಿರುತ್ತಿದ್ದುದು ಹಾಗೂ ಒಬ್ಬ ಅಣ್ಣನನ್ನು ಬಿಟ್ಟರೆ ಎಲ್ಲರೂ ಅಮ್ಮನಿಗಿಂತ ಕಿರಿಯರೇ. ಅಮ್ಮನ ಅಮ್ಮ ಎರಡು ತಿಂಗಳಾಗುವುದರೊಳಗೆ ಕಾಫಿ ಹಣ್ಣು ಕುಯ್ತೀನಿ ಎಂದು ತೋಟಕ್ಕೆ ಹೋದರೆ ಚಿಕ್ಕ ಮಗುವಿನ ಜವಾಬ್ದಾರಿಯೂ ಅಮ್ಮನ ಹೆಗಲಿಗೇ. ಕೊನೆಯ ತಮ್ಮ ಹುಟ್ಟುವಾಗ ಅಜ್ಜಿಗೆ ಸರಿಯಾಗಿ ಕಣ್ಣು ಕಾಣಿಸುತ್ತಿರಲಿಲ್ಲವಾದ್ದರಿಂದ (ಮೊದಲೇ ಕತ್ತಲ ಕೋಣೆ) ಅವರ ಮಾರ್ಗದರ್ಶನದಲ್ಲಿ ಅಮ್ಮನೇ ಹೊಕ್ಕಳ ಬಳ್ಳಿ ಕತ್ತರಿಸಿದ್ದರಂತೆ. ಹೀಗೆ ಚಿಕ್ಕವಯಸ್ಸಿನಿಂದಲೂ ತಂದೆ–ತಾಯಿ ಹೇಳಿದಂತೆ ಕೇಳಿಕೊಂಡು, ಎದ್ದಾಗಿನಿಂದ ಮಲಗುವವರೆಗೂ ಮನೆ ಕೆಲಸ, ಪೂಜೆ, ಪುನಸ್ಕಾರ, ಭಜನೆ ಇದಿಷ್ಟೇ ಅವಳ ಪ್ರಪಂಚ.

ಮದುವೆಯಾದ ಮೇಲೆ ಒಟ್ಟು ಕುಟುಂಬ. ಅಜ್ಜನ ದುಡಿಮೆಯ ಜೊತೆಗೆ ಅಪ್ಪನದೂ ಮನೆ ನಡೆಸಲಿಕ್ಕೇ ಸಾಕಾಗುವಷ್ಟು. ಅಲ್ಲಿಯೂ ಅಮ್ಮ ಪಟ್ಟಕಷ್ಟ ಅಷ್ಟಿಷ್ಟಲ್ಲ. ನಂತರ ಖಾಲಿ ಕೈಯ್ಯಲ್ಲಿ ಅಲ್ಲಿಂದ ಬೇರೆ ಬಂದ ಮೇಲೆ ಅಪ್ಪನೊಡನೆ ಹೆಗಲಾಗಿ ನಿಂತು ಪ್ರತಿಯೊಂದು ಕಷ್ಟದಲ್ಲೂ ತನ್ನ ಹೆಜ್ಜೆ ಜೊತೆಗಿರಿಸಿದವಳು ಅಮ್ಮ. ಟೈಲರಿಂಗ್ ಕಲಿಯಬೇಕೆಂಬ ಅವಳ ಆಸೆ ಮನದಲ್ಲೇ ಉಳಿದಿತ್ತು. ಬದುಕಿನ ಜಂಜಾಟದಲ್ಲಿ ಅದು ಸಾಧ್ಯವಾಗಲಿಲ್ಲ. ಆದರೂ ತನ್ನ ಸೀರೆಯಿಂದ ಕೈಹೊಲಿಗೆಯಲ್ಲೇ  ನನಗೆ ಚೆಂದದ ಲಂಗ ಹೊಲಿದು ಕೊಟ್ಟಿದ್ದಳು. ಮೂರ್ನಾಲ್ಕು ಸೀರೆಗಳನ್ನು ಜೋಡಿಸಿ ದುಪ್ಪಟಿಯಾಗಿ ಹೊಲಿದು ಬೆಚ್ಚಗೆ ಹೊದಿಸಿ ಮಲಗಿಸಿದ್ದಳು. ಪುರಾಣ, ಪುಣ್ಯಕಥೆಗಳ (ಅಜ್ಜನ ಬಳುವಳಿ) ಹೇಳುತ್ತಿದ್ದಾಕೆ. ಪೂಜೆ, ಸಂಸ್ಕಾರ, ಭಜನೆ, ಕೆಲಸ, ಬೊಗಸೆ

ಎಲ್ಲವನ್ನೂ ಕಲಿಸಿದಾಕೆ. ನನ್ನ ವಿದ್ಯಾಭ್ಯಾಸಕ್ಕೆ ಬೆನ್ನೆಲುಬಾಗಿ ನಿಂತಾಕೆ.

ತನ್ನ ತವರಿನಲ್ಲಿ ತಮ್ಮ, ತಂಗಿಯರ ಮದುವೆಯೆಂದರೆ, ಹದಿನೈದು ದಿನ ಮುಂಚೆಯೇ ಹೋಗಿ ಗೋಡೆಗೆ ಕಾರಣೆ ತೆಗೆಯುವುದರಿಂದ (ಗೋಡೆಯ ಉದ್ದಕ್ಕೂ ಬಿಳಿಯ ಬಣ್ಣದಲ್ಲಿ ಬಗೆ ಬಗೆಯ ಹೂವು, ಬಳ್ಳಿ, ಎಳೆಗಳನ್ನು ಎಳೆಯುವುದು) ಹಿಡಿದು ಮದುವೆಮನೆಯ ಎಲ್ಲಾ ಕೆಲಸದಲ್ಲೂ ಕೈಜೋಡಿಸಿದಾಕೆ.

ಹಿರೀ ಮಗಳಾಗಿ ತವರಿನಲ್ಲಿ ತನ್ನ ಕರ್ತವ್ಯಕ್ಕೆ ಎಂದೂ ಚ್ಯುತಿ ಬರದಂತೆ ಕಾರ್ಯ ನಿರ್ವಹಿಸಿದವಳು. ತಂದೆ-ತಾಯಿ ಮರಣ ಹೊಂದಿದಾಗ ಅವರು ಸಿಹಿ ಮಾಡುವ ಹಾಗಿಲ್ಲವೆಂದು, ಹೆಣ್ಣು ಮಕ್ಕಳು ಮಾಡಿಕೊಡಬೇಕೆಂದು ದೊಡ್ಡ ಡಬ್ಬಿ ತುಂಬಾ ರವೆ ಉಂಡೆ ಮಾಡಿ ತೆಗೆದುಕೊಂಡು ಹೋಗಿ ಕೊಟ್ಟವಳು. ಏಕೆಂದರೆ, ಒಡಹುಟ್ಟಿದವರೆಲ್ಲಾ ಸೇರಿ ಹದಿಮೂರು ಜನ. ಅವರ ಸಂಸಾರ ಹೀಗೆ ಮನೆ ತುಂಬಾ ಜನ. ಆಗ ಅವಳು ತನ್ನ ಕಷ್ಟ ಮರೆತು, ತನ್ನ ಕರ್ತವ್ಯಕ್ಕೆ ಮಾತ್ರ ಒತ್ತು ಕೊಟ್ಟವಳು.

ಅಜ್ಜ, ಆಗಿನ ಕಾಲದಲ್ಲೇ ಪುಸ್ತಕಗಳನ್ನು ತಂದಿಡುತ್ತಿದ್ದರಂತೆ. ಅದನ್ನು ಅಮ್ಮ ಓದುತ್ತಿದ್ದರಂತೆ. ಹಾಗೇ ಮನೆಯಲ್ಲಿ ಕೆಲವು ರೋಗಗಳಿಗೆ ಬೇರು, ನಾರಿನ ಔಷಧಿ ಕೊಡುತ್ತಿದ್ದ ಅಜ್ಜ, ರಟ್ಟಿನ ಬಾಕ್ಸಿನಲ್ಲಿ ಬೇರೆಡೆಯಿಂದ ಮಾತ್ರೆ, ಔಷಧಿಗಳನ್ನು ತರಿಸುತ್ತಿದ್ದರಂತೆ. ಅದನ್ನು ಸುತ್ತಮುತ್ತಲಿನವರಿಗೆಲ್ಲಾ ಸಣ್ಣಪುಟ್ಟ ಕಾಯಿಲೆಗಳಿಗೆ ಕೊಡುತ್ತಿದ್ದರಂತೆ. ಅವರು ಯಾರಿಂದಲೋ ಕಲಿತ ವಿದ್ಯೆ ಅದು. ಅವರ ಮಾರ್ಗದರ್ಶನದಲ್ಲಿ ಅಮ್ಮನೂ ಒಂದಷ್ಟು ಕಲಿತಿದ್ದಳು. ನೆಗಡಿ, ಕೆಮ್ಮು ಹೀಗೆ ಕೆಲವೊಂದಕ್ಕೆ ಕಷಾಯ, ಗಂಟಲು ನೋವಿಗೆ ಬೇರು ತೇಯ್ದು ಕೊಡುತ್ತಿದ್ದಳು. ಒಬ್ಬರಿಗೆ ಗಂಟಲು ನೋವು ಜಾಸ್ತಿಯಾಗಿ ವೈದ್ಯರಿಗೆ ತೋರಿಸಿದಾಗ ಆಪರೇಷನ್ ಮಾಡಬೇಕು ಎಂದಿದ್ದರಂತೆ. ಅದನ್ನು ಕೇಳಿದ ಅಮ್ಮ ತನಗೆ ತಿಳಿದ ಬೇರು ಕೊಟ್ಟು ಕಾದಾರಿದ ನೀರಿನಲ್ಲಿ ತೇಯ್ದು ತಿನ್ನಲು ಹೇಳಿದ್ದಳು. ಅದರಿಂದಲೇ ಅವರ ನೋವು ಕಡಿಮೆಯಾಗಿ ಮೊದಲಿನಂತಾಗಿದ್ದರು. ಹಾಗಾಗಿ ಅದನ್ನು ಹುಡುಕಿಕೊಂಡು ಅನೇಕರು ಬರುತ್ತಿದ್ದರು.

ಅವಳಿಗೆ ವಿದ್ಯಾಭ್ಯಾಸ ಕೊಡಿಸಿದ್ದರೆ, ಅವಳ ಆಸಕ್ತಿಯ ವಿಷಯಗಳಿಗೆ ನೀರೆರೆದಿದ್ದರೆ, ಅವಳು ಇಂದು ಏನೋ ಒಂದು ಸಾಧಿಸಿರುತ್ತಿದ್ದಳು. ಅವಳ ಉತ್ಸಾಹ ಅಂಥದ್ದು. ಈ ಇಳಿ ವಯಸ್ಸಿನಲ್ಲೂ ಅವಳ ಚಟುವಟಿಕೆಯ ಮುಂದೆ ನಮ್ಮದೇನಿಲ್ಲ. ಚಿಕ್ಕ ವಯಸ್ಸಿನಿಂದ ಕೆಲಸ ಮಾಡೀ ಮಾಡೀ ಇಂದು ಸುಮ್ಮನೇ ಕುಳಿತುಕೊಳ್ಳಲು ಅವಳಿಗೆ ಬರುವುದಿಲ್ಲ. ಇನ್ನೊಂದು ವಿಷಯ, ನನಗೆ ಈಗಲೂ ಊರಿಗೆ ಹೋದಾಗ ಅವಳೇ ಕಾಫಿ ಮಾಡಿ ಕೊಡುವುದು. ಅದರಲ್ಲೂ ನನಗೆ ಹೇಗೆ ಬೇಕೋ ಹಾಗೆ (ಸ್ಟ್ರಾಂಗ್ ಕಾಫಿ. ಸಿಹಿ, ಕಹಿ ಎಲ್ಲಾ ಹದವಾಗಿರಬೇಕು) ಆಸ್ಥೆ ವಹಿಸಿ ಮಾಡಿಕೊಟ್ಟು ಸರಿ ಆಗಿದ್ಯಾ ಅಂತ ಕೇಳಿ ನಾನು ಚೆನ್ನಾಗಿದೆ ಎಂದಾಗಲೇ ಅವಳ ಮೊಗದಲ್ಲೂ ತೃಪ್ತಿ. ಚಿಕ್ಕವಳಿದ್ದಾಗಲೂ ಅಷ್ಟೇ. ಬೆಳಿಗ್ಗೆ ಎದ್ದು ಬೇರೆ ಎಲ್ಲಾ ಕೆಲಸ ಮಾಡುತ್ತಿದ್ದೆ. ಆದರೆ ಕಷಾಯ , ಕಾಫಿ ಏನಾದರೂ ಸರಿ ಅಮ್ಮನೇ ಬಂದು ಮಾಡಿಕೊಡಬೇಕು. ಅವಳಿಲ್ಲದಾಗ, ತಿಂಗಳ ಮೂರು ದಿನ ಹಾಗೆ ಮಾತ್ರ ನಾವು ಮಾಡಿಕೊಳ್ಳುತ್ತಿದ್ದುದು.

ನನ್ನ ಮೊದಲ ಹೆರಿಗೆ ಸಮಯದಲ್ಲಿ ಕೊಟ್ಟಿರುವ ದಿನಾಂಕವಾದರೂ ಹೆರಿಗೆ ನೋವು ಕಾಣಿಸಿಕೊಳ್ಳದಿದ್ದಾಗ ನೋವು ಬರಲೆಂದು ಮಾತ್ರೆ ಕೊಟ್ಟಿದ್ದರು. ನಂತರ ಶುರುವಾದ ನೋವು ಒಮ್ಮೊಮ್ಮೆ ವಿಪರೀತವಾಗಿ ತಡೆಯಲಾಗದೇ ಕಣ್ತುಂಬಿ ಬಂದಿತ್ತು.

ಸೊಂಟ ನೋವೆಂದು ಕಷ್ಟಪಡುತ್ತಿರುವಾಗ ಅಮ್ಮ ನೋವಾದ ಜಾಗವನ್ನು ಮೆಲುವಾಗಿ ತಿಕ್ಕಿದ್ದಳು. ಅವಳ ಆ ಹಿತವಾದ ಸ್ಪರ್ಶ ನನಗೆ ಅಮೃತದಂತೆ. ಹೋದ ಜೀವ ಬಂದಷ್ಟು ಸಮಾಧಾನ ಕೊಟ್ಟಿತ್ತು. ಇಲ್ಲಿ, ಇಲ್ಲಿ ಎಂದು ನೋವಾದ ಕಡೆ ಮುಟ್ಟಿ ತೋರಿಸದಾಗೆಲ್ಲಾ ರಾತ್ರಿಯಿಡೀ ನಿದ್ದೆ ಬಿಟ್ಟು, ನನ್ನ ಬೆಡ್ ಹತ್ತಿರ ಬಗ್ಗಿ ನಿಂತು ತನ್ನ ನವಿರಾದ ಸ್ಪರ್ಶದಿಂದ ನನ್ನ ನೋವಿಗೆ ಉಪಶಮನ ನೀಡಿದ್ದಳು. ಆಗಾಗ ಮೇಲಿನ ಅಂತಸ್ತಿಗೆ ಹೋಗಿ ಡಾಕ್ಟರ್, ನರ್ಸ್ಗೆ ಹೇಳಿ ಬರುತ್ತಿದ್ದಳು. ಅವಳ ಆ ಕಾಳಜಿ, ಸೇವೆ ಇನ್ನಾರು ಮಾಡಲು ಸಾಧ್ಯ? ಎರಡನೇ ಬಾರಿಯೂ ಬಂದು ಎರಡು ತಿಂಗಳಿದ್ದು ಬಾಣಂತನ ಮಾಡಿ ಹೋಗಿದ್ದಳು. ನನಗೆ ಮಗುವಿಗೆ ದಿನಾ ಎಣ್ಣೆ ನೀರು, ಪಥ್ಯದ ಅಡುಗೆ, ಉಳಿದವರಿಗೂ ಊಟ, ತಿಂಡಿ, ಪೂಜೆ, ಹೀಗೆ ಮನೆಯ ಎಲ್ಲಾ ಜವಾಬ್ದಾರಿಯನ್ನು ವಹಿಸಿಕೊಂಡು ಮಾಡಿದ್ದನ್ನು ಹೇಗೆ ಮರೆಯಲು ಸಾಧ್ಯ?

ನನ್ನ ಮಕ್ಕಳಿಗೂ ಅಷ್ಟೇ. ರಜೆಯಲ್ಲಿ ಊರಿಗೆ ಹೋದರೆ ಎಣ್ಣೆನೀರು ಹಾಕುವುದರಿಂದ ಹಿಡಿದು ಸಿಹಿ ತಿಂಡಿ ಮಾಡಿಕೊಡುವುದು, ಬಟ್ಟೆ ಕೊಡಿಸುವುದು, ನಾನು ಎಲ್ಲಾದರೂ ಹೋದರೆ ಅಷ್ಟೇ ಕಾಳಜಿ ವಹಿಸಿ ಮಕ್ಕಳನ್ನು ನೋಡಿಕೊಳ್ಳುವುದು, ಕಥೆ ಹೇಳುವುದು, ತೋಟ, ಗದ್ದೆ, ಕಾಡಿಗೆ ಕರೆದುಕೊಂಡು ಹೋಗಿ ಹೂವಿನ ಗಿಡಗಳು, ಬೇರೆ ಬೇರೆ ಜಾತಿಯ ಗಿಡ–ಮರಗಳು ಎಲ್ಲವನ್ನೂ ತೋರಿಸಿ ಅದರ ಬಗ್ಗೆ ತಿಳಿಸಿ ಹೇಳುವುದು ಹೀಗೆ ಎಲ್ಲವನ್ನೂ ಮಾಡಿದಾಕೆ. ಇನ್ನು ಅವಳಿಗೆ ಅವಳ ತಂದೆ ಎಂದರೆ ಬಹಳ ಪ್ರೀತಿ, ಹೆಮ್ಮೆ ಎಲ್ಲಾ. ಅವರ ಬಗ್ಗೆ ಹೆಮ್ಮೆಯಿಂದ ಹೇಳುವಾಗ ಅವಳ ಮುಖ ಅರಳುತ್ತದೆ. ತನ್ನ ತಂದೆ ಏನೇನು ಮಾಡ್ತಿದ್ರು , ಎಷ್ಟು ಜನ ಮನೆಗೆ ಬರ್ತಿದ್ರು, ಎಷ್ಟು ಜನಕ್ಕೆ ಸಹಾಯ ಮಾಡಿದ್ರು, ಹೀಗೆ ಎಲ್ಲವನ್ನೂ ನೆನಪಿಸಿಕೊಂಡು ಹೇಳುತ್ತಾಳೆ.

ಊರಿಂದ ಹೊರಡುವಾಗ ಮನೆಯಲ್ಲಿ ಬೆಳೆದಿದ್ದನ್ನು ಅಪ್ಪ ಕೊಡುವಾಗ ಎಲ್ಲವನ್ನೂ ನೆನಪಿಸುವವಳು, ಮೊದಲೇ ತಿಳಿದಿರುತ್ತಿದ್ದುದರಿಂದ ಬೆಣ್ಣೆ ಕಾಯಿಸಿ ತುಪ್ಪ ಮಾಡಿ ಇಟ್ಟಿರುತ್ತಾಳೆ. ದುಡ್ಡೆಕಾಯಿ (ಹೇರಳೇಕಾಯಿ) ಉಪ್ಪಿನಕಾಯಿ ನನಗಿಷ್ಟ ಅಂತ ಹಾಕಿಟ್ಟಿರುತ್ತಾಳೆ. ಚಟ್ನಿಪುಡಿ, ಹೆಚ್ಚಿದ ಮಾವಿನಕಾಯಿ ಹೋಳುಗಳನ್ನು ಬೆಲ್ಲದ ಪಾಕದಲ್ಲಿ ಹಾಕಿಟ್ಟಿದ್ದು, ಹೂವಿನ ಗಿಡಗಳು, ಚೂಡಾದವಲಕ್ಕಿ, ಕೊಬ್ಬರಿ ಮಿಠಾಯಿ ಹೀಗೆ ಎಷ್ಟು ಕೊಟ್ಟರೂ ಅವಳಿಗೆ ಮುಗಿಯದು.

ಫೋನಲ್ಲಿ ಇಡೀ ಊರಿನ ವಿಷಯ ಎಲ್ಲಾ ಹೇಳುತ್ತಾಳೆ. ಅವರ ಮನೆಯಲ್ಲಿ ಮದುವೆ, ಮುಂಜಿ, ಗೃಹಪ್ರವೇಶ ಹೋಗಬೇಕು ಅಂತ. ಹೋಗಿಬಂದ ಮೇಲೂ ಅಲ್ಲಿಯ ಸಡಗರದ ಬಗ್ಗೆ , ಯಾರ್ಯಾರು ಬಂದಿದ್ದರು, ಏನು ಮಾಡಿದ್ರು, ಏನು ಕೊಟ್ರು ಹೀಗೆ. ಇನ್ಯಾರಿಗೋ ಹುಷಾರಿಲ್ಲ, ಅವರು ಗೊತ್ತಲ್ಲ ನಿಂಗೆ ಅನ್ನುತ್ತಾಳೆ (ಊರು ಬಿಟ್ಟು 25 ವರ್ಷವಾದ ಮೇಲೆ ಹೆಚ್ಚಿನವರ ಪರಿಚಯ ಇಲ್ಲ) ನನಗೆ ಗೊತ್ತಿರುವವರ ಹೆಸರು ಹೇಳಿ ಅವರ ಸೊಸೆಗೆ ಇವರು ಏನಾಗಬೇಕು ಹೀಗೆ ಸಂಬಂಧಗಳನ್ನು ಹೇಳೀ, ಹೇಳೀ ಅಂತೂ ನನಗೆ ಅವರ ಪರಿಚಯ ಮಾಡಿಸುತ್ತಾಳೆ. ಇದೆಲ್ಲಾ ಒಂದು ಕಡೆಯಾದರೆ, ಊರಿಗೆ ಹೋದಾಗ ಯಾವುದಾದರೂ ಒಂದು ಸಮಯ ಬಿಡುವು ಮಾಡಿಕೊಂಡು ಕರೆಯುತ್ತಾಳೆ. ನಂಗ್ ಆಮೇಲ್ ದನಕ್ಕಂಜಿಗಿಡ್ಬೇಕು, ಹಾಲು ಕರಿಬೇಕು, ಕೆಲಸದವರಿಗೆ ಕಾಫಿ ಕೊಡ್ಬೇಕು, ಈಗ ಒಂಚೂರು ಪುರ್ಸೊತ್ತಿದೆ ಬಾ ಇಲ್ಲಿ ಎಂದೇ ಕರೆಯುವುದು. ಇದು ಅವರ ಮನೆ ಮದುವೆಯಲ್ಲಿ ಕೊಟ್ಟಿದ್ದೀರೆ, ಇನ್ನೊಬ್ಬರ ವೈಕುಂಠ ಸಮಾರಾಧನೆಯಲ್ಲಿ ಕೊಟ್ಟ ದೇವರನಾಮದ ಪುಸ್ತಕಗಳು,

ಮತ್ತೊಬ್ಬರ ಮನೆಯ ಕಾರ್ಯಕ್ರಮದಲ್ಲಿ ಕೊಟ್ಟ ಅರಿಶಿನ–ಕುಂಕುಮದ ಬಟ್ಟಲು, ಪರ್ಸು, ಬ್ಯಾಗು ಹೀಗೆ ಎಲ್ಲವನ್ನೂ ತೋರಿಸಿ ನಿಂಗ್ ಏನಾದ್ರು ಬೇಕರ್ತಗೋ ಎನ್ನುವ ಅವಳ ನಿಷ್ಕಲ್ಮಶ ಪ್ರೀತಿಗೆ ಶರಣಾಗುವುದಷ್ಟೇ ನನ್ನ ಪಾಲಿಗೆ. ಏನೂ ಬೇಡ ಅಮ್ಮ, ಎಲ್ಲಾ ಚೆನ್ನಾಗಿದೆ. ನಿಂಗೆ ಅಂತ ಕೊಟ್ಟಿದಾರೆ, ಬ್ಲೌಸ್ ಹೊಲುಸ್ಕೋ, ಊರಿಗೆ ಹೋಗುವಾಗ ಈ ಬ್ಯಾಗ್ ತಗಂಡ್ಹೋಗು ಎಂದು ಹೇಳುತ್ತಿರುವಾಗಲೇ ಜಾತ್ರೆಯಿಂದ ನನಗೆ, ಮಕ್ಕಳಿಗೆ ಅಂತ ತಂದು ಇಟ್ಟಿದ್ದ ಬಳೆ, ಸರ , ಕ್ಲಿಪ್ಪು, ಇತ್ಯಾದಿ ತೆಗೆದುಕೊಡುತ್ತಾಳೆ. ಅಷ್ಟರಲ್ಲಾಗಲೇ ಅವಳಿಗೆ ಬೇರೆ ಕೆಲಸದ ಕರೆ ಬಂದಿರುತ್ತದೆ.

ವರ್ಷದಲ್ಲಿ ಒಂದ್ಯೆದಾರು ವೈದಿಕ, ಪಿತೃಪಕ್ಷ , ಹೀಗೆ ಎಲ್ಲವೂ ಅಪ್ಪ–ಅಮ್ಮನ ಹೆಗಲಿಗೇ. ಎರಡು ದಿನದ ಮುಂಚೆ ಅಟ್ಟದಲ್ಲಿರುವ ದೊಡ್ಡ ಪಾತ್ರೆಗಳು, ಸೌಟುಗಳು ಹೀಗೆ ಎಲ್ಲವನ್ನೂ ತೆಗೆದು ತೊಳೆದು ಇಟ್ಟರೆ, ಹಿಂದಿನ ದಿನ ಬೇಕಾದ ಎಲ್ಲಾ ತಯಾರಿ, ಬರುವವರು–ಹೋಗುವವರ ಸಮಯಕ್ಕೆ ಸರಿಯಾಗಿ

ಊಟ– ತಿಂಡಿ, ಒಬ್ಬರಿಗೆ ಕಷಾಯ, ಇನ್ನೊಬ್ಬರಿಗೆ ಟೀ, ಮಕ್ಕಳಿದ್ದರೆ ಹಾಲು, ಆಗಾಗ ಕಾಫಿ ಸರಬರಾಜು ಹೀಗೆ ಯಾವುದಕ್ಕೂ ಕೊರತೆ ಮಾಡುವುದಿಲ್ಲ. ವೈದಿಕ ಮುಗಿದ ನಂತರವೂ ಪ್ರಸಾದ, ಅಡುಗೆಯೆಂದು ಕೊಟ್ಟು ಕಳಿಸುತ್ತಾಳೆ.

ಇನ್ನೊಂದು ವಿಚಾರ ಹೇಳಲೇಬೇಕು ನಾನು. ತವರಿನ ಒಂದು ಕಾರ್ಯಕ್ರಮದಲ್ಲಿ ನಾವೆಲ್ಲಾ ಮನೆಯವರು ಕೊನೇ ಪಂಕ್ತಿ ಊಟಕ್ಕೆ ಕೂತಿದ್ದೆವು. ಅಮ್ಮನ ಪಕ್ಕದಲ್ಲೇ ಕುಳಿತಿದ್ದೆ. ಎದುರುಗಡೆ ಸಾಲಿನಲ್ಲಿ ಅಡುಗೆಭಟ್ಟರು ಕುಳಿತಿದ್ದರು. ಒಂದೊಂದು ಅಡುಗೆಯನ್ನು ತಿಂದು ಚೆನ್ನಾಗಿದೆ ಎಂದು ಹೇಳುತ್ತಿದ್ದೆ. ಆಗ ಅವರು, 15 ದಿನದಿಂದ ನಿಮ್ಮ ಅಮ್ಮಂದು ಒಂದೇ ಗಲಾಟೆ. ಮಗಳು ಬೆಂಗ್ಳೂರಿಂದ ಬರ್ತಾಳೆ, ಹಲಸಿನ ಕಾಯಿ ಪಲ್ಯ ಮಾಡ್ಬೇಬೇಕು ಅಂತ , ಕೊನೆಗೂ ಗಲಾಟೆ ಮಾಡಿ ಹಲಸಿನಕಾಯಿ ಕೆಡವಿಸಿ, ಇವತ್ತು ಪಲ್ಯ ಮಾಡ್ಸಿದ್ರು ಅಂತ ಹೇಳಿದ್ರು. ಅವಳ ಪ್ರೀತಿಗೆ, ಅದರ ರೀತಿಗೆ ಮಾತು ಮೂಕವಾಗಿತ್ತು. ಅವಳನ್ನು ಬಿಟ್ಟರೆ ಇನ್ಯಾರು ಆ ಪ್ರೀತಿ, ಕಾಳಜಿ ತೋರಿಸಲು ಸಾಧ್ಯ.

ಒಮ್ಮೆ ನಾನು ಪೇಟೆಗೆ ಹೊರಟಾಗ ಯಾವುದೋ ಒಂದು ಭಕ್ತಿಗೀತೆಯ ಪುಸ್ತಕ ಬೇಕು ಎಂದು ಕೇಳಿದಳು. ತಂದು ಕೊಟ್ಟಿದ್ದೆ, ಆಗ ಖುಷಿ ನೋಡಬೇಕು ಅವಳ ಮೊಗದಲ್ಲಿ. ಸಂಜೆ ದೇವರ ಮುಂದೆಯೋ, ಅಡುಗೆ ಮನೆಯಲ್ಲೋ ಕುಳಿತು ಒಂದಷ್ಟು ಹೊತ್ತು ಭಜನೆ ಮಾಡಿದರೇ ಅವಳಿಗೆ ಸಮಾಧಾನ. ಈಗಲೂ ಪುಸ್ತಕಗಳನ್ನು ನೋಡಿ ಹೊಸ ಹೊಸ ದೇವರ ನಾಮಗಳನ್ನು ಕಲಿತು ಅಷ್ಟೇ ಖುಷಿಯಿಂದ ತನ್ನ ಪಾಡಿಗೆ ತಾನು ಹಾಡಿಕೊಂಡು ಅದರಲ್ಲೇ ನೆಮ್ಮದಿ ಕಾಣುತ್ತಾಳೆ. ಹೀಗೆ ಅವಳ ಬಗ್ಗೆ ಹೇಳುತ್ತಾ ಹೋದರೆ ಒಂದು ಕಾದಂಬರಿಯಾದರೂ ಮುಗಿಯುವುದಿಲ್ಲ..

ಈಗ ಅನುಕೂಲವಾದ ಮನೆ, ಕೊಟ್ಟಿಗೆ, ಹಸು– ಕರು, ಗದ್ದೆ, ತೋಟ, ಭತ್ತ, ತೆಂಗಿನಕಾಯಿ, ಏಲಕ್ಕಿ, ಕಾಫಿ, ಮೆಣಸು ಕಾಳು, ಅನಾನಸ್, ಬಾಳೆಹಣ್ಣು , ಸಪೋಟ, ಆಳುಕಾಳು, ಕಾರು, ನಲ್ಲಿ ತಿರುಗಿಸಿದರೆ ಬೇಕಾದಷ್ಟು ಬಂದು ಬೀಳುವ ನೀರು, ಹೀಗೆ ಎಲ್ಲವೂ ಇದೆ. ಈ ಮೊದಲು ಕಷ್ಟದ ಹೊಡೆತ ತಿಂದದ್ದಕ್ಕೆ ಲೆಕ್ಕವಿಲ್ಲ. ಈಗಲಾದರೂ ನೆಮ್ಮದಿಯಿಂದ, ಅವಳಿಗೆ ಹೇಗೆ ಖುಷಿ ಕೊಡುತ್ತದೆಯೋ ಹಾಗೆ ಸುಖವಾಗಿರಲಿ ಎಂಬುದೇ ಮಗಳಾಗಿ ಮನದಾಳದ ಹಾರೈಕೆ ಹಾಗೂ ಆ ದೇವರಲ್ಲಿ ನನ್ನ ಬೇಡಿಕೆ.

■

# ಬಸ್ ಪ್ರಯಾಣ ಜೀವನದ ಒಂದು ಅಂಗ

ಕೆ.ಎಸ್.ಸೋಮೇಶ್ವರ

ನಾವು ದೊಡ್ಡ ದೊಡ್ಡ ನಗರಗಳಲ್ಲಿ ವಾಸಿಸುವಾಗ ಅಲ್ಲಿನ ಒಂದು ಪ್ರಮುಖ ಸಾರಿಗೆ ವ್ಯವಸ್ಥೆ ಎಂದರೆ ನಗರ ಸಾರಿಗೆ ಬಸ್ಸುಗಳು. ಇದು ಬೆಂಗಳೂರೇ ಇರಲಿ ದೆಹಲಿ, ಮುಂಬೈ ಅಥವಾ ಚೆನ್ನೈ ಇರಲಿ ಆ ನಗರಗಳ ಒಂದು ಅವಿಭಾಜ್ಯ ವ್ಯವಸ್ಥೆ ಮತ್ತು ಇದು ಅಲ್ಲಿನ ಬಹುಪಾಲು ನಾಗರೀಕರನ್ನು ಕ್ಷೇಮವಾಗಿ ಒಂದು ಬಳಿಯಿಂದ ಇನ್ನೊಂದೆಡೆಗೆ ತಲುಪಿಸುವ ಜವಾಬ್ದಾರಿ ಹೊಂದಿದೆ. ಇಲ್ಲಿ ನಾನು ಹೇಳ ಹೊರಟಿರುವುದು ನಮ್ಮ ಬೆಂಗಳೂರಿನ ಸರಕಾರಿ ಬಸ್ಸುಗಳ ಬಗೆಗೆ. ನಾನು ಹುಟ್ಟಿದಾಗಿನಿಂದಲೂ ಬೆಂಗಳೂರಿನವನೇ. ಹೆಸರಿನಲ್ಲಿ ಮಾತ್ರ ನಮ್ಮ ಅಪ್ಪನ ಊರಿನ ಮೊದಲಕ್ಷರ ಇದೆಯಷ್ಟೇ. ಆದರೆ, ಚಿಕ್ಕ ವಯಸ್ಸಿನಿಂದಲೂ ಬೆಂಗಳೂರಿನ ಬೆಳವಣಿಗೆಯನ್ನು ನೋಡು ನೋಡುತ್ತ ಬೆಳೆದು ಈಗ ಇಲ್ಲಿಯೇ ಹಿರಿಯ ನಾಗರೀಕ ಎನ್ನುವ ಪದವಿ ಸರಕಾರದಿಂದ ದೊರೆತಿದೆ.

ಬೆಂಗಳೂರೆಂದರೆ ಸಿಟಿ ಬಸ್ಸುಗಳು ಅದರ ಅವಿಭಾಜ್ಯ ಅಂಗವೆನ್ನುವುದು ಎಲ್ಲರಿಗೂ ತಿಳಿದೇ ಇದೆ. ಅದರೊಂದಿಗೆ ಅವಿನಾವ ಬಾಂಧವ್ಯ ಇರಲೇ ಬೇಕಲ್ಲವೇ. ಬೆಂಗಳೂರಿನಲ್ಲಿದ್ದು ಈ ನಮ್ಮ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣ ಮಾಡಿಲ್ಲವೆಂದರೆ ಅವರಿಗೆ ಬೆಂಗಳೂರಿನ ಬಗ್ಗೆ ಏನೂ ತಿಳಿದಿಲ್ಲ ಎನ್ನಬೇಕಾಗುತ್ತದೆ. ಸ್ವಂತ ವಾಹನವಿರಲಿ, ಆಟೋ, ಟ್ಯಾಕ್ಸಿಗಳಿರಲಿ ಅಥವಾ ಈಗಿನ ಮೆಟ್ರೋ ಇರಲಿ ಬಸ್ಸುಗಳಲ್ಲಿ ಓಡಾಡಿದ ಅನುಭವವನ್ನು ಅದ್ಯಾವುದೂ ಕೊಡುವುದಿಲ್ಲ. ಈಗಲೂ ಸಹ ಇದರಲ್ಲಿನ ಓಡಾಟ ನನಗೆ ಬಹಳ ಹಿತವೆನಿಸುತ್ತದೆ. ಈ ವಾಹನಗಳೇ ಈಗಲೂ ಲಕ್ಷಾಂತರ ಮಂದಿಗೆ ತಮ್ಮ ಮನೆಯಿಂದ ಕೆಲಸ ಮಾಡುವ ಸ್ಥಳ ಅಥವಾ ನಗರದ ಬೇರೆ ಬೇರೆ ಭಾಗಕ್ಕೆ ಹೋಗ ಬೇಕಾದಲ್ಲಿ ಜನರಿಗೆ ಹತ್ತಿರವಾಗಿರುವಂತಹುದು. ಬೆಳಗಿನ ಸಮಯ ಅಥವಾ ಸಂಜೆಯ ವೇಳೆಯಲ್ಲಿ ಅನೇಕ ಬಸ್ ನಿಲ್ದಾಣಗಳಲ್ಲಿ ಮತ್ತು ನಗರದ ಪ್ರಮುಖ ಬಸ್ ತಂಗುದಾಣಗಳಾದ ಕೆಂಪೇಗೌಡ ಬಸ್ ನಿಲ್ದಾಣ, ಶಿವಾಜಿನಗರ, ಸಿಟಿ ಮಾರ್ಕೆಟ್ ಬಸ್ ನಿಲ್ದಾಣಗಳಲ್ಲಿ ತಮ್ಮ ಗುರಿ ತಲುಪಲು ಬರುವ ಸಾರಿಗೆಗಾಗಿ ಕಾಯುತ್ತಿರುವ ದೃಶ್ಯ ಪ್ರತಿ ದಿನದ ನಗರ ಜೀವನದ ಒಂದು ಭಾಗವಾಗಿದೆ.

ಆ ಕಾಲದಲ್ಲಿ ಅಂದರೆ 60 ರ ದಶಕದಲ್ಲಿ ಗಾಂಧೀ ಬಜಾರ್ ನಮಗೆ ತವರು ಮನೆ. ಅಲ್ಲಿನ ವೃತ್ತದಲ್ಲಿ ಬರುವ "ಕೆಂಪು ಸುಂದರಿ" ಯರನ್ನು ನೋಡುವುದೇ ನಮಗೆ ಮನರಂಜನೆ. ಆಗ ಮೆಜೆಸ್ಟಿಕ್ ನಿಂದ ಗಾಂಧಿ ಬಜಾರಿಗೆ 11 ನೇ ನಂಬರಿನ ಬಸ್ಸು ಗಳು ಬರುತ್ತಿದ್ದವು. ಅವುಗಳು ಮೊದಲಿಗೆ ಉದ್ದ ಮೂತಿಯವಾಗಿದ್ದವು. ಕಾಲಾಯ ತಸ್ಮೈ ನಮಃ ಎನ್ನುವಂತೆ ನಮ್ಮಲ್ಲಿ ಸಾಕುನಾಯಿಗಳ ಬಾಲ ಕತ್ತರಿಸಿ ಅವುಗಳ 'ನಾಯಿ ನಡಿಗೆ' ಯ ಸೌಂದರ್ಯವನ್ನು ಹೆಚ್ಚಿಸುವ ಶ್ವಾನಪ್ರಿಯರಂತೆ ನಮ್ಮವರು ಇವುಗಳ ಮೂತಿಯನ್ನೇ ತುಂಡರಿಸಿ ಚಪ್ಪಟೆ ಮೂಗಿನಿಂದ ಇವುಗಳ ಸೌಂದರ್ಯವನ್ನು ಹೆಚ್ಚಿಸುವ ಪ್ರಯತ್ನ ಮಾಡಿದ್ದರು. ಆಗ ಇದು ಬಿ.ಟಿ.ಎಸ್ ಅಂದರೆ ಬೆಂಗಳೂರು ನಗರ ಸಾರಿಗೆ. ಈಗಿನಂತೆ ಇವುಗಳು ವಿವಿಧ ಬಣ್ಣದ ದೇಹ ಸಿರಿಯನ್ನು ಹೊಂದಿರಲಿಲ್ಲ. ನನಗೆ ನೆನಪಿರುವಂತೆ ಇವುಗಳ ಕೆಂಪು ಬಣ್ಣಕ್ಕೇ ಆಕ್ಷೇಪ ಎತ್ತಿದ ನಾಗರೀಕರ ಅಹವಾಲನ್ನು ಅಂದಿನ ನ್ಯಾಯಾಲಯ ಒಪ್ಪಿಗೆ ಮುದ್ರೆ ನೀಡುವ ಮೂಲಕ ಇವುಗಳ ಬಣ್ಣ ಬದಲಾಯಿಸುವ ಪ್ರಕ್ರಿಯೆ ಆರಂಭವಾಗಿ

ಈಗಂತೂ ಕೆಲವು ವಿವಿಧ ಬಣ್ಣಗಳಲ್ಲಿ ಸಿರಿಗೊಂಡಿದ್ದರೆ ಇನ್ನು ಕೆಲವು ಜಾಹೀರಾತಿನಲ್ಲೇ ಮುಳುಗಿ ಎದ್ದು ಇದು ನಮ್ಮ ಸಾರಿಗೆಯೇ ಎಂಬ ಸಂದೇಹ ಮೂಡುತ್ತದೆ. ಈ ಸಂಸ್ಥೆಯ 'ಲಾಂಛನವಾದ ಗಂಡಭೇರುಂಡ ಮತ್ತು ಸತ್ಯ ಮೇವ ಜಯತ' ಎಲ್ಲೋ ಮರೆಯಾದಂತಿದೆ. ಅಂದಿನ ವಿಶೇಷವೆಂದರೆ ಮುಂಭಾಗದಲ್ಲಿ ಅರ್ಧ ಕತ್ತರಿ ಪ್ರಯೋಗ ಮಾಡಿದಂತಹ "ಒಕ್ಕಣ್ಣ ಬಸ್ಸು" ಎಂದು ಹೆಸರು ವಾಸಿಯಾಗಿದ್ದ ವಾಹನಗಳು. ಇವುಗಳ ಜೊತೆಗೇ ಬಂದವು ಮಹಡಿ ಬಸ್ಸುಗಳು. ಇವುಗಳಲ್ಲೂ ಒಕ್ಕಣ್ಣಿನವು ಇದ್ದವು . ಮುಂದಿನ ದಿನಗಳಲ್ಲಿ ಕೆಲವು ವರ್ಷಗಳು ಜೋಡಿ ಬಸ್ಸುಗಳು ಅಂದರೆ ರಸ್ತೆ ರೈಲುಗಳೂ ಸಹ ನಗರದಲ್ಲಿ ದೊಡ್ಡ ಹೆಬ್ಬಾವಿನಂತೆ ನಗರ ರಸ್ತೆಗಳಲ್ಲಿ ತೆವಳುತ್ತ ತಮ್ಮ ಛಾಪನ್ನು ತೋರಿಸಿದ್ದವು.

ಇದೇ ವೇಳೆಗೆ ನಾನು ಜಯನಗರದಿಂದ ಓಡಾಡುವಂತಾಗಿದ್ದು ನಮ್ಮ ಕಾರ್ಯಸ್ಥಾನ ಅಂದರೆ ಶಾಲೆ– ಬಸವನಗುಡಿಯ ನ್ಯಾಷನಲ್ ಹೈಸ್ಕೂಲಿನಲ್ಲಿ. ಇದಕ್ಕಾಗಿ ಜಯನಗರದಿಂದ ಗಾಂಧಿಬಜಾರಿಗೆ ಬಸ್ಸಿನಲ್ಲಿ ದೈನಂದಿನ ಪಯಣ. ಆಗೆಲ್ಲ ಶಾಲಾ ಪಾಸು ಈಗಿನ ಚಿಕ್ಕ ಕಾರ್ಡ್ ಅಲ್ಲ ಬದಲಿಗೆ ಒಂದು ಬಣ್ಣದ ಅರ್ಧ ಹಾಳೆ. ಒಮ್ಮೆ ನನ್ನೊಬ್ಬ ಸ್ನೇಹಿತ ಪಾಸ್ ಹೊಂದಿಲ್ಲದೇ ನಿರ್ವಾಹಕನಿಗೆ ಪಾಸ್ ಎಂದು ಜೋರಾಗಿ ಹೇಳಿಬಿಟ್ಟಿದ್ದ. ಆತ ವಿವರವಾಗಿ ಎಲ್ಲರನ್ನೂ ಕೆದಕಿದಾಗ ಇವನ 50 ಪೈಸೆ ಉಳಿಸುವ ಜಾಣತನ ಬೆಳಕಿಗೆ ಬಂದು ನಾವೆಲ್ಲ ಅಲ್ಲೇ ಇಳಿಯುವ ಶಿಕ್ಷೆ ತೆಗೆದುಕೊಳ್ಳ ಬೇಕಾಯಿತು. ಕೃಷ್ಣರಾವ್ ಪಾರ್ಕಿನಿಂದ ಜಯನಗರಕ್ಕೆ ಕಾಲು ನಡಿಗೆಯೇ ನಮ್ಮ ವಾಹನ.

ಇನ್ನು ಮುಂದಿನ ದಿನಗಳಲ್ಲಿ ಕೆಲಸಕ್ಕೆ ಸೇರಿದಾಗ ನಮ್ಮ ಕಛೇರಿ ಇದ್ದದ್ದು ಮೈಸೂರು ಬ್ಯಾಂಕ್ ವೃತ್ತದ ಬಳಿ. ಪ್ರತಿ ದಿನ ಬೆಳಿಗ್ಗೆ 9.30ಕ್ಕೆ ಜಯನಗರ ನಿಲ್ದಾಣದಲ್ಲಿ ಸರತಿಯ ಸಾಲಿನಲ್ಲಿ ನಿಂತು ವಾಹನ ಹತ್ತುವುದು. ಈ ಸಮಯದಲ್ಲಿ ಅನೇಕ ರೀತಿಯ ಜನರನ್ನು ನೋಡಬಹುದಾಗಿತ್ತು. ಸರಕಾರಿ ನೌಕರರು, ಬ್ಯಾಂಕ್ ಉದ್ಯೋಗಿಗಳೇ ಅಲ್ಲದೇ ಅನೇಕ ಸಣ್ಣ ಪುಟ್ಟ ವ್ಯಾಪಾರಿಗಳು ಸಿಟಿ ಮಾರುಕಟ್ಟೆಗೆ ತೆರಳಲೂ ಇವುಗಳನ್ನೇ ಅವಲಂಬಿಸಿದ್ದರು. ಇವರುಗಳ ಜೊತೆಯಲ್ಲಿ ಕೆಲ ಆಲಸಿಗಳ ಪರಿಚಯವೂ ಆಗುತ್ತಿತ್ತು. ಏನೆಂದರೆ, ಕೆಲವು ವಿಧಾನ ಸೌಧಿಗರು ಸರತಿಯಲ್ಲಿ ನಿಲ್ಲಲು ತಮ್ಮ ಮಕ್ಕಳನ್ನು ಮುಂದಾಗಿ ಕಳಿಸಿ ಅವರುಗಳು ತೃಪ್ತಿಯಾಗಿ ಹೊಟ್ಟೆ ತುಂಬಿಸಿಕೊಂಡು ಎಲೆಯಡಿಕೆ ಮೆಲ್ಲುತ್ತ ನಿಧಾನ ನಡಿಗೆಯಲ್ಲಿ ಬರುತ್ತಿದ್ದರು. ಆಗ ಶಾಲೆಗಳು 10.30 ಕ್ಕೆ ಆರಂಭವಾಗುತ್ತಿದ್ದುದರ ಅನುಕೂಲವನ್ನು ಇವರ ಅನುಕೂಲಕ್ಕೆ ಬಳಸಿಕೊಳ್ಳುತ್ತಿದ್ದರು. ಕೆಲವೊಮ್ಮ ಆ ಮಕ್ಕಳು ತಮ್ಮ ಹಿಂದಿನವರನ್ನು ಮುಂದೆ ಕಳಿಸಿ ತಮ್ಮ ಅಪ್ಪಂದಿರು ಬರುವವರೆಗೂ ಸರತಿಯಲ್ಲಿ ಇರುತ್ತಿದ್ದರು. ಈ ಸಮಯದಲ್ಲಿ ಆಗಿನ ಒಬ್ಬ ಚಾಲಕನ ಚಾಲನಾ ಪ್ರೌಢಿಮೆಯ ಬಗ್ಗೆ ಹೇಳಲೇ ಬೇಕು. ವಿಧಾನ ಸೌಧದ ಕಡೆ ಚಲಿಸುವ ಬಸ್ ನಾಲ್ಕನೇ ಬ್ಲಾಕಿನಿಂದ ಹೊರಟು ಅಂದಿನ ನಂದಾ ಚಿತ್ರಮಂದಿರ ರಸ್ತೆಯ ಮೂಲಕ ಮುಂದೆ ಸಾಗುತ್ತಿತ್ತು. ಈ ಒಬ್ಬ ಚಾಲಕ ಭರ್ತಿಯಾದ ಬಸ್ಸನ್ನು ಆ ಮಾರ್ಗವಾಗಿ ತೆಗೆದು ಕೊಂಡು ಈ ರಸ್ತೆಗೆ ಬಂದಾಗ ಒಮ್ಮೆ ಎಡಕ್ಕೂ ಮತ್ತೆ ಬಲಕ್ಕೂ ತಿರುಗಿಸುತ್ತಿದ್ದ. ಇದು ವಿಮಾನ ಹಾರಾಟದಲ್ಲಿ ಆಗುವ ಪಲ್ಲಟದ ಅನುಭವ ದಂತಿರುತ್ತಿತ್ತು. ಅದರಿಂದ ಎಂದೂ ಆತ ಅಪಘಾತ ಮಾಡಿದ ಎಂದು ವರದಿಯಾಗಿಲ್ಲ. ಪ್ರಯಾಣಿಕರು ಅದರಿಂದ ಗಾಬರಿಗೊಳ್ಳುವ ಬದಲಿಗೆ ಆನಂದಿಸುತ್ತಿದ್ದರು. ಕೆಲವರಂತೂ ಅವನ ಬಸ್ಸಿನಲ್ಲೇ ಆ ಸಮಯದಲ್ಲಿ ಪಯಣಿಸಬೇಕೆಂದು ಕಾದು ಪಯಣಿಸುತ್ತಿದ್ದರು. ಕೆಲ ವರ್ಷದ ಹಿಂದೆ ನಮ್ಮ

ಜನ ಪ್ರತಿನಿಧಿಯೊಬ್ಬರು ಇಂತಹ ಸಾರಿಗೆ ಬಸ್ಸನ್ನು ಓಡಿಸಿ ಅದರ ತಪ್ಪನ್ನು ಅ ಭಾಗದ ಸಾರಿಗೆ ಸಂಸ್ಥೆ ಅಧಿಕಾರಿಗಳು ಹೊರ ಬೇಕಾಯಿತು ಎಂಬುದು ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು.

ನಂತರದಲ್ಲಿ ನಮ್ಮ ಕಛೇರಿ ಮಹಾತ್ಮ ಗಾಂಧಿ ರಸ್ತೆಯ ಬಳಿಗೆ ಬದಲಾಯಿಸಿತು. ನಾವುಗಳು ಬೆಳಿಗ್ಗೆ ಎಂಟು ಗಂಟೆಗೇ ಕಛೇರಿಯಲ್ಲಿರಬೇಕಿತ್ತು. ಅದಕ್ಕಾಗಿ ಜಯನಗರ–ಶಿವಾಜಿನಗರದ 6 ನೇ ಸಂಖ್ಯೆ ವಾಹನ ಅದೂ ಮಹಡಿ ಬಸ್ಸು. ಬೆಳಿಗ್ಗೆ 7.15 ಕ್ಕೆ ಆ ಬಸ್ಸಿನ ಕೆಳ ಮಹಡಿಯ ಬಾಲ್ಕನಿ ನಾವು ನಾಲ್ಕೈದು ಖಾಯಂ ಪ್ರಯಾಣಿಕರ ಸುಖಾಸೀನ. ಆ ಸಮಯದಲ್ಲಿ ಕಂಡು ಬಂದಂತಹ ಒಂದು ಸಂಗತಿಯೆಂದರೆ ಸುಮಾರು ಏಳೆಂಟು ಮಕ್ಕಳ ದಿನ ಪ್ರಯಾಣ. ಇವರುಗಳ ವಿಶೇಷವೆಂದರೆ ಇವರುಗಳು ವಿಶಿಷ್ಠ ಚೇತನರು (ಕಿವುಡು ಮತ್ತು ಮೂಕರು). ಇವರಿಗಾಗಿ ಶಿವಾಜಿನಗರಕ್ಕೂ ಮುಂದೆ ನಡೆಸುತ್ತಿರುವ ಶಾಲೆಯಲ್ಲಿ ಇವರ ವ್ಯಾಸಂಗ. ಇವರುಗಳು ಬಸ್ಸಿನ ಪಯಣದಲ್ಲಿ ಆಡಿ ಅನುಭವಿಸುತ್ತಿದ್ದ ಆಟಗಳು ಸಾಮಾನ್ಯ ಮಕ್ಕಳನ್ನೂ ಮೀರುವಂತಿತ್ತು.

ಒಮ್ಮೆ ಓಡುವ ಬಸ್ಸು ಹತ್ತುವ ಸಾಹಸ ಮಾಡಿದ್ದೂ ಇದೆ. ಎಂ.ಜಿ. ರಸ್ತೆ ವೃತ್ತದಲ್ಲಿ(ಈಗಿನ ಅನಿಲ್ ಕುಂಬ್ಲೆ ವೃತ್ತ) ವೇಗ ಕಡಿಮೆ ಮಾಡಿದ ಬಸ್ಸಿನೊಳಗೆ ಎಗರಿ ಹತ್ತಿ ಅಲ್ಲಿದ್ದ ಹಿರಿಯರಿಂದ ಪಡೆದ ಆಶೀರ್ವಾದವೂ ಮರೆಯುವಂತಿಲ್ಲ. ಆ ಸಮಯದಲ್ಲಿ ನಗರದ ಕೆಲ ಬಸ್ ನಿಲ್ದಾಣಗಳು ಜೇಬುಗಳ್ಳರ ಬಲೆಗೆ ಬೀಳುವ ತಾಣ ಗಳಾಗಿದ್ದವು. ಇದರಲ್ಲಿ ಒಂದು ರಿಚ್ಮಂಡ್ ವೃತ್ತದ ಬಳಿಯ ಕ್ಯಾಷ್ ಫಾರ್ಮಸಿ ನಿಲ್ದಾಣ. ಆಗ ಈಗಿನಂತೆ ಅಲ್ಲಿ ಮೇಲು ಕೀಳಿನ ರಸ್ತೆಗಳ್ಯಾವುವೂ ಇಲ್ಲದೆ ನೇರ ಸಾದ ಸೀದ ರಸ್ತೆಗಳಿದ್ದವು. ಅಲ್ಲಿ ಗುಂಪಿನಲ್ಲಿ ಬಸ್ ಹತ್ತಿದ್ದೇ ಖುಷಿಯಾದರೆ ಜೇಬಿಗೆ ಕೈ ಹಾಕಿದಾಗ ಆದ ಅನುಭವ ಸುಮಾರು 500 ರೂಪಾಯಿಗಳ ಅಬೇಸ್. ಈ ರೀತಿಯ ಪಿಕ್ ಪಾಕೆಟ್ ಅನುಭವ ನನ್ನ ಶ್ರೀಮತಿಯವರಿಗೂ ಆಗಿದೆ.

ಇಲ್ಲಿ ಮೆಜೆಸ್ಟಿಕ್ ನಿಲ್ದಾಣದ ಬಗ್ಗೆಯೂ ಒಂದು ಮಾತು ಹೇಳ ಬೇಕಿದೆ ಇದು ನಾವು ನೋಡಿದ ಬಹು ಕಾಲ ಒಣಗಿಸಿದ 'ಧರ್ಮಾಂಬುಧಿ ಕೆರೆ' . ಈ ಖಾಲಿ ಜಾಗ ಒಂದು ಮನರಂಜನಾ ತಾಣವಾಗಿತ್ತು. ಅದರಲ್ಲೂ ಬೇಸಿಗೆ ಮೂರು ತಿಂಗಳು ಇಲ್ಲಿ ದಿವಂಗತ ಹಿರಣ್ಣಯ್ಯ ಮಿತ್ರ ಮಂಡಲಿಯವರ 'ಲಂಚಾವತಾರ', ಭ್ರಷ್ಟಾಚಾರ' ಮೊದಲಾದ ನಾಟಕ ಪ್ರದರ್ಶನಗಳು ಅನೇಕ ಸರ್ಕಸ್ ಕಂಪೆನಿಗಳಿಂದ ವಯಸ್ಸಿನ ಬೇಧ ಭಾವವಿಲ್ಲದೇ ಜನರಿಗೆ ದೊರೆಯುತ್ತದ್ದ ಮನರಂಜನೆ. ಇವೆಲ್ಲಕ್ಕೂ ಮಿಗಿಲಾದುದು ಅಂದರೆ ಆ ಕಾಲಕ್ಕೆ ಅತಿ ದೊಡ್ಡದಾದ ವಸ್ತು ಪ್ರದರ್ಶನ. ಇದು 'ಕಾಂಗ್ರೆಸ್ ವಸ್ತು ಪ್ರದರ್ಶನ' ಎಂದೇ ಹೆಸರು ವಾಸಿಯಾಗಿತ್ತು.ಆ ಕಾಲಕ್ಕೆ ಅಲ್ಲಿ ಎಲ್ಲ ತೆರನಾದ ವಸ್ತುಗಳೂ ಕೈ ಗೆಟಕುವ ಬೆಲೆಯಲ್ಲಿ ದೊರೆಯುತ್ತಿದ್ದವು. ಇಲ್ಲಿ ಈಗಿನ ನಿಲ್ದಾಣ ಬರುವ ಮೊದಲಿಗೆ ಅಲ್ಲಿನ ಮೇಲು ರಸ್ತೆಯಲ್ಲಿ ಅಂದರೆ ಕೆರೆಯ ಏರಿಯ ಮೇಲೆ ವಾಹನಗಳ ನಿಲುಗಡೆ ಇರುತ್ತಿತ್ತು. ಇಲ್ಲಿ ರಾಜಾಜಿನಗರದ ಕಡೆಗೆ ಹೋಗುವ ಪ್ರಯಾಣಿಕರು ಮಾತ್ರ ಸರದಿ ಸಾಲು ಪಾಲಿಸುತ್ತಿದ್ದರು. ಇದು ಆನಂತರವೂ ಹೊಸ ನಿಲ್ದಾಣದಲ್ಲೂ ಇದೇ ಪ್ರಕ್ರಿಯೆ ಮುಂದುವರೆದಿತ್ತು.

ಇವಿಷ್ಟೂ ಸಿಟಿ ಬಸ್ಸುಗಳಲ್ಲಿನ ಪಯಣದ ಅನುಭವವಾದರೆ ಪರವೂರಿಗೆ ಹೋದಾಗಲೂ ಪ್ರಥಮ ಆಯ್ಕೆ ಬಸ್ಸುಗಳೇ ಆಗಿತ್ತು. ಆಗ ಕಲಾಸಿ ಪಾಳ್ಯ ನಿಲ್ದಾಣದಿಂದ

ಮೈಸೂರಿಗೆ ಹಲವು ಖಾಸಗಿ ಬಸ್ಸು ಗಳು ಓಡಾಡುತ್ತಿದ್ದವು. ಅದರಲ್ಲಿ ನೆನಪಿರುವುದು ಕಾರವಾನ್ ಟ್ರಾವೆಲ್ಸ್‌ನ ಬಸ್ಸಿನಲ್ಲಿ 4 ಅಥವ 5 ರೂಪಾಯಿಯ ಮೈಸೂರು ಪಯಣ. ಅದರಲ್ಲೂ ಒಬ್ಬ ಚಾಲಕ ತನ್ನ ವೃತ್ತಿಯನ್ನು ಅನುಭವಿಸಿ ಚಾಲನೆ ಮಾಡುತ್ತಿದ್ದ. ಆಗ ಈಗಿನ ರಸ್ತೆ ಗೌಜುಗಳು ಏನೇನೂ ಇರಲಿಲ್ಲ. ಎಲ್ಲ ಖಾಲಿ ಖಾಲಿ. ಅದರಲ್ಲಿ ಈ ಚಾಲಕನ ವೀರಾವೇಶದ ಚಾಲನೆ.

ಈ ಬಸ್ ಪಯಣ ಇಲ್ಲಿಗೇ ಮುಗಿಯಲಿಲ್ಲ. ಅಂದಿನ ಮದರಾಸ್‌ಗೆ ಹೋಗಲು ಪ್ರಥಮ ಆಯ್ಕೆ ಬಸ್ಸುಗಳೇ ಆಗಿತ್ತು. ಅಲ್ಲಿಯೂ ಸಹ ಸಿಟಿ ಬಸ್ಸಿನಲ್ಲಿ ಪಯಣ. ಇನ್ನು ಈಗ ಹದಿನೈದು ವರ್ಷಗಳ ಕೆಳಗೆ. ಸುಮಾರು ಐದು ವರ್ಷಗಳು ಬೆಂಗಳೂರು – ಮುಂಬೈ ಪಯಣ. ಹಲವು ಬಾರಿ ವಿಮಾನ ಪ್ರಯಾಣ ಮಾಡಿದರೂ ಅದಕ್ಕೂ ಮಿಗಿಲಾಗಿ 16 ರಿಂದ 18 ಘಂಟೆಗಳ ಬಸ್ಸಿನಲ್ಲಿನ ಪ್ರಯಾಣ ಮುದ ನೀಡುತ್ತಿತ್ತು.


ಇಲ್ಲಿ ನಮ್ಮ ಕಾರ್ಖಾನೆಯ ಅಂದರೆ ಹೆಚ್.ಎಮ್.ಟಿ ಯವರೇ ಸ್ವಂತವಾಗಿ ಅಲ್ಲಿನ ಕಾರ್ಮಿಕರಿಗಾಗಿ ನಿಗದಿ ಮಾಡಿದ್ದ ಬಸ್ಸುಗಳ ಬಗ್ಗೆಯೂ ಒಂದೆರಡು ಸಾಲು ಹೇಳಲೇ ಬೇಕು. ಅವುಗಳ ಚಾಲಕರಲ್ಲಿ ಬಹು ಪಾಲಿನವರು ಸೇನೆಯಲ್ಲಿ ಶಿಸ್ತಿನ ಸಿಪಾಯಿಗಳಾಗಿ ನಂತರ ಇಲ್ಲಿನ ಹುದ್ದೆಗೆ ಬಂದವರಾಗಿರುತ್ತಿದ್ದರು. ಇವರುಗಳಿಗೆ ವಾಹನಗಳನ್ನು ಪ್ರತಿ ದಿನ ಉತ್ತಮ ಮಟ್ಟದಲ್ಲಿ ಇಡುವುದೂ ದೈನಂದಿನ ಕಾರ್ಯ ಶೈಲಿಯಲ್ಲಿ ಇರುತ್ತಿತ್ತು. ಅವರುಗಳ ಚಾಲನೆಯೂ ಸಹ ಶಿಸ್ತಿನಿಂದಲೇ ಇರುತ್ತಿತ್ತು. ಆದರೂ ಅವರಲ್ಲೂ ಒಬ್ಬಿಬ್ಬರು ತುಂಟತನ ಅಥವಾ ತಾನೇ ರಸ್ತೆ ರಾಜ ಎನ್ನುವ ಭಾವ ಹೊಂದಿದವರೂ ಆಗಿರುತ್ತಿದ್ದರು. ಅವರುಗಳಿಗೆ ಬೇರಾವ ವಾಹನಗಳೂ ತಮ್ಮ ವಾಹನವನ್ನು ಹಿಂದಿಕ್ಕಿ ಮುಂದೆ ಹೋಗುವಂತಿರಲಿಲ್ಲ. ಅಕಸ್ಮಾತ್ ಆ ರೀತಿ ಆದರೆ ಅದನ್ನು ನಿವಾರಿಸಿ ಮುಂದೆ ಹೋಗುವವರೆಗೂ ಅವರಿಗೆ ಸಮಾಧಾನವಿರುತ್ತಿರಲಿಲ್ಲ.

ಹೀಗೆ ಬಸ್ ಪಯಣ ನನ್ನ ಜೀವನದ ಪ್ರಮುಖ ಭಾಗವಾಗಿದೆ. ಈಗಲೂ ಸಹ ನಗರ ಸಾರಿಗೆ ಬಸ್ಸಿನಲ್ಲಿನ ಪ್ರಯಾಣದಲ್ಲಿ ಬಹಳ ಸಮಾಧಾನವಿರುತ್ತದೆ. ಆ ಕಾಲದಂತೆ ತುಂಬಿದ ಬಸ್ಸುಗಳಲ್ಲಿ ನಿಂತು ಅಥವಾ ಫುಟ್ ಬೋರ್ಡಿನಲ್ಲಿನ ಪ್ರಯಾಣ ಕ್ಕೆ ನಿಷಿದ್ಧ ಮಾಡಿಕೊಂಡು ಆಸನ ಖಾಲಿ ಇರುವ ಬಸ್ಸು ಗಳನ್ನೇ ಆಯ್ದು ನನ್ನ ಗುರಿ ಮುಟ್ಟುವ ಅಭ್ಯಾಸ ನಡೆದಿದೆ. ಕಳೆದ ಒಂದೆರಡು ವರ್ಷಗಳ ಹಿಂದೆ ಅಲ್ಲಿನ ನೌಕರರ ಸಂಘಟನೆಗಳು ನಡೆಸಿದ ಮುಷ್ಕರಗಳು ಮನಸ್ಸಿಗೆ ಕಿರಿ ಕಿರಿ ಎನಿಸುತ್ತದೆ. ಆ ಸಮಯದಲ್ಲಿ ಬದಲಿ ವ್ಯವಸ್ಥೆ ಮಾಡಬೇಕಾದ ಸರಕಾರಗಳೇ ಏನೂ ತಿಳಿಯದಂತೆ ಇದ್ದು ದಿನ ಪಯಣಿಗರಿಗೆ ತ್ರಾಸ ನೀಡುವಲ್ಲಿ ತಮ್ಮ ಪಾಲನ್ನೂ ಕೊಡುಗೆಯಾಗಿ ನೀಡಿದ್ದಾರೆ. ಸುಮಾರು ನಾಲ್ಕು ದಶಕಗಳ ಹಿಂದೆ ಇದೇ ರಸ್ತೆ ಸಾರಿಗೆ ಬಸ್ ಸಿಬ್ಬಂದಿ ಮುಷ್ಕರ ನಡೆಸಿದಾಗ ಅಂದಿನ ಸರಕಾರ ಅರೆ ಸೇನಾ ಪಡೆಯಿಂದ ಬದಲಿ ವ್ಯವಸ್ಥೆ ಮಾಡಿ ನಾಗರಿಕರಿಗೆ ಅನುವು ಮಾಡಿಕೊಟ್ಟದ್ದು ಆ ಸಂಸ್ಥೆಯ ಇತಿಹಾಸ ಪುಸ್ತಕದಲ್ಲಿ ಇದೆಯೋ ಇಲ್ಲವೂ ತಿಳಿಯದು. ಆದರೆ ಅದು ಅಂದಿನ ದಿನಗಳ ಪ್ರಯಾಣಿಕರ ಮನಸ್ಸಿನಿಂದ ದೂರ ಹೋಗಿರಲು ಸಾಧ್ಯವಿಲ್ಲ.

ಕಡೇ ಮಾತೆಂದರೆ ಬೆಂಗಳೂರಿನ ಸಾರಿಗೆ ಬಸ್ಸುಗಳ ವಾಹನ ಚಾಲನಾ ಪ್ರೌಢಿಮೆ ಬಗೆಗೆ ಹೇಳಲೇ ಬೇಕು. ಏಕೆಂದರೆ, ಅವರುಗಳು ಪ್ರತಿದಿನ ಆ ದೊಡ್ಡ ವಾಹನಗಳನ್ನು ನಡೆಸುವ ಅನೇಕ ರಸ್ತೆಗಳು ಸಣ್ಣ ಗಲ್ಲಿಗಳಾಗಿರುತ್ತವೆ, ಇಲ್ಲಿ ಅವರು

ಭೇದಿಸಿಕೊಂಡು ಹೋಗ ಬೇಕಾಗಿರುವುದು ಅಭಿಮನ್ಯು ವಿನ ಚಕ್ರ ವ್ಯೂಹವನ್ನೂ ಮೀರಿಸಿದಂತಹುದಾಗಿದೆ. ಸಣ್ಣ ಮಕ್ಕಳು, ಜಾನುವಾರುಗಳು ಇವೆಲ್ಲ ಮೆಟ್ಟಿ ಪ್ರಯಾಣಿಕರನ್ನು ಸುಭದ್ರವಾಗಿ ಕರೆದೊಯ್ಯುತ್ತಾರೆ. ರಸ್ತೆ ಅಪಘಾತಗಳಾದಾಗ ಅವರನ್ನೇ ದೋಷಿಯಾಗಿ ಬಿಂಬಿಸುತ್ತಾರೆ. ಆದರೆ, ಅದರಲ್ಲಿ ಉಳಿದ ವಾಹನಗಳ ಸವಾರರ ಅಡ್ಡಾದಿಡ್ಡಿ ಚಾಲನೆಯೂ  ಮುಖ್ಯವಾಗುತ್ತದೆ. ಅನೇಕ ಮಾರ್ಗಗಳಲ್ಲಿ ಸಂಸ್ಥೆಯವರು ಚಿಕ್ಕ ವಾಹನಗಳನ್ನು ಹತ್ತಿರದ ಜಂಕ್ಷನ್ನಿಗೆ ಸೇರುವಂತೆ ಮಾಡಿದಲ್ಲಿ ಪ್ರಯಾಣಿಕರು ಅಲ್ಲಿಂದ ತಮ್ಮ ಮುಂದಿನ ನಿಲ್ದಾಣಕ್ಕೆ ಸೂಕ್ತ ಬಸ್ಸುಗಳಲ್ಲಿ ಪಯಣಿಸಬಹುದು. ಈಗಿನಂತಿರುವ  ಪ್ರತಿಯೊಂದು ಬಸ್ಸು ಮೂಲ ನಿಲ್ದಾಣದಿಂದ ಸಿಟಿ ಮಾರುಕಟ್ಟೆ, ಕೆಂಪೇಗೌಡ ಬಸ್ ನಿಲ್ದಾಣ ಅಥವಾ ಶಿವಾಜಿನಗರಕ್ಕೆ ಹೋಗುವುದು ತಪ್ಪಿಸಬಹುದು. ಅದರಿಂದ ನಗರ ಮಧ್ಯ ಭಾಗದಲ್ಲಿ ನ ವಾಹನ ದಟ್ಟಣೆಯನ್ನು ಕಡಿಮೆ ಮಾಡಬಹುದು, ಮೇಲೆ ತಿಳಿಸಿರುವ ಅನೇಕ ರೂಟ್ ನಂಬರುಗಳು ಈಗ ಕಾಲವಶವಾಗಿವೆ (ರೂಟ್ ಸಂಖ್ಯೆ 1, 11, 16 ,73 ಹೀಗೆ ಅನೇಕವು ಇಲ್ಲವೇ ಇಲ್ಲ.)

ಕಡೇ ಮಾತು: ಸಿಟಿ ಬಸ್ ಸೇರಿದಂತೆ ಎಲ್ಲ ಬಸ್ ಪ್ರಯಾಣದಲ್ಲಿ ಕಿಟಕಿಯಲ್ಲಿ ಟವೆಲ್ ಹಾಕಿ ಆಸನ ಕಾಯ್ದಿರಿಸಿಕೊಂಡು ಪ್ರಯಾಣ ಮಾಡಿದ ಅನುಭವವೂ ಆಗಿದೆ  ಎಂದು ಹೇಳಿ ಕೊಳ್ಳಲು ಹೆಮ್ಮೆ ಆಗುತ್ತದೆ. ■



# ಸನ್ ಸಂಡೇ ಕಲಿಸಿದ ಎರಡು ಪದಗಳು

ಸುಮಾವೀಣಾ

ಸಂಡೇ ಅಂದ್ ಕೂಡ್ಲೆ ರಿಲ್ಯಾಕ್ಸ್ ಮೂಡ್‌ಗೆ ಕೆಲವರು ಜಾರಿಯೇ ಬಿಡ್ತಾರೆ. ಜಾರಿದ್ರೆ ಸರಿ ಜಾರ್ ಬಿದ್ರೆ ಆಗೋ ಪಜೀತು ಒಂದೇ ಎರೆಡೆ. ಸಂಡೇ ರಜಾ ಮಜಾ ಅನ್ನೋ ಮಾತು ಕೆಲವರಿಗೆ ಅನ್ವಯ ಕೆಲವರಿಗೆ ಈ ಪದಗಳು ನಾಟ್ ಅಲೌಡ್ ಎನ್ನಬಹುದು. ನಮ್ ಭಾನುವಾರ ಅಂದರೆ ಸೂರ್ಯನ ದಿನ ಲವಲವಿಕೆಯಿಂದ ಇರಬೇಕು. ಸಂಡೇ ಇದು ಇಂಗ್ಲಿಷಿನ ಅನುಕರಣೆ . ನಮ್ಮಲ್ಲಿ ವಾರದ ರಜೆ ಒಂದೊಂದು ಕಡೆ ಒಂದೊಂದು ದಿನ ಇರುತ್ತೆ. ಕೆಲವರಿಗೆ ವೀಕ್ಲಿ ಆಫ್ ಸಿಗುತ್ತಲ್ಲ ಆ ದಿನವೇ ಸಂಡೇ

ಸನ್ ಡೇ ಅಂದರೆ ಒಂದರ್ಥದಲ್ಲಿ ಮಗನ ದಿನವೇ ಆತ ಏನ್ ಹೇಳ್ತಾನೋ ಅದನ್ನೇ ಕೇಳಬೇಕು ಇಂತಲ್ಲಿಗೆ ಕರ್ಕೊಂಡು ಹೋಗು ಅಂತಲ್ಲಿಗೆ ಕರ್ಕೊಂಡು ಹೋಗಬೇಕು. ಮಲ್ಟಿಪ್ಲೆಕ್ಸ್ ಇಂತದ್ದೆಲ್ಲ ನಮ್ಮೂರಲ್ಲಿ ಇಲ್ಲ ಇರೋದ್ರಲ್ಲೆ ಹೈಟೆಕ್ ಅನ್ನೋ ಥಿಯೇಟರ್ಗೆ ಸಿನೆಮಾ ನೋಡೋಕೆ ನಮ್ಮ ಮಗನನ್ನ ಕರ್ಕೊಂಡು ಹೋಗಿದ್ವಿ. ಥಿಯೇಟರ್ ಒಳಗೆ ಹೋಗೋಕೂ ಮೊದಲೆ ಅಪ್ಪಾ ಅಪ್ಪಾ ಪಾಯ್ಖಾನೆ ಪಾಯ್ಖಾನೆಗೆ ಹೋಗಣ ಅಂತ ಹಠ ಹಿಡಿದ "ಮನೆಯಲ್ಲೇ ಎಲ್ಲಾ ಕ್ಲಿಯರ್ ಮಾಡ್ಕೋ ಅಂದೆ ಮಾತೇ ಕೇಳಲ್ಲ ಇಲ್ಲಿಗೇ ಬಂದೇ ಕ್ಲಿಯರ್ ಮಾಡ್ಕೋ ಬೇಕು ಇವನಿಗೆ–ಇವನಿಗೆ ಬುದ್ಧಿ ಕಲಿಸ್ತಿರೋರ್ ಬುದ್ಧಿ ಸರಿ ಇದ್ರೆ ಇವೆಲ್ಲಾ ಇರುತ್ವ ? ಎಂದಾಗ ನನಗೋ ಕೋಪ ನೆತ್ತಿಗೇರಿತು. ನಾನು ಸೀಟ್ ನೋಡ್ತೀನಿ ಎಂದು ಅಲ್ಲೇ ನಿಂತು ಅವರ ಮಾತು ಕೇಳಿಸಿಕೊಳ್ಳುತ್ತಿದ್ದೆ.


"ಇರಲಿ ಬಾ ಹೋಗೋಣ" ಎನ್ನುತ್ತಲೇ ಮನೆಯವರು ದರ ದರ ಎಳೆದುಕೊಂಡು ಶೌಚ ಗ್ರಹ ದಾರಿ ಹಿಡಿಯೋಕೂ ಮುಂಚೆ ರೋಹನ್ "ಅಪ್ಪ ಇಲ್ಲಲ್ಲ ! ಥೂ ಇಲ್ಲಲ್ಲ ಪಾಯ್ಖಾನೆಗೆ ಹೋಗೋಣ "ಎನ್ನುತ್ತಾ ಒಂದೇ ಹಠ ಹಿಡಿದ ಮಗನನ್ನು ಸಂಭಾಳಿಸುವಷ್ಟರಲ್ಲಿ ಬಾರಿ ಸುಸ್ತು. ಆದರೆ ಮಗನನ್ನ ಸುಧಾರಿಸಬೇಕಲ್ಲ "ಹೋಗೋ ಇದೆ ಪಾಯ್ಖಾನೆ ಫಿಲ್ಮ್ ಶುರುವಾಗುತ್ತೆ" ಅಂದ್ರೆ ಮಗ ಹೂ ಅಪ್ಪಾ ನಾನೂ ಅದನ್ನೇ ಹೇಳ್ತಿರೋದು ಫೀಲ್ಮ್ ಶುರುವಾಗುತ್ತೆ ಪಾಯ್ಖಾನೆಲಿ ಕೂತ್ಕೊಂಡು ನೋಡಣ ಅಂತ ನಿಮಗೆ ಗೊತ್ತಿಲ್ಲ ಬಿಡಿ ಅಮ್ಮನಿಗೆ ಗೊತ್ತು" ಅನ್ನುತ್ತಿದ್ದ ಹಾಗೆ ಕೋಪ ಶಿಖಿ ತಲುಪಿ .."ನನಗೂ ಗೊತ್ತು ಹೇಳೋ .. ಪಾಯ್ಖಾನೆಗೆ ಇದೆ ದಾರಿ ಅಲ್ಲೆ ಕೂತ್ಕೊಂಡು ಮಾಡ್ಬೇಕು" ಅಂದರೆ ಮಗ ಅಲ್ಲಿ ಯಾವ ಫಿಲ್ಮ್ ಬರುತ್ತೆ? ಆರಾಮಾಗಿ ಕೂತ್ಕೊಂಡು ನೋಡೋದು ಅಪ್ಪಾ ..! ಫಿಲ್ಮ್ ಎಷ್ಟು ಚನ್ನಾಗಿ ಕಾಣ್ಸುತ್ತೆ ಗೊತ್ತಾ?" ಎನ್ನುತ್ತಿದ್ದಂತೆ ಅವರಿಗೆ ಏನೋ ಹೊಳೆದಂತಾಗಿ ಇದೆಂಥಾ ಪರೀಕ್ಷೆ ? ಪಾಯ್ಖಾನೆಲಿ ಫಿಲ್ಮ್ ಬರುತ್ತಾ ? ಜನ ಇರುತ್ತಾರ? ಅಂದರೆ "ಹೂ ಅಪ್ಪಾ? ಅಂದ. ಸ್ಕ್ರೀನ್ ಬರುತ್ತಾ ?ಹೂ ಅಪ್ಪಾ ? ನಾವು ಮೇಲ್ ಕೂತ್ಕೊಂಡ್ ಇರ್ತೀವಲ್ಲ ಅಷ್ಟು ಸೌಂಡ್ ಬರಲ್ಲ" ಎನ್ನುತ್ತಿದ್ದಂತೆ ಅಲ್ಲಿ ಕೂತ್ಕೊಂಡ್ ಜನ ವಿಶಲ್ ಹಾಕ್ತಿರ್ತಾರ ಅಂದರೆ ಹೂ ಅಪ್ಪಾ ಬೇಗ ನಡಿ ಅಂದ್ರೆ ಅಲ್ವೋ ದಡ್ಡಾ ಅದು ಪಾಯ್ಖಾನೆ ಅಲ್ಲ ಬಾಲ್ಕಾನಿ ಅಲ್ಲೆ ಕರ್ಕೊಂಡ್ ಹೋಗ್ತಿನಿ ಆಂತ ಬೇಗ ಕರ್ಕೊಂಡು ಬರುತ್ತಿದ್ದರು ನಾನೂ ಬೇಗ ನಮ್ಮ ಸೀಟಿನತ್ತ ದೌಡಾಯಿಸಿದೆ. ಮಗ "ಹೌದೂ ಅಪ್ಪಾ ಇದೇ ಪಾಯ್ಖಾನೆ ಎಷ್ಟು ಜನ ಕೂತ್ಕೊಂಡು ನೋಡ್ತಾ ಇದ್ದಾರೆ" ಅಂದ

"ಬಾಲ್ಕಾನಿ ಕಣೋ ಇದು .. ಎಂದು ಅರ್ಥ ಮಾಡ್ಸೋದಿಕ್ಕೂ ಫೀಲ್ಮ್ ಶುರು ಆಗೋದಕ್ಕೂ ಒಂದೇ ಆಯ್ತು. ತಂದೆ ಮಗನನ್ನೂ ಫಿಲ್ಮ್ ಶುರುವಾಗೋದನ್ನೂ ಕಾಯುತ್ತಾ ಇದ್ದ ನಾನು "ಮುಗೀತಾ ಎಲ್ಲಾ " ಎನ್ನುತ್ತಿದ್ದಂತೆ ಮಗ ಮೆಲ್ಲಗೆ "ಅಮ್ಮಾ ನಿನಗೆ ಗೊತ್ತಾ ಇಲ್ಲಿಗೆ ಕರ್ಕಂಡು ಬನ್ನಿ ಅಂದರೆ ವಾಶ್ರೂಮಿಗೆ ಕರ್ಕೊಂಡು ಹೋಗ್ತಿದ್ರು ಹಿಹಿ" ಎಂದು ನಕ್ಕರೆ ಅಪ್ಪಾ ಓರೆಗಣ್ಣಲ್ಲಿ ಅಂತೂ ಮಗನಿಂದ ಶಬ್ದ ಭಂಡಾರ ವಿಸ್ತಾರವಾಯ್ತು ಇದು ಸಂಡೇ ಅಲ್ಲ ಸನ್ ಸಂಡೆ ಎಂದಿದ್ದು ಸುಖಾಂತ್ಯಕ್ಕೆ ನಾಂದಿ ಹಾಡಿದಂತಾಯಿತು.

ಫಿಲ್ಮ್ ಮುಗಿದು ಮನೆಗೆ ಹೋಗಬೇಕು ಅನ್ನುವಷ್ಟರಲ್ಲಿ ರೋಹನ್ ಒಂದೇ ಸಮನೆ "ಅಪ್ಪಾ ಪೀಡ ಬೇಕು ಏನದು ಪೀಡ ಅಂದರೆ ಅದೇ ಅಪ್ಪಾ ಪೀಡ ಬೆಳಗ್ಗೆಯಿಂದ ನೋಡ್ತಾ ಇದಿನಿ" ಎಂದ ಮಗನ ಉತ್ತರಕ್ಕೆ ನಮ್ಮೆಜಮಾನ್ರು "ಹೂ ಕಣೋ ನಾನೂ ಬೆಳಗ್ಗೆಯಿಂದ ಅನುಭವಿಸ್ತಾ ಇದೀನಿ ಹೇಳು ಬೇಗ" ಎಂದರೆ ರೋಹನ "ನನಗೆ ಪೀಡ ಅಷ್ಟೇ ಅಪ್ಪಾ .!" ಅಂದರೆ ಅಪ್ಪಾ "ಅಯ್ಯೋ ಮಗನೆ ನಿನಗಲ್ಲ ಪೀಡೆ ಆಗ್ತೀರದು ನನಗೆ" ಎನ್ನುತ್ತಾ ಹಣೆ ಚಚ್ಚಿಕೊಂಡರೆ,

"ಅಪ್ಪಾ ಬೇಜಾರು ಮಾಡ್ಕೋಬೇಡ ನೋಡಲ್ಲಿ ದೊಡ್ಡ ಛತ್ರಿ ಕೆಳಗೆ ಎಷ್ಟೊಂದು ಗುಟ್ಕೆ ಡಬ್ಬ ಜೋಡ್ಸಿದಾರೆ ನೋಡಲ್ಲಿ ." ಎಂದು ಪಾನ್ ಬೀಡಾ ಸ್ಟಾಲ್ನತ್ತ ಕೈತೋರಿಸಿದರೆ

"ಅಯ್ಯೋ! ಮಗನೆ ಎಷ್ಟೊಂದು ಕಲಿಸ್ತಿಯೋ ನೀನೂ. ಅದು ಬೀಡ ಅದಕ್ಕೆ ಹಾಕೋದು ಗುಟ್ಕ ಅದೂ ಇದೂ" ಎನ್ನುತ್ತಿದ್ದಂತೆ "ಸರಿ ಅಪ್ಪಾ ಅದು ಬೀಡ ನೆ ಕೊಡ್ಸು ಸ್ವೀಟ್ ಆಗಿರದು" ಎನ್ನುತ್ತಾ ಸ್ಟಾಲ್ನವನು ರೆಡಿ ಮಾಡಿ ಕೈಗೆ ಕೊಡೋಕೂ ಮುನ್ನ ಆತುರಗೆಟ್ಟು ಒಮ್ಮೆಲೆ ಬಾಯಿಗೆ ತುರುಕಿಕೊಳ್ಳು ತ್ತಾ "ಥ್ಯಾಂಕ್ಸ್ ಅಪ್ಪಾ ಪೀಡ ಸೂಪರ್ .."ಅಂದ ರೋಹನನಿಗೆ ನಮ್ಮೆಜಮಾನ್ರು "ನಿನಗೆ ಬೀಡ ಸೂಪರ್ ನನ್ನ ಪಾಲಿಗೆ ಸೂಪರ್ ಪೀಡ ನೀನೂ .. ಎನ್ನುತ್ತಾ "ಇನ್ನೇನೂ ಇಲ್ಲ ! ಅಲ್ವ! ಎಂದು ತಾನೇ ಘೋಷಣೆ ಮಾಡಿ ಮನೆಕಡೆ ಕಾರು ತಿರುಗಿಸಿದ ನಮ್ಮೆಜಮಾನ್ರು ಸ್ವಲ್ಪ ಗರಂ ಆಗಿದ್ರು. ಅದನ್ನು ಗಮನಿಸದಂತೆ ನಾನು ರೋಹನನಿಗೆ ಇದೆ ನೋಡೋ "ಜಾಯ್ ಆಲುಕ್ಕಾಸ್ "ಅಂದೆ ನಮ್ಮೆಜಮಾನ್ರು ಎಕ್ಸಲೇಟರ್ ಹೆಚ್ಚು ಕೊಟ್ಟಂತೆ ಅನ್ನಿಸಿತು ತಕ್ಷಣ ಎಚ್ಚೆತ್ತು ಕೊಂಡು "ಏಯ್ ಆಕಳು ಅಂದರೆ ಹಸೂ ಅಂತಾನೂ . ಗೊತ್ತಾಯ್ತಾ! ಅಂದೆ ..ಅರ್ಥವಾಗದ ರೋಹನ ಮಿಕಿ ಮಿಕಿ ನೋಡುತ್ತಿದ್ದ .. ■



## ಪತಿಗೊಂದು ಕಿವಿಮಾತು

ಜ್ಯೋತಿ ರಾಜೇಶ್

(ಶ್ರೀ ಕೆ.ಎಸ್. ನರಸಿಂಹ ಸ್ವಾಮಿಯವರ ಕ್ಷಮೆ ಕೋರಿ)
ಮೊಬೈಲ್ ನೋಡುತಲೆಮ್ಮ
ಮರೆತಿಹಳು ಎನ್ನದಿರಿ....
ನಿಮ್ಮ ಮೊಬೈಲ್ನಲ್ ನೀವೂ ಮುಳುಗಿ ಬಿಟ್ಟು.....
ನಿಮ್ಮ ಹಾಗೇ ನಾನು...
ಹಗಲಿನಲಿ, ಇರುಳಿನಲಿ
ವಾಟ್ಸಪ್ಪ, ಯೂ ಟ್ಯೂಬ್ನ ನೋಡುತಿಹೆನು....

ಫೇಸ್ಬುಕ್ನ ಗೋಡೆಯಲಿ ಬರಹವನು ಹಾಕುವಾಗ
ಕಾಡುವುದು ಅಡಿಗೆಯಾಗಿಲ್ಲ ಎಂಬ ನೆನಪೂ....
ಲೈಕ್~ಕಮೆಂಟ್ ನೋಡುತಲಿ
ಮನವೆಲ್ಲ ಖುಷಿಯಾಗೆ.....
ಹಸಿವ್ ಮರೆತು ಹೋಗುವುದ ಹೇಗ್ ಹೇಳಲಿ....

ಬರಿ ಕಾಲ ಕಳೆಯಲೆಂದು ನಾನಿದನು  ಹಿಡಿದಿಲ್ಲ....
ಕಲಿತಿರುವೆ ಎಷ್ಟೊಂದು ಹೊಸ ರುಚಿಯನು
ಅದನೆಲ್ಲ ಮಾಡುತಲಿ, ಫೋಟೋನೂ ಹಾಕುತಲಿ
ಎಷ್ಟೊಂದು ಹೆಸರನ್ನು ಪಡೆದಿರುವೆನು....

ವಿಡಿಯೋ ಕಾಲ್ ಪ್ರತಿದಿನವು ಎಲ್ಲರಿಗು ಮಾಡುವುದು
ನಿಮಗಿಷ್ಟವಿಲ್ಲವೆಂದು ನಾನು ಬಲ್ಲೆ
ದಿನಕೊಂದು ನಾಲ್ಕ್ ಗಂಟೆ, ಅಷ್ಟೆ ಮಾತಾಡುವುದು
ಆಮೇಲೆ ಇರುವೆನೇ ನಾನಿದರಲೆ?.....
ಒಂದೆರೆಡ್ ಗಂಟೆ ಇನ್ಸ್ಟಾ.... ಆಮೇಲೆ ತುಸು ಚಾಟ್ಸು
ಟ್ಯಾಗ್ ಮಾಡ್ದ ಚಾಲೆಂಜ್ಗೆ ಉತ್ತರಿಸುವುದು....

ಮೊಬೈಲ್ನಲ್ಲಿ ಚಾರ್ಜ್ ಇಲ್ಲ, ರೀಚಾರ್ಜೂ ಮಾಡ್ಸಿಲ್ಲ
ಇನ್ನು ಕಲಿಯುವ ವಿಷಯ ಬಹಳವಿಹುದು....
ಯಾವುದನಗಲಿದರೂ ಬಿಡದ ಮಾಯೆಯ ತೆರದಿ
ಕವಿವ ಮಾಯೆ ಈ ಜಂಗಮವಾಣಿಯದು....
ಬಿಟ್ಟು ಬಿಡುವೆನು ಬೇಗ,
ಬಯ್ಯದಿರಿ, ಕರುಬದಿರಿ, ಚುಚ್ಚದಿರಿ
ಮೊನಚಾದ ಮಾತನೆಸೆದೂ.....

■

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**ದಂನಆ**

- ✓ ಜನವರಿ 1 ರಂದು ಬರುವ ಹೊಸ ವರ್ಷ ಏಕೆ ಗುಟ್ಟಾಗಿ ರಾತ್ರಿ ಬರುತ್ತೆ? ನಮ್ಮ ಉಗಾದಿ ತರಹ ರಾಜಾರೋಷವಾಗಿ ಬೆಳಿಗ್ಗೆ ಯಾಕೆ ಬರೊಲ್ಲ?
- ✓ ಜನವರಿ 1ಕ್ಕೂ ಯುಗಾದಿಗೂ ವ್ಯತ್ಯಾಸವೇನು? ಜನವರಿಯಲ್ಲಿ ಹೊಟ್ಟೆಗೆ ಎಣ್ಣೆ. ಯುಗಾದಿಯಲ್ಲಿ ತಲೆಗೆ ಎಣ್ಣೆ.
- ✓ ಜನವರಿ 1 ಈಸ್ ದಿ ಫಸ್ಟ್ ಬ್ಲಾಂಕ್ ಪೇಜ್ ಆಫ್ ಎ 365 ಪೇಜ್ ನ್ಯೂ ಬುಕ್. ರೈಟ್ ಎ ಗುಡ್ ಒನ್.
- ✓ ಈ ವರ್ಷ 12 ತಿಂಗಳು ಯಶಸ್ಸು, 52 ವಾರಗಳ ನಗು, 365 ದಿನಗಳ ಮೋಜು, 8760 ತಾಸುಗಳ ಖುಷಿ, 525600 ನಿಮಿಷಗಳ ಅದೃಷ್ಟ ಮತ್ತು 3153600 ಸೆಕೆಂಡ್‌ಗಳಷ್ಟು ಸುಖ ಎಲ್ಲರಿಗೂ ಸಿಗಲಿ.
- ✓ ಪಾಲಿಸಬಹುದಾದ ಹೊಸ ವರ್ಷದ ನಿರ್ಣಯ: ಈ ವರ್ಷ ಯಾವುದೇ ಡಯೆಟ್ ಮಾಡುವುದಿಲ್ಲ.
- ✓ ಕಳೆದ ವರ್ಷ 10 ಕಿಲೊ ತೂಕ ಕಡಿಮೆ ಮಾಡಲು ಉದ್ದೇಶಿಸಿದ್ದೆ. ಅದರದ್ದು 15 ಕಿಲೊ ಬಾಕಿ ಇದೆ.
- ✓ ಗುಡ್ ರೆಸಲ್ಯೂಷನ್ಸ್ ಆರ್ ಸಿಂಪ್ಲಿ ಚೆಕ್ಸ್ ದಟ್ ಮೆನ್ ಡ್ರಾ ಆನ್ ಎ ಬ್ಯಾಂಕ್ ವೇರ್ ದೆ ಹ್ಯಾವ್ ನೊ ಅಕೌಂಟ್.
- ✓ ನೀವೊಬ್ಬರೇ ಮೂರ್ಖರಾಗಲು ನಾನು ನಿಮ್ಮನ್ನು ಬಿಡೊಲ್ಲ–ಇದೇ ನನ್ನ ಈ ವರ್ಷದ ಸಂಕಲ್ಪ.
- ✓ ಇನ್ನಷ್ಟು ಕನಸು ಕಾಣುವುದೇ ನನ್ನ ಹೊಸ ವರ್ಷದ ನಿರ್ಣಯ. ಅಂದರೆ ನಾನು ಇನ್ನಷ್ಟು ನಿದ್ರಿಸಬೇಕು ಎಂದಾಯಿತು.
- ✓ ಹೊಸ ವರ್ಷವನ್ನು ಕುಡಿದೇ ಸ್ವಾಗತಿಸಲು ಕಾರಣ? ಹೊಸ ವರ್ಷವನ್ನು ಕಿಕ್ ಸ್ಟಾರ್ಟ್ ಮಾಡಲು ಅದೇ ಉತ್ತಮವಂತೆ.
- ✓ ಹೊಸ ವರ್ಷದ ನಿರ್ಣಯಗಳು ತುಂಬಾ ಆದವು. ಏಕೆಂದರೆ ಅವುಗಳನ್ನು ಮುರಿಯಲು ನನಗೆ ಇಡೀ ದಿನ ಬೇಕಾಗಿ ಬಂದಿತು.
- ✓ 365 ನ್ಯೂ ಡೇಸ್ 365 ನ್ಯೂ ಎಕ್ಸ್‌ಕ್ಯೂಸಸ್.
- ✓ ಹೊಸ ವರ್ಷಾಚರಣೆಯನ್ನು ಯಾರು ದ್ವೇಷಿಸುತ್ತಾರೆ? ಪೌರ ಕಾರ್ಮಿಕರು. ಏಕೆಂದರೆ ಮರುದಿನ ಅವರು ರಾಶಿ ರಾಶಿ ಕಚಡ ಎತ್ತಬೇಕಲ್ಲ!

■

# ರಂಗೋಲಿಯ ಚಕ್ರವ್ಯೂಹದಲ್ಲಿ

ಕವಿತಾ ಹೆಗಡೆ ಅಭಯಂ

ದಿನಾ ಬೆಳಗೆದ್ದು ಹೊರಗಡೆ ಬಂದರೆ ಪಕ್ಕದ ಮನೆಯ ಗೇಟಿನ ಮುಂದೆ ರಂಗು ರಂಗಿನ ರಂಗೋಲಿಯದೇ ವೈಭವ. ಜ್ಯಾಮಿಟ್ರಿ ಏನೂ ಬರದೇ ಫೇಲ್ ಆಗಿ ಶಾಲೆ ಬಿಟ್ಟು ಮದುವೆಯಾದ ಪದ್ಮಾ ಕರಾರುವಾಕ್ಕಾದ ಎಲ್ಲ ಅಳತೆಯ ಸಂಕೀರ್ಣ ರಂಗವಲ್ಲಿಯ ಗೆರೆ ಎಳೆದು ಬಣ್ಣ ತುಂಬಿ ಹೆಮ್ಮೆಯಿಂದ ಒಳಗೆ ಹೋಗುವಾಗ ಡಬಲ್ ಡಿಗ್ರಿ ಮಾಡಿದ ನಾನು ಹುಣಸೆ, ನೆಲ್ಲಿ ಒಟ್ಟಿಗೆ ತಿಂದ ಮುಖ ಮಾಡಿಕೊಂಡು ಗಾಬರಿಯಿಂದ ಒಳಗೆ ಓಡಿಹೋಗುತ್ತಿದ್ದೆ. ರಂಗೋಲಿ ಎಂಬ ವಿದ್ಯೆ  ನನ್ನನ್ನು ಚಕ್ರವ್ಯೂಹದಲ್ಲಿ ಸಿಕ್ಕಿಸಿ ಕಾಡಿದರೆ ಏನು ಮಾಡೋದು ಮತ್ತೆ?

ಚಿಕ್ಕವಳಿರುವಾಗ ಒಮ್ಮೆ ರಂಗೋಲಿ ಸ್ಪರ್ಧೆಯೊಂದರಲ್ಲಿ ಎಲ್ಲರೂ ಚುಕ್ಕಿ ರಂಗವಲ್ಲಿ ಹಾಕಿದರೆ ನಾನು ಅದೊಂದು ವಿದ್ಯೆ ಬಾರದೆ ಭರತ ನಾಟ್ಯ ಮಾಡೋ ಹುಡುಗಿಯೊಬ್ಬಳನ್ನು ಫ್ರೀ ಹ್ಯಾಂಡ್ ಆಗಿ ಬಿಡಿಸಿ, ಬಣ್ಣ ತುಂಬಿ ಸೈ ಅನಿಸಿಕೊಂಡೆ. ಅದೇ ಕಡೆಯಾಗಿಹೋಯ್ತು , ಚುಕ್ಕಿ ರಂಗೋಲಿ ಸಿಟ್ಟು ಮಾಡಿಕೊಂಡು ನನಗೆ ಡೈವೋರ್ಸ್ ಕೊಟ್ಟು ಮತ್ತೆ ಮುಖ ನೋಡದೆ ಮಾಯವಾಗಿಹೋದ್ರೆ ನಂದೇನು ತಪ್ಪು? ಎಷ್ಟು ಪ್ರಯತ್ನ ಮಾಡಿದರೂ "ಮುನಿಸು ತರವೇ ಮುಗುದೇ ." ಅಂತ ಹಾಡಿದರೂ ಕೈಯಿಂದ ಬಿಟ್ಟ ಚುಕ್ಕಿ ಸಾಲಲ್ಲೇ ಇರಲ್ಲ. ಬಿಳಿ ಪುಡಿಯನ್ನು ಕೈಲಿ ಹಿಡಿದುಕೊಂಡು ಮೂವತ್ತಮೂರು ಕೋಟಿ ದೇವರ ಧ್ಯಾನ ಮಾಡಿ ಎಳೆ ಬಿಟ್ಟರೆ ಒಂದು ಕಡೆ ದಪ್ಪ, ಇನ್ನೊಂದು ಕಡೆ ಮಾಯ, ಮತ್ತೊಂದು ಕಡೆ ಸಪೂರಕ್ಕೆ ಬಿದ್ದು ಯಾವುದೋ ಅಡ್ಡ ಕಸುಬಿ ಹಾಕಿದ ರಂಗೋಲಿ ಅಂತ ಮಂಗವೂ ಹೇಳಬಹುದು. ಅಂತೂ ನಾನೇ ಹುಟ್ಟಿಸಿದ ಹೆಗ್ಗಣ ಮುದ್ದುಮುದ್ದು ಅಂತ ಅದಕ್ಕೆ ಬಣ್ಣ ತುಂಬಿದರೆ ಡಿಸೈನೊಳಗೆ ಮಾತ್ರ ಬಣ್ಣ ಬೀಳದೆ ಹಟ ತೊಟ್ಟು ಬಿಳೀ ಎಳೆಗಳ ಮೇಲೇ ಬಿದ್ದು ನೋಡಿದವರೆಲ್ಲ ಮುಖಕ್ಕೆ ಸೆರಗು, ದುಪಟ್ಟಾ, ಏನೂ ಸಿಗದಿದ್ರೆ ಕೈ ಅಡ್ಡ ಹಿಡಿದು ಕಿಕಿಕಿಕಿ ನಕ್ರೆ ಅದನ್ನ ಏನು ದೊಡ್ಡ ಉತ್ತೇಜನ ಅಂದುಕೊಳ್ಳಲಾ?

ಈ ಕಾಟವೇ ಬೇಡ ಅಂತ ಒಂದಿಷ್ಟು ರಂಗೋಲಿ ಅಚ್ಚು ತಂದಿಟ್ಟುಕೊಂಡು ಹಬ್ಬಕ್ಕೆ ತಕ್ಕ ಅಚ್ಚಿನ ರಂಗೋಲಿ ಬಿಟ್ಟು ಸುಮ್ಮನಾಗುತ್ತಿದ್ದೆ. ಯಾವ ಹೆಂಗಸನ್ನು ನೋಡಿದರೂ ಲೀಲಾಜಾಲವಾಗಿ ರಂಗೋಲಿ ಹಾಕಿ ಬಣ್ಣ ತುಂಬುವುದನ್ನು ನೋಡಿ ನನಗೆ ಮಾತ್ರ ಇದ್ಯಾಕೆ ಬ್ರಹ್ಮವಿದ್ಯೆಯಾಗಿಹೋಗಿದೆ ಅನಿಸುತ್ತಿತ್ತು.

ಒಂದು ದಸರಾ ಹಬ್ಬದ ದಿನ ಚೆನ್ನಾಗಿ ಹಬ್ಬದೂಟ ಮಾಡಿ ಕಣ್ತುಂಬ ನಿದ್ರೆ ಮಾಡಿ ಸ್ವಪ್ನಲೋಕದಲ್ಲಿ ಸ್ವರ್ಗದ ಮಹಾರಾಣಿಯಾಗಿ ಅಧಿಕಾರ ಮಾಡುತ್ತಿದ್ದವಳನ್ನು ಕಾಲಿಂಗ್ ಬೆಲ್ ಕಿರ್ರೋಮರ್ರೋ ಎಂದು ಕೂಗಿ ಎಬ್ಬಿಸಿತು. ಪಾರಡೈಸ್ ಲಾಸ್ಟ್ ಆದ ದುಃಖದಲ್ಲಿ ಭೂಲೋಕಕ್ಕೆ ಅವತೀರ್ಣಗೊಂಡು ಬಾಗಿಲು ತೆರೆದರೆ ಪಕ್ಕದ ಮನೆಯಾಕೆ, "ಅಕ್ಕಾ ಬರ್ರಿ, ಮನೀ ಮುಂದ ನರಸಿಂಹ ದೇವ್ರ ತೇರು ಬರತೈತಿ, ರೋಡ್ ಮ್ಯಾಗ್ ರಂಗೋಲಿ ಹಾಕೋಣ. ಎಲ್ಲಾರೂ ಹಾಕಾಕ್ ಹತ್ತಾರ," ಅಂದಳು! ಹಾಗೆ ಅಂದುಬಿಟ್ಟಳು!

"ಎಲೆಲೆ ನಾರಿಯೆ ಕತ್ತಿಯ ಕೊಡುವೆ

ಒಡನೆ ಎನ್ನ ಕತ್ತನು ಸೀಳಿಬಿಡು"

ಎಂದು ಮನದಲ್ಲೇ ಕೂಗಿಕೊಂಡೆ. ಪಕ್ಕಾ ಕಂಪನಿ ನಾಟಕದ ಶೈಲಿಯಲ್ಲಿ,

"ಏನು? ರಂಗೋಲಿಯೆ? ತರಳೆಯೇ, ನೀನು ಏನು ಮಾತನಾಡುತ್ತಿದ್ದೀ ಎನ್ನುವ ಪರಿಜ್ಞಾನವಿದೆಯೇ? ಯಾರಲ್ಲಿ ಯಾವ ಕೆಲಸವನ್ನು ಹೇಳಬೇಕೆನ್ನುವ ಸಾಮಾನ್ಯ ಜ್ಞಾನವೂ ಇಲ್ಲದೇ ಹೋಯಿತೆ? ಇಂತು ಮತಿಭ್ರಷ್ಟಳ ಹಾಗೆ ಇಂದು ನೀನು ವರ್ತಿಸುತ್ತಿರುವ ಕಾರಣವೇನೆಂದು ತಿಳಿಯಬಹುದೆ?" ಎಂದು ಜೋರಾಗಿ ಡೈಲಾಗ್ ಹೇಳಿದೆ. ಒಂದು ಅಕ್ಷರವೂ ಹೊರಗಡೆ ಬಾರದೆ "ಹಿಹಿ ಹಾಹಾ.." ಎಂದಷ್ಟೇ ಹೊರಗೆ ಬಂತು! ಅವಳು ಆಗಲೇ ಪಟ್ಟೆ ಸೀರೆ ಉಟ್ಟುಕೊಂಡು ಸೊಂಟದ ಮೇಲೆ ಎಳೇ ಶಿಶುವನ್ನು ಪೇರಿಸಿಕೊಂಡು ಇನ್ನೊಂದು ಕೈಲಿ ರಂಗೋಲಿ ಪುಡಿಯ ಬುಟ್ಟಿ ಹಿಡಿದುಕೊಂಡು ಹೋಗುವಾಗ ನಾನು ಯಾವ ರೀತಿಯ ಸಾವು ಉತ್ತಮ ಎಂಬ ಜಿಜ್ಞಾಸೆಯಲ್ಲಿ ತೊಡಗಿದೆ.

ಫಟಾಫಟ್ ಡ್ರೆಸ್ ಚೇಂಜ್ ಮಾಡಿಕೊಂಡು ವಿಪರೀತ ಗಾಬರಿ ಬಿದ್ದವಳ ಹಾಗೆ ಮೊಬೈಲ್ ಕಿವಿಗೆ ಸಿಕ್ಕಿಸಿಕೊಂಡು ಗಾಡಿ ಹೊರಗಡೆ ತೆಗೆದು,

"ಅರ್ಜೆಂಟ್ ಆಗಿ ನನ್ನ ಫ್ರೆಂಡ್ ಹತ್ರ ಹೋಗ್ತಾ ಇದ್ದೀನಿ.. ಪಾಪ.. ಆಕ್ಸಿಡೆಂಟ್ ಆಗಿದೆಯಂತೆ ." ಎಂದು ಪಕ್ಕದಮನೆ ಪದ್ಮಳಿಗೆ ಕೂಗಿ ಹೇಳಿ ಭರ್ ಅಂತ ಗಾಡಿ ಬಿಟ್ಟುಕೊಂಡು ಹೋಗಿಬಿಟ್ಟೆ. ಸದ್ಯ.. ಮರ್ಯಾದೆ ಉಳೀತು. ರಸ್ತೆಯಲ್ಲಿ ನಾನು ಅಷ್ಟು ದೊಡ್ಡ ರಂಗೋಲಿ ಹಾಕಿದ್ರೆ ಹೇಗಿರ್ತಾ ಇತ್ತು ಎಂಬುದು, ಅದನ್ನು ನೋಡಿ ಆ ಚಾಲಾಕಿ ಹೆಂಗಸರು ಎಷ್ಟು ನಗ್ತಾ ಇದ್ರು ಅನ್ನೋದನ್ನು ನೆನೆದು ಎದೆಬಡಿತ ಏರಿಹೋಯ್ತು. ಅಂತೂ ಅವತ್ತು ತಪ್ಪಿಸಿಕೊಂಡೆ.

ಆದರೇನು? ದೀಪಾವಳಿ ಬಂತು. ಕಾಲನಿಯ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, ಎಲ್ಲರಿಗೂ ಕಡ್ಡಾಯ ಅನ್ನೋ ಮೆಸೇಜ್ ಬಂತು. ಹಿಂದಿನ ದಿನವೇ ಅಮ್ಮನ ಊರಿಗೆ ಓಡಿಹೋಗಿ ಮೂಗು ಉಳಿಸಿಕೊಂಡೆ. ಆಮೇಲಿಂದ ರಂಗೋಲಿ ಸ್ಪರ್ಧೆ ಅಥವಾ ಹಾಕುವ ಸನ್ನಿವೇಶದಿಂದ ಹೇಗೆ ಪಾರಾಗಬಹುದು ಎಂದು ಉಚಿತ ಸಲಹೆಗಳನ್ನು ಪಟ್ಟಿಮಾಡಿ ಇಟ್ಕೊಂಡೆ. ಎಫೆಕ್ಟಿವ್ ಆಗಿ ಯೂಸ್ ಕೂಡ ಮಾಡಿದೆ.

ಆದರೂ ಶಾಲೆಯ ಪುಟ್ಟ ಪುಟ್ಟ ಮಕ್ಕಳು ಕೂಡ ಗಂಡು, ಹೆಣ್ಣು, ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಅನ್ನೋ ಭೇದವಿಲ್ಲದೆ ಮನಮೋಹಕ ರಂಗೋಲಿ ಹಾಕಿ ಪದಕ ಗೆಲ್ಲುವಾಗ ಹೊಟ್ಟೇಲಿ ಸಂಕಟ ಆಗಿ ಏನೇ ಆಗಲಿ, ಇದರ ಖೂಬಿ ತಿಳಿದುಕೊಂಡೇ ಶುದ್ಧ ಎಂದು ಪ್ರಾಕ್ಟೀಸ್ ಶುರುಮಾಡಿದೆ. ಕೆಳಗೆ ಕುಳಿತು ಕಾಲು ನೋವು ಮಾತ್ರ ಶುರುವಾಯ್ತು. ಛಲ ಬಿಡದ ತ್ರಿವಿಕ್ರಮ, ದುರ್ಯೋಧನ, ನಕ್ಷತ್ರಿಕ ಎಲ್ಲರನ್ನೂ ಆವಾಹನೆ ಮಾಡಿಕೊಂಡು ಪ್ರಾಕ್ಟೀಸ್ ಮಾಡಿದೆ. ಹಿ.. ಹಿ ಹೀ . ಪರಿಣಾಮ ಭಾರತ ಗಣಿತಕ್ಕೆ ಕೊಟ್ಟ ದೊಡ್ಡ ಕೊಡುಗೆ. ಅಷ್ಟೇ.

ಬರ್ತಾ ಬರ್ತಾ ಗೊತ್ತಾಯ್ತು. ಭಾರತದಲ್ಲಿ ಹುಟ್ಟಿದಮೇಲೆ ರಂಗೋಲಿ ಹಾಕೋಕೆ ಬರಲ್ಲ ಅನ್ನೋ ಹಾಗಿಲ್ಲ. ಏನಾದ್ರೂ ಮಾಡಲೇಬೇಕು. ಕಲಿಯಲೇಬೇಕು. ಅದಕ್ಕೇ ಹಳೇ ರಂಗೋಲಿಗಳಿಗೆ ನಾನೇ ನಮಸ್ಕಾರ ಹೇಳಿ ನನ್ನದೇ ಹೊಸ ಹೊಸ ಪದ್ಧತಿಯ ರಂಗೋಲಿ ಹಾಕಿ ಶಾಭಾಷ್ ಅನ್ನಿಸಿಕೊಳ್ಳುತ್ತಿದ್ದೇನೆ. ಸತ್ಯ ನಿಮ್ಮ ಹತ್ರನೇ ಇರ್ಲಿ ಆಯ್ತಾ? ಓಯ್ ನಿಮ್ಮಲ್ಲಿ ಯಾರಾದ್ರೂ 'ರಂಗೋಲಿ ಹಾಕೋಕೆ ಬಾ ಅಥವಾ ಹಾಕೋಕೆ ಹೇಳಿಕೊಡ್ತೀನಿ ಬಾ,' ಅಂತ ಮಾತ್ರ ಕರೀಬೇಡಿ!

■

# ದಂಪತ್ವೈರಿ

✍ಸಂತೋಷ ತಾಮ್ರಪರ್ಣಿ

ಮಾದರಿ ದಾಂಪತ್ಯಕ್ಕೆ ಹೆಸರುವಾಸಿಯೆಂದರೆ ಸಾರಂಗನದು–ಎಂಥಾ ಚೆನ್ನಾಗಿ ಹೆಂಡತಿಯೊಂದಿಗೆ ಹೊಂದಿಕೊಂಡು ಹೋಗುತ್ತಿದ್ದ. ಅದಕ್ಕೆ ಬೇರೆ ಯಾರ ದಂಪತಿಗಳ ಉದಾಹರಣೆಯೂ ಸರಿಯಾಗಲ್ಲ.ಶಿವ–ಪಾರ್ವತಿ, ಲಕ್ಷ್ಮೀ–ವಿಷ್ಣು, ಕೃಷ್ಣ–ರುಕ್ಮಿಣಿಯರಂತೂ ಸಮೀಪವೇಬರಲ್ಲ. ಇನ್ನು ರಾವಣ–ಮಂಡೋದರಿ, ದುರ್ಯೋಧನ–ಭಾನುಮತಿಯರನ್ನಂತೂ ಪಾಪ ಯಾರೂ ಲೆಕ್ಕಕ್ಕೇ ತಗೊಳ್ಳಲ್ಲ.

ಸಾರಂಗ ಮತ್ತವನ ಹೆಂಡತಿಯದು ಅನ್ಯೋನ್ಯ ದಾಂಪತ್ಯ. ಆಕೆ ಬಾಯಾರಿದರೆ, ಈತ ನೀರು ಕುಡಿಯುತ್ತಿದ್ದ; ಆಕೆಗೆ ಹಸಿವೆಯೆಂದರೆ, ಈತ ಊಟ ಮಾಡುತ್ತಿದ್ದ; ಅವಳಿಗೆ ಜ್ವರವೆಂದರೆ, ಈತ ಮಾತ್ರೆ ನುಂಗುತ್ತಿದ್ದ; ಅವಳಿಗೆ ಸೆಖೆಯಾದರೆ ಇವನು ಬೆವರುತ್ತಿದ್ದ; ಅವಳಿಗೆ ನೆಗಡಿಯಾದರೆ, ಈತ ಸಿಂಬಳ ಸುರಿಸುತ್ತಿದ್ದ; ಅವಳು ಮುಟ್ಟಾದರೆ, ಈತ ಹೊರಗೆ ಕೂಡುತ್ತಿದ್ದ–ನಾಲ್ಕು ದಿನ! ಅವಳೇನಾದರೂ ಗರ್ಭಿಣಿಯಾಗಿದ್ದರೆ ಈತ ಮಗು ಹೆರುತ್ತಿದ್ದನೇನೋ? ಆದರೆ, ಅದನ್ನು ನೋಡುವ ಸಂದರ್ಭ ಜನತೆಗೆ ಸಿಕ್ಕಿರಲಿಲ್ಲ – ಅವರ ಪುಣ್ಯದ ಕೊಡ ಇನ್ನೂ ಭರ್ತಿಯಾಗಿರಲಿಲ್ಲ.

ಚುನಾವಣೆ ಬಂತು. ಗಂಡ–ಹೆಂಡಿರಿಬ್ಬರದೂ ಬೇರೆ ಬೇರೆ ಪಾರ್ಟಿ! ಇಂಥಾ ಅನ್ಯೋನ್ಯ ದಾಂಪತ್ಯದಲ್ಲಿ ಬಿರುಗಾಳಿಯೆದ್ದಿತು. 'ನೀರಿಲ್ಲದ ಹಾಲಿಲ್ಲ' ಅನ್ನುವುದರಷ್ಟೇ ಸಾರ್ವಕಾಲಿಕ ಸತ್ಯ 'ವಿರಸವಿಲ್ಲದ ದಾಂಪತ್ಯವಿಲ್ಲ' ಅನ್ನುವುದು.

ಹೂವು, ಹಣ್ಣು, ತಲೆ, ಕೈಕಾಲುಗಳೆಲ್ಲ ಪಾರ್ಟಿಗಳ ಚಿಹ್ನೆಗಳಾಗಿರಲೇ ಇಲ್ಲ; ಏನಿದ್ದರೂ ಕತ್ತೆ, ಕುದುರೆ, ನಾಯಿ, ಬೆಕ್ಕುಗಳೇ ಪಾರ್ಟಿಗಳ ಚಿಹ್ನೆಗಳು– ಚುನಾವಣಾ ಪ್ರಾಧಿಕಾರದವರು ಪ್ರಾಣಿಪ್ರಿಯಾ ಸಂಘದವರಿದ್ದಿರಬೇಕು. ಪ್ರಾಣಿಗಳಿಗೆ ಮಾತು ಬರದಿದ್ದೇ ಒಳ್ಳೆಯದಾಯಿತು, ಇಲ್ಲವೆಂದರೆ ಮಾನಹಾನಿ ಮೊಕದ್ದಮೆ ಹಾಕುತ್ತಿದ್ದವು–ಕೋರ್ಟಿನಲ್ಲಿ!

ಗಂಡನಿಗೆ ಕತ್ತೆಯ ಮೇಲೆ ಪ್ರೀತಿಯಾದರೆ, ಹೆಂಡತಿಗೆ ಬೆಕ್ಕಿನ ಮೇಲೆ–ಸ್ವಜನ ಪಕ್ಷಪಾತಿಗಳು! ಚುನಾವಣಾ ಪ್ರಚಾರ ಜೋರಾದಷ್ಟು ಗಂಡ–ಹೆಂಡಿರ ಜಗಳ ತಾರಕಕ್ಕೆ ಹೋಯಿತು. ಇಬ್ಬರಿಗೂ ರಾಜಕಾರಣ ಗೊತ್ತಿರಲಿಲ್ಲ ಅಂದಲ್ಲ, ಅದರ ಮದ ಇನ್ನೂ ತಲೆಗೇರಿರಲಿಲ್ಲ–ಇಲ್ಲವಾದರೆ ಇಬ್ಬರ ಜಗಳ ಬೀದಿಯಲ್ಲಿ ಬಂದು ನಿಲ್ಲುತ್ತಿತ್ತು.

ಚುನಾವಣೆಯಲ್ಲಿಯೂ ದುಡಿದುಕೊಳ್ಳದವನು ಎಂದೂ ದುಡಿಯಲಾರ. ಎಲ್ಲರೂ ಸಮಾನರು ಅಂತಾ ಅನ್ನಿಸುವುದು ಚುನಾವಣೆ ಕಾಲದಲ್ಲಿ ಮಾತ್ರ! ಅಂತೆಯೇ, ಬರಗಾಲದಲ್ಲಿ ನೀರು ಕೊಡದಿದ್ದರೂ ಚುನಾವಣೆಯಲ್ಲಿ ಬೀರು ಕಡಿಮೆ ಬೀಳಲಿಲ್ಲ. ಹೆಂಡ ಹೊಳೆಯಾಗಿ ಹರಿಯಲಿಲ್ಲ, ನಲ್ಲಿಯಲ್ಲೇ ಬರತೊಡಗಿತು–ಪಾಪ, ಮತದಾರರಿಗೆ ತುಂಬಿಕೊಂಡು ಬರುವ ತೊದರೆ ಆಗದಿರಲೆಂದು. ಭಾರತ ಬಡದೇಶ ಅನ್ನುವವರು ಚುನಾವಣೆ ಸಮಯದಲ್ಲಿಭಾರತವನ್ನುನೋಡಿಲ್ಲವೆಂದೇ ಹೇಳಬೇಕು.

ಐದು ವರ್ಷಕ್ಕೊಮ್ಮೆ ಬರುವ ಪುಷ್ಕರ– ಚುನಾವಣೆ (ಕೆಲವೊಮ್ಮೆ ಅಕಾಲದಲ್ಲೂ ಬರುವುದುಂಟು!) ಅದರಲ್ಲಿ ಎಲ್ಲರೂ ಮಿಂದೆದ್ದರು. ಅವರವರ ಯೋಗ್ಯತೆಗೆ ತಕ್ಕಂತೆ

ಬಟ್ಟೆಗಳನ್ನು ಒದ್ದೆಮಾಡಿಕೊಂಡರು. ಸಾರಂಗನ ಮನೆಗೆ ಫ್ರಿಜ್ಜು, ಟಿವಿ, ಮಿಕ್ಸಿಗಳೆಲ್ಲ ಬಂದವು– ತಾನು ಸ್ವಂತ ದುಡಿದು ಇವನ್ನೆಲ್ಲ ತರಲಾಗುತ್ತಿತ್ತೇ ಅವನಿಂದ? ಹಾಗಂತ ಅವನ ಹಣೆಗೆ ಅಂಟಿದ್ದ ಬಡವನ ಪಟ್ಟಿಯೇನೂ ಕಳಚಲಿಲ್ಲ. ಚುನಾವಣೆ ಮುಗಿಯಿತು, ಫಲಿತಾಂಶವೂ ಬಂತು – ಹೆಂಡತಿಯ ಬೆಕ್ಕು ಹಾಲು ಕುಡಿಯಿತು, ಸಾರಂಗನ ಕತ್ತೆ ನೆಲ ಕಚ್ಚಿತು. ಹೆಂಡತಿಯ ಮುಂದೆ ಸೋಲುವುದೇ? ಸಾರಂಗನ ಕತ್ತೆಗಿಂತ ಹೆಚ್ಚು ಪೆಟ್ಟು ಅವನ ಅಹಂಗೆ ಬಿತ್ತು.

ಆದರೂ, ಅವರಿಬ್ಬರ ಮಧ್ಯೆ ಅನ್ಯೋನ್ಯತೆಯೇನೂ ಕಡಿಮೆಯಾಗಲಿಲ್ಲ– ಸ್ವಲ್ಪ ಬದಲಾವಣೆ ಆಗಿತ್ತು ಅಷ್ಟೇ. ಅವಳಿಗೆ ಹಸಿವೆಯಾದರೂ, ಈತನೇ ತಿಂದುಬಿಡುತ್ತಿದ್ದ; ಅವಳಿಗೆ ನೀರಡಿಕೆಯಾದರೂ, ಅವಳಿಗೆ ಸಿಗದಂತೆ ಈತನೇ ನೀರು ಕುಡಿಯುತ್ತಿದ್ದ. ಆಕೆ ಜ್ವರ ಬಂದು ಮಲಗಿದರೂ ಈತ ಮಾತ್ರೆ  ತೆಗೆದುಕೊಳ್ಳುತ್ತಿದ್ದ.

ಹೀಗೆಯೇ ಚಿರಕಾಲ ಸುಖವಾಗಿ ಬಾಳಿದರು. ಚುನಾವಣೆಗೆ ಮಾತ್ರ 'ದಂಪತ್ವೈರಿ' ಅನ್ನೋ ಬಿರುದು ಖಾಯಮ್ಮಾಗಿ ಉಳಿದುಕೊಂಡುಬಿಟ್ಟಿತು!

■



## ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.



ಹಾಗೇ ಇರಲಿ ಕಣಯ್ಯಾ! ನಮ್ಮ ಅಫೀಸರು—ಏನು ಕೇಳಿದರೂ ನಿನಗೇನು ಕೇಡು ಎಂದೇ ಮಾತನಾಡಿಸುತ್ತಾರೆ.

# ಗುಂಡಣ್ಣ ಮತ್ತು ಉಪ್ಪಿಟ್ಟ್

ಸಿ.ಎ.ವಿಲಾಸ ನಾ ಹುದ್ದಾರ

ಬಳವಂತ ಮತ್ತಗುಂಡೂರಾವ್ ಇಬ್ಬರೂ ತಮ್ಮ ತಮ್ಮ ಕೆಲಸದೊಳಗ ನೈಪುಣ್ಯತೆ ಹೊಂದಿ ಇಬ್ಬರೂ ಒಂದ ಬೃಹತ್ ಉದ್ಯಮದ ಎರಡು ಬ್ಯಾರೆ ಬ್ಯಾರೆ ಡಿಪಾರ್ಟ್ವಮೆಂಟಿನ ವ್ಯವಸ್ಥಾಪಕರು ಆಗಿದ್ರು. ಇಬ್ರೂ ಲಂಗೋಟಿ ಗೆಳ್ಯಾರು.... ಪ್ರಾಥಮಿಕ ಶಾಲೆಯಿಂದ ಇಂಜಿನೀಯರ್ ಆಗೂತನಕ ಕೂಡೇಕಲ್ತಿದ್ರು. ಇವರ ಯುನಿಟಗೆ ರಾವ್ ಸಾಹೇಬ್ರು ಮುಖ್ಯಸ್ಥರು. ಅವರು ನಿಗರ್ವಿಗಳೂ, ಸ್ನೇಹಪರರೂ, ಚಾಣಾಕ್ಷರೂ ಆಗಿದ್ರು. ಇವರ ಯುನಿಟ್ ಆಧುನೀಕರಣ ಮಾಡಲಿಕ್ಕೆ ಒಂದ ಸಮಿತಿ ರಚಿಸಿದ್ರು. ಅದ್ರ ಮುಖ್ಯಸ್ಥ ರಾವ್ ಸಾಹೇಬ್ರ ಆಗಿದ್ರ ಎಲ್ಲಾ ಡಿಪಾರ್ಟ್ವಮೆಂಟಿನ ವ್ಯವಸ್ಥಾಪಕರು ಸದಸ್ಯರು.

ರಾವ್ ಸಾಹೇಬ್ರು ಶಿಸ್ತಿನ ಮನುಷ್ಯ. ಅವರ ನಿರ್ದೇಶನದ ಪ್ರಕಾರ ಎಲ್ಲಾ ಸದಸ್ಯರೂ 8.00 ರಿಂದ 9.00 ರ ವರೆಗೆ ತಮ್ಮ ದೈನಂದಿನ ಕೆಲಸಾ ಮುಗಿಸಿ ತಮ್ಮ ತಮ್ಮ ಬ್ರೆಕ್‌ಫಾಸ್ಟ ಡಬ್ಬಿ ತೊಗೊಂಡು ಮೀಟಿಂಗ್ ರೂಮಿಗೆ ಬರಬೇಕು. ಬ್ರೆಕ್ ಫಾಸ್ಟ ಮಾಡ್ಕೋತ ನಿನ್ನೆ ತಾವು ಕಾರ್ಯಗತಗೊಳಿಸಿದ ಆಧುನೀಕರಣಕ್ಕೆ ಸಂಬಂಧಿತ ವರದಿ ಒಪ್ಪಿಸಿ ಇಂದಿನ ಕೆಲಸದ ಬಗ್ಗೆ ನಿಶ್ಚಯಿಸುವದು. ಅಂದ್ರ ಟೈಮ್ ವ್ಯರ್ಥ ಆಗಬಾರ್ದು. ಬ್ರೆಕ್‌ಫಾಸ್ಟಗೆ ರಾವ್ ಸಾಹೇಬ್ರದು ಎರಡು ಡಬ್ಬಿ ಇರತಿದ್ವು. ಒಂದು ಅವರು ತಿನ್ಲಿಕ್ಕೆ, ಇನ್ನೊಂದ್ರೊಳಗ ಉಪ್ಪಿಟ್ಟು. ಅವ್ರ ಮನೀ ಉಪ್ಪಟ್ಟಂದ್ರ ಎಲ್ಲಾರಿಗೂ ಭಾಳ ಪ್ರೀತಿ. ಇನ್ನೊಂದ ಡಬ್ಯಾಗಿದ್ದ ಉಪ್ಪಿಟ್ಟ ಎಲ್ಲಾರಿಗೂ ಹಂಚತಿದ್ರು. ಗುಂಡೂರಾವಗಂತೂ ಉಪ್ಪಿಟ್ಟ ಅಂದ್ರ ಪಂಚಪ್ರಾಣ. ಎಲ್ಲಾರೂ ತಮ್ಮತಮ್ಮ ಡಬ್ಬಿ ಡೈನಿಂಗ್ ಹಾಲ್‌ನ ಟೇಬಲ್ ಮ್ಯಾಲೆ ಇಡೋ ಪದ್ಧತಿ ಇತ್ತು.

ಅವತ್ತ ರಾವ್ ಸಾಹೇಬ್ರನ್ನ ಎಮ್.ಡಿ. ಅವರು ಕರದದ್ದಕ್ಕ ಅವರು ಮೀಟಿಂಗಗೆ ತಡಾ ಆಗಿ ಬರ್‍ತಾರ ಅಂತ ಗೊತ್ತಾತು. ಬಳವಂತ ಗುಂಡಣ್ಣನ ಕಡೆ ನೋಡಿದಾ. ಗುಂಡಣ್ಣಗ ಚಡಪಡಿಕಿ ಸುರು ಆತು. ಅವನೂ ಬಳವಂತನ ಕಡೆ ನೋಡಿದಾಗ, "ಹೋಗು ತೊಗೊಂಡ ಬಾ.." ಅಂತ ಅಂದಾ. ಗುಂಡಣ್ಣ ಹೋಗಿ ರಾವ್ ಸಾಹೇಬ್ರ ಉಪ್ಪಿಟ್ಟಿನ ಡಬ್ಬಿ ತೊಗೊಂಡ ಬರಲಿಕ್ಕೆ ಹೋದ್ರ ಎಲ್ಲಾರೂ ತಮ್ಮತಮ್ಮ ಡಬ್ಬಿತೊಗೊಂಡ ಹೋಗಿದ್ರೂ ಇನ್ನೂ ಎರಡು ಡಬ್ಬಿ ಇದ್ದು. ಒಂದರ ಮುಚ್ಚಳಾ ತಗದ ನೋಡಿದಾ ಉಪ್ಪಿಟ್ಟಿತ್ತು ತೊಗೊಂಡ ಬಂದಾ. ಎಲ್ಲರೂ ಬ್ರೆಕ್‌ಫಾಸ್ಟ್ ಮಾಡ್ಕೋತ ಮೀಟಿಂಗ ಮುಂದುವರೆಸಿದ್ರು. ರಾವ್ ಸಾಹೇಬ್ರ ಉಪ್ಪಿಟ್ಟು ಖಾಲಿ ಆತು. ರಾವ್ ಸಾಹೇಬ್ರು ತಮ್ಮ ಬ್ರೆಕ್ ಫಾಸ್ಟ್ ಎಮ್.ಡಿ. ಜೋಡೀನ ಮುಗಿಸಿದ್ರು. ಮೀಟಿಂಗ ಮುಗಿಲಿಕ್ಕತ್ತಾಗ ರಾವ್ ಸಾಹೇಬ್ರ ಬಂದ್ರು. ಸಂಕ್ಷಿಪ್ತವಾಗಿ ಬಳವಂತ ತಾವು ಚರ್ಚೆ ಮಾಡಿದ ವಿಷಯಗಳನ್ನ ತಿಳಿಸಿದ. ಅವರೂ ತಾವು ಎಮ್.ಡಿ. ಜೋಡಿ ಮಾತನಾಡಿದ ವಿಷಯಗಳನ್ನ ಹೇಳ್ತಿರಬೇಕಾದ್ರ ಶರ್ಮಾ ಒಳಗ ಬಂದ್ರು. ಶರ್ಮಾ ಅವರು ಆಧುನೀಕರಣದ ಕೆಲಸಗಳನ್ನ ಕಾರ್ಯಗತಗೊಳಿಸಲಿಕ್ಕೆ ನೇಮಿಸಿದ ಸಂಸ್ಥೆಯ ಸೂಪರ್‌ವೈಜರ್. ರಾವ್ ಸಾಹೇಬ್ರಅವರ್ನ ಪ್ರಶ್ನಾರ್ಥಕವಾಗಿ ನೋಡಲು,

"ಸಾರ್ಹಬ್ರ, ಟೇಬಲ್ ಮ್ಯಾಲೆ ಇಟ್ಟ ನನ್ನ ಟಿಫಿನ್ ಡಬ್ಬಿ ಕಾಣಿಸಲಿಲ್ಲಾ. ಈ ಡಬ್ಬಿ ಇತ್ತು. ನಿಮ್ದು ಅಂತಕಾಣಿಸ್ತದ. ನನ್ನ ಡಬ್ಬಿ ಏನರೇ ತಪ್ಪ ಇಲ್ಲಿ ಬಂದದೇನು.."

ರಾವ್ ಸಾಹೇಬ್ರಿಗೆ ಎಲ್ಲಾ ಅರ್ಥಾ ಆತು ಗುಂಡಣ್ಣನ ಕಡೆ ನೋಡ್ಕೋತ,

"ನಿಮ್ಮ ಡಬ್ಬಿ ಬಂದೂ ಆತು, ಖಾಲೀನೂ ಆತು...ನಿಮಗ ಇನ್ನ ಕ್ಯಾಂಟೀನಗತಿ.. ಗುಂಡಣ್ಣಾ ಆಮೇಲೆ ಅವರಡಬ್ಬಿ ಮುಟ್ಟಿಸಿಬಿಡ್ರಿ..." ಮುಂದುವರೆಸಿ "ನೋಡಿ ಡಬ್ಬಿ ತರಬೇಕಾಗಿತ್ತು..."

ಗುಂಡಣ್ಣಗ ಎಲ್ಲಿ ಈ ಕಡೆ ಲಕ್ಷ್ಯ... ಆಗಲೇ ರಾವ್ ಸಾಹೇಬ್ರ ಡಬ್ಬಿ ತೊಗೊಂಡ ಎಲ್ಲಾರಿಗೂ ಉಪ್ಪಿಟ್ಟ ಹಂಚಿತಾನೂ ತಿನ್ನೋತಯ್ಯಾರಿ ನಡೆಸಿದ್ದಾ.

ಅವರ ಪ್ರಶ್ನೆಗೆ ಉತ್ತರಾ ಕೊಡದ ಅವರಿಗೇ ಕೇಳಿದಾ," ಅಲ್ರಿ ಸಾರ್ಹಬ್ರ, ದಿನಾಲೂ ನಮಗ ನಿಮ್ಮ ಮನೀ ಉಪ್ಪಿಟ್ಟ ತಿನ್ನಸ್ತೀರಿ, ಆದ್ರಒಂದ ದಿವಸಾನೂ ನೀವು ನಿಮ್ಮ ಮನೀ ಉಪ್ಪಿಟ್ಟ ತಿಂದದ್ದ ನಾವ ಯಾರೂ ನೋಡಿಲ್ಲಾ...ಯಾಕ?". ಅವನಿಗೆ ಬಯ್ಯಬೇಕಂತ ಮನಸ್ಸ ಮಾಡಿದವರು ಗುಂಡಣ್ಣನ ಪ್ರಶ್ನೆ ಕೇಳಿ ಉತ್ತರಾ ಕೊಡದ ಒಂದು ಮುಗುಳ್ನಗೆ ಅವರ ಮಾರಿ ಮ್ಯಾಲೆ ಹಾಯ್ದು ಹೋತು.

(ಆತ್ಮೀಯ ಗೆಳೆಯರಾದ ಶ್ರೀ. ಉಪೇಂದ್ರ ಚಿಪ್ಲುನಕರ್ ಹೇಳಿದ ಘಟನೆ ಆಧಾರಿತ...) ■

## ಸಮಾಧಿಯಿಂದ ಬಂದು ಕಾಲ್ ಮಾಡ್ತೀನಿ

ಆ ದಿನ ಅತ್ತಿಗೆಯ ಹುಟ್ಟಿದ ಹಬ್ಬ, ವಾಟ್ಸಾಪ್ ಮೆಸೇಜ್‌ಗಳು ಸಂತೆಯಂತೆ ತುಂಬಿತ್ತು ಇನ್ ಬಾಕ್ಸ್‌ನಲ್ಲಿ, ಹಾಗೇ ಓದುತ್ತಾ, ಇದ್ದಕ್ಕಿದ್ದಂತೆ ಶಾಕ್ ಆಗಿ..

ರೀ..ರೀ..ಇಲ್ಬನ್ನಿ ..ಬೇಗ ಅಂತ ಗಂಡನ್ನ ಕರೆದಳು ಶಾಲಿನಿ..

"..ಏನೇ, ಏನಾಯ್ತು ಅಂತ ಗಂಡ ಓಡಿ ಬಂದ.."

ಇಲ್ನೋಡಿ, ಈ ಮೆಸೇಜ್ ನಿಮ್ಮ ತಂಗಿ ಕಳಿಸಿರೋದು ಅಂದದ್ದು ಕೇಳಿ ಅವ್ನೂ ದಂಗಾದ..ಗರಬಡಿದವನಂತೆ ಇದ್ದದ್ದು ನೋಡಿ..ಶಾಲಿನಿ ಅಂದಳು..

ಬೇಗ ನಿಮ್ತಂಗೀಗೆ ಫೋನ್ ಮಾಡಿ ವಿಚಾರಿಸಿ..ಏನಾಗಿದ್ಯೋ ಏನೋ..

ಸರಿ..ಸರಿ..ಅಂತ ಅಣ್ಣನೂ ಗಾಭರಿಯಾಗಿ ತಂಗಿಗೆ ಫೋನ್ ಮಾಡಿದಾಗ "ಅಣ್ಣಾ, ನಾನು ಇಲ್ಲೇ ಇದೀನಿ ಬರ್ತಿದೀನಿ, ಇನ್ನೇನು ಬಂದೇ ಬಿಟ್ಟೇ ಅಂತ ತಂಗಿ ಅಂದಾಗ, ವಿಷಯ ಮತ್ತಷ್ಟು ಗೋಜಲಾಯಿತು..

ಕೆಲ ನಿಮಿಷಗಳಲ್ಲಿ ಬಾಗಿಲ ಕರೆಗಂಟೆ ಸದ್ದಿಗೆ ಅಣ್ಣ ಹೆದರುತ್ತಾ ಬಾಗಿಲು ತೆರೆದ..

ಎಲ್ಲವೂ ನಾರ್ಮಲ್ ಅನಿಸಿತ್ತು.. ಮತ್ತೆ ಈ ಮೆಸೇಜ್ ಏನು??

ಅವಳನ್ನೇ ಕೇಳೋಣ ಅಂತ..ಕೇಳಿ, ಮೆಸೇಜ್ ತೋರಿಸಿದಾಗ ತಂಗಿ ಬಿದ್ದು ಬಿದ್ದು ನಕ್ಕಳು..

ಅದರಲ್ಲಿ.. ಅತ್ತಿಗೆಗೆ" ಜನ್ಮ ದಿನದ ಹಾರ್ದಿಕ ಶುಭಾಶಯಗಳು, ನಾನು ಬಿಝಿ ಇದೀನಿ "ಸಮಾಧಿ"ಯಿಂದ ಬಂದು ಕಾಲ್ ಮಾಡ್ತೀನಿ ಅಂತಾ ಇತ್ತು..

ಆದದ್ದಿಷ್ಟು..ನಾನು ಬಿಝಿ ಇದೀನಿ, "ಸಮಿತಿ"ಯಿಂದ ಬಂದು ಕಾಲ್ ಮಾಡ್ತೀನಿ ಅನ್ನೋದು ಅರ್ಜೆಂಟ್‌ನಲ್ಲಿ ಸಮಾಧಿಯಿಂದ ಬಂದು ಕಾಲ್ ಮಾಡ್ತೀನಿ ಅಂತ ಟೈಪ್ ಆಗಿತ್ತು.. ಮೆಸೇಜ್ ಕಳಿಸುವ ಮೊದಲು ಚೆಕ್ ಮಾಡದೇ ಇದ್ದದ್ದು ಈ ಅವಾಂತರಕ್ಕೆ ಕಾರಣವಾಗಿತ್ತು.

ವಿಷಯ ತಿಳಿದ ನಂತರ ಎಲ್ಲರೂ ಬಿದ್ದು ಬಿದ್ದು ನಕ್ಕು ನಗೆಗಡಲಿನಲ್ಲಿ ಮುಳುಗಿದರು.

**–ಸುಮನಾ**

# ಮ್ಯಾರೇಜ್ ಸೂಟ್

ರಮೇಶಚಂದ್ರ

ಎಲ್ಲಿ ಇಟ್ಟೆ . ಎಲ್ಲಿ ಇಟ್ಟೆ. ಛೆ ಹಾಳು ಮರೆವು. ಒಳ್ಳೆಯ ಸಮಯದಲ್ಲೇ ಕೈಕೊಡುತ್ತೆ. ಸೂಪರ್ ಆಗಿತ್ತು ನೈಲ್ ಕಟ್ಟರ್ರು. ಮಗಳು ಮೊನ್ನೆ ಅಮೆರಿಕಾಗೆ ತೌರು ಮನೆಯಿಂದ ಹಿಂದಿರುಗುವಾಗ ಕೊಟ್ಟಿದ್ದು. ಅಂದ ಹಾಗೆ ಇವತ್ತು ಯಾವವಾರ. ಸದ್ಯ ಬುಧವಾರ. ಇಲ್ಲದಿದ್ದರೆ ನಿಮಗೆ ವಯಸ್ಸು ಆಯ್ತು, ಬುದ್ಧಿ ಬಂದಿಲ್ಲ. ಮಂಗಳವಾರ ಉಗುರು ಕತ್ತರಿಸ್ತಾರೆ ಏನ್ರೀ; ಅಂತ ಮೋಹದ ಮಡದಿ ಮೂತಿ ತಿವಿಯುತ್ತಿದ್ದಳು. ಹಾ–ಯುರೇಕಾ. ಬಂತೂ. ನೆನಪಿಗೆ ಬಂತು. ನನ್ನ ಪ್ರೀತಿಯ ನೈಲ್ ಕಟ್ಟರ್ ಅನ್ನು ನನ್ನ ಮ್ಯಾರೇಜ್ ಸೂಟ್ ಕೋಟಿನ ಜೇಬಿನಲ್ಲಿ ಭದ್ರವಾಗಿ ಇಟ್ಟಿದ್ದೇನೆ.

ಕುಡಿಯುತ್ತಿದ್ದ ಕಾಫಿಯನ್ನು ಬಿಟ್ಟು ಧಾವಿಸಿ ಕಬೋರ್ಡ್ ಬಾಗಿಲು ತೆಗೆದು,, ಹ್ಯಾಂಗರಿಗೆ ಸಿಕ್ಕಿ ನೇತಾಡುತ್ತಿದ್ದ ಮ್ಯಾರೇಜ್ ಸೂಟನ್ನು ಎಳೆದೆ. ಧಪ್ ಎಂಬ ಸದ್ದಿನೊಂದಿಗೆ ಪ್ಯಾಂಟು, ಹಾಗೂ ಹ್ಯಾಂಗರ್ಸಮೇತ ನನ್ನ ಮ್ಯಾರೇಜ್ ಸೂಟ್ ಧೊಪ್ ಎಂದು ಕೆಳಗೆಬಿತ್ತು. ಒಂದು ರೀತಿಯಗ ಮಟು ವಾಸನೆ ಹೊರಬರುತ್ತಿತ್ತು. ಮೇಲಕ್ಕೆ ಎತ್ತಿ ಹಿಡಿದು ನೋಡಿದೆ. ಮನಸ್ಸು ನಲವತ್ತು ನಾಲ್ಕು ವರ್ಷಗಳಷ್ಟು ಹಿಂದೆ ಹಾರಿತು.

ಬೆಂಗಳೂರು ಬಿಟ್ಟು ಕೆ.ಜಿ.ಎಫ್‌ನ ಬೆಮೆಲ್ ಕಾರ್ಖಾನೆ ಸೇರಿ ಕನ್ನಡ, ಸಾಹಿತ್ಯ, ಸಂಘಟನೆ ಕವಿ–ಕಾವ್ಯ ಗೋಷ್ಠಿಗಳು, ನಾಟಕ ಪ್ರಯೋಗಗಳು, ರಚನೆ ನಿರ್ದೇಶನ ಪಡೆಯುತ್ತಿದ್ದ ಪ್ರಶಸ್ತಿ ಮಾನ್ಯತೆಗಳ ಮ್ಯಾಮೋಹದಲ್ಲಿ ನಾನು ಸಮಾಜ ಜೀವಿ ಎಂಬ ಸಂಗತಿಯೇ ಮರೆತು ಹೋಗಿತ್ತು. ಪರಿಸ್ಥಿತಿ ಬಿಗಡಾಯಿಸುವುದಕ್ಕೆ ಮುಂಚೆ ಅಪ್ಪ ಅಮ್ಮಂದಿರು ಒಂದು ಕನ್ಯಾ ವೀಕ್ಷಣೆಗೆ ರೆಡಿ ಮಾಡಿಯೇ ಬಿಟ್ಟರು.

ಅದೇಆಶ್ಚರ್ಯ. ನನ್ನ ಕಲ್ಯಾಣ ಗುಣಗಳನ್ನು ಅನ್ವೇಷಣೆ ಮಾಡಿದ ನಂತರವೂ ನನ್ನ ಭಾವೀ ಅತ್ತೆಮಾವಂದಿರು, ನನ್ನ ಭಾವೀ ಪತ್ನಿಯನ್ನು ನನಗೆ ಕಟ್ಟಿ, ಬಾವೀಗೆ ತಳ್ಳಲುಒಪ್ಪಿದರೋ –ಅರಿಯೆ. ಅಂತೂ ಹೆಣ್ಣು ನೋಡಿದ್ದು ನಕ್ಕಿ ಆಗಿ ಮದುವೆ ಪಕ್ಕೀ ಆಗಿಯೇ ಹೋಯಿತು. ಆಯಿತು. ಮದುವೆ ಸೆಟಲ್ ಆಯಿತಲ್ಲ. ಬಟ್ಟೆ ಬರೆ ಖರೀದಿ ಇತ್ಯಾದಿ ಪ್ರಾರಂಭ ಆಯಿತು. ನಾನು ಶುಕಮುನಿಯಂತೆ ಎಲ್ಲಾ ಸಂದರ್ಭಕ್ಕೂ ಜುಬ್ಬಾ ಪೈಜಾಮಾ ಮಾಧರಿಸುತ್ತೇನೆ ಎಂದು ಅರು ಹಿದೆ.

ಬಂತು ನೋಡಿ ಬಾಣ ಬಿರುಸು, ಮದ್ದು ಗುಂಡು ಫಿರಂಗಿಗಳು. ನಮ್ಮ ಮನೆಯಲ್ಲಿ ಸಖತ್ ಬಿರುಗಾಳಿ ಎದ್ದಿತು. ಯಾಕೋ ಲಕ್ಷಣ ಸರಿ ಹೋಗಲಿಲ್ಲವಲ್ಲಾ ಎಂಥೂ ಆ ವೇಳೆಗೆ ಸ್ವಲ್ಪ ಆತ್ಮೀಯಳಾಗಿದ್ದ ಭಾವೀ ಪತ್ನಿಯ ಬಳಿ ನಯವಾಗಿ ಉಲಿದಿದ್ದೆ. ಮಾತಾಡದೆ ಎದ್ದು ಹೋಗಿ ಸಂದೇಶ ಕಳಿಸಿದಳು. ಹಾಗೆಲ್ಲಾ' ಅವತಾರ'ಗಳಲ್ಲಿ ಬಂದರೆ ತಾನು ಆರತಕ್ಷತೆಗೆ ಬರುವುದೇ ಇಲ್ಲ. ಲಕ್ಷಣವಾಗಿ ಮ್ಯಾರೇಜ್ ಸೂಟ್ ಧರಿಸಿಯೇ ಬರಬೇಕೆಂದು ದೂತರ ಮೂಲಕ ಸುವಾರ್ತೆ ಕಳಿಸಿದಳು. ವಧು– ಹಾಗೂ ವರ–ಅಂದರೆ ಸ್ವಕೀಯ ಪರಕೀಯ ಎರಡೂ ಪಕ್ಷಗಳಿಂದ ಈ ರೀತಿಯ ಪ್ರತ್ಯಾಸ್ತ್ರಗಳು ಬಂದ ಮೇಲೆ ನನಗೆ ಸೋಲು ಖಚಿತ ಎಂದು ಮನವರಿಕೆ ಆಯಿತು. ಸಂಧಿ ಮಾಡಿಕೊಳ್ಳದೇ ಬೇರೆ ಮಾರ್ಗವಿಲ್ಲದೆ ಹೋಯ್ತು. ಸಂಧಿ ವಿಗ್ರಹಿಗಳು ಈ ಕಾರ್ಯದಲ್ಲಿ ಯಶಸ್ವಿಯಾದರು.

ನಾನು ನನ್ನ ಸ್ವಂತದ ವಸ್ತುಗಳ ಖರೀದಿಗೆ ಭಾವೀ ಮಾವನವರಿಂದ ಒಂದು ಚಿಕ್ಕಾಸೂ ತೆಗೆದು ಕೊಳ್ಳುವುದಿಲ್ಲ ಎಂದು ಖಡಾ ಖಂಡಿತವಾಗಿ ಹೇಳಿದೆ. ಹೇಗಾದರೂ

ಹಾಳಾಗು. ನಿನ್ನ ಹೆಂಡ. ನಿನ್ನ ಬುಡ್ಡಿ ಎಂದು ಹೇಳಿ ನನ್ನ ತಮ್ಮ ರೇಮಂಡ್ಸ್ ಶೋರೂಂಗೆ ನನ್ನನ್ನು ಕರೆದೊಯ್ದ.

ದಿಗ್ಭ್ರಮೆ, ದಿಗ್ಭ್ರಾಂತಿಯಿಂದ ರೇಮಂಡ್ಸ್ ಮಳಿಗೆಯಲ್ಲಿ ಗಾಜಿನ ಕಪಾಟುಗಳಲ್ಲಿ ಅಂದವಾಗಿ ಜೋಡಿಸಿದ್ದ ಆಕರ್ಷಕವಾಗಿ ಇಳಿಬಿಟ್ಟ, ಥರಥರದ ಬಣ್ಣಗಳ ವಿನ್ಯಾಸಗಳ, ಆಕಾರಗಳ ಸೂಟ್ ಬಟ್ಟೆಗಳು ಹತ್ತು ಹಲವು ವಿದ್ಯದ್ದೀಪಗಳ ಪ್ರಕಾಶದಲ್ಲಿ ಮಿರಮಿರನೆ ಮಿಂಚುತ್ತಿದ್ದವು.

ಈ ಭೂಲೋಕದ ಮಾನಿಸರು ಸೂಟ್ ಹಾಕಲೆಂದೇ ಹುಟ್ಟಿರುತ್ತಾರೋ ಏನೋ ಎಂದು ಕಣ್ಣು ಕಣ್ಣು ಬಿಡುತ್ತಾ ಇರುವಾಗ ಮಾದಕ ನಗೆ ಬೀರಿ ಸೇಲ್ಸ್ ಗರ್ಲ್ ಎಂಬ ಸುಂದರಿ "ಹೇಳಿ ಸರ್, ಏನನ್ನು ತೋರಿಸಲಿ" ಎಂದಳು. ಅದರ ಅಂತರಾರ್ಥ ನನಗೊಬ್ಬನಿಗೆ ಮಾತ್ರ ಅರ್ಥವಾಗಿ ಭೂಮಿ ಕಂಪಿಸಿತು.

ತೋರಿಸಿದಳು. ಪಾಪ ತೋರಿಸಿಯೇ ತೋರಿಸಿದಳು. ನನ್ನ ತಮ್ಮ ಯಾವುದಕ್ಕೂ ಒಪ್ಪಲಿಲ್ಲ. ಕೊನೆಗೆ ಒಂದು ಬಣ್ಣ, ವಿನ್ಯಾಸ ಒಪ್ಪಿಗೆ ಆಯ್ತು. ಆ ಸುಂದರಿ 'ಥಾನ್' ನಿಂದ ಬಟ್ಟೆ ಕತ್ತರಿಸಿ ಒಪ್ಪವಾಗಿ ಮಡಿಸಿ ನನ್ನ ಭುಜದ ಮೇಲೆ ಹರವಿ" ಈ ಸೂಟ್‌ನಲ್ಲಿ ನೋಡಿದರೆ.. ಹುಡುಗಿಯರು ನಿಮ್ಮ ಹಿಂದೆ ಬಿದ್ದು ಸಾಯುತ್ತಾರೆ ಸಾರ್" ಎಂದು ಸಿಹಿಯಾಗಿ ನಕ್ಕು ಸುಂದರ ಭವಿಷ್ಯ ನುಡಿದಳು. ನನಗೂ ದಿಲ್ ಖುಷ್ ಆಯಿತು ಎಂಬಲ್ಲಿ ಮ್ಯಾರೇಜ್ ಸೂಟ್ ಪ್ರಕರಣದ ಮೊದಲ ಅಂಕ ಸಂಪನ್ನವಾಯಿತು.

ಈಗ ಎರಡನೆ ಅಂಕದ ಆರಂಭ. ಬಟ್ಟೆ ಕೊಂಡರೇ ಆಯಿತೇ. ಮಂತ್ರಕ್ಕೆ ಮಾವಿನ ಕಾಯಿಗಳು ಉದುರುವುದೇ. ಆ ವಸ್ತ್ರ ರಾಜನನ್ನು ಸಿಂಪಿಗರಾಜನಿಗೆ ಒಪ್ಪಿಸಿ ಅವನು ಅಳತೆಯ ಮೇಲೆ ಅಳತೆ ತೆಗೆದು–ಈಗ–ಬಾ–ಆಗಬಾ–ಹೋಗಿ ಬಾ ಎಂದು ಅಟ್ಟಾಡಿಸಿ–ನಾವು ಹೋದಾಗಲೆಲ್ಲಾ ನಿಮ್ಮ ಬಟ್ಟೆಯನ್ನೇ ಹೊಲೀತಾ ಇದೀನಿ ಸಾರ್ ಎಂಬ ಸುಳ್ಳನ್ನ ನಂಬಿ ಕಾದುಕಾದು ಕುಳಿತಾಗ ಒಂದು ದಿನ "ಟ್ರಯಲ್"ಗೆ ಆಹ್ವಾನ ಬರುತ್ತದೆ.

ಇದೇನಪ್ಪಾ, ಆಫೀಸರ್ಸ್ ಟೈಲರ್ಸ್ ಸೂಟ್ ಹೊಲಿಯೋ ಟೈಲರ್ ಹೊಲಿದಿರೋ ಸೂಟ್ ಬೆನ್ನ ಹಿಂದೆ ಎತ್ತಿಕೊಳ್ಳತ್ತಲ್ಲಪ್ಪಾ ಅಂದರೆ "ನೀವು ಸ್ವಲ್ಪ ಗೂನು ಬೆನ್ನು ಸಾರ್, ಅದಕ್ಕೇ ಹಾಗೆ" ಎಂದು ತಿಪ್ಪೆಸಾರಿಸಿ ಬಿಟ್ಟ.

ಮದುವೆ ದಿನ ಹತ್ತಿರ ಬರುತ್ತಿದ್ದ ಹಾಗೆ ಹಲವಾರು ಆತಂಕಗಳ ನಡುವೆ ಸೂಟಿನ ಆತಂಕ ಕೂಡಾ ಸೇರಿಕೊಂಡಿತು. ನನ್ನ ಭಾವೀ ಪತ್ನಿಗೆ ಮಾಂಗಲ್ಯ ಸರಕ್ಕಿಂತ ಹೆಚ್ಚಾಗಿ ಸೂಟ್ "ಕೇಸ್" ಕಾಡುತ್ತಾ ಇತ್ತು. ಹಿಂದೆ ಒಬ್ಬ ದರ್ಜಿ– ಸೂಟ್ ಕೇಸ್ ಅಲ್ಲ ಮ್ಯಾರೇಜ ಸೂಟ್ ಟೈಲರ್–ಲಗ್ನಕ್ಕೆ ಕೊಟ್ಟಿದ್ದ ಸೂಟನ್ನ ಮಾರ್ಷಿಕೋತ್ಸವಕ್ಕೆ ಡೆಲಿವರಿ ಮಾಡಿದ್ದನಂತೆ ಸದ್ಯ ನನ್ನ ಪಾಡು ಹಾಗಾಗಲಿಲ್ಲ. ನಾಲ್ಕೈದು ಬಾರಿ ಎಡತಾಕಿ ಎಡತಾಕಿ ಮ್ಯಾರೇಜ್ ಸೂಟ್ ತಂದೇ ಬಿಟ್ಟೆವು. ಹಾಗೆಯೇ ಮರೆಯದೇ–ಕಲ್ಯಾಣ ಮಂಟಪಕ್ಕೆ ಇತರ ಲಗೇಜುಗಳೊಂದಿಗೆ ಸಾಗಿಸಿ, ಬೀಗರ ಬಿಡದಿ ಮನೆಯಲ್ಲಿ ಪ್ರತಿಷ್ಠಾಪಿಸಿದ್ದೂ ಆಯಿತು.

ಲಗ್ನ ಕಾರ್ಯ ಚೆನ್ನಾಗಿ ಆಯಿತು. ಸಂಜೆ ರೆಸಿಪ್ಷನ್ ಕಂ ಆರತಕ್ಷತೆಗೆ ನನ್ನ ಅರ್ಧಾಂಗಿ ಉಸ್ತುವಾರಿಯಲ್ಲಿ ಮ್ಯಾರೇಜ್ ಸೂಟ್ ಧರಿಸಿಬೀಗಿದ್ದೆ. ಸ್ವಲ್ಪ ಹೊತ್ತಿಗೆ ಬೇಸಿಗೆ ಪ್ಲಸ್ ರೇಮಂಡ್ಸ್ ಸೂಟ್ ತಮ್ಮ ಪ್ರಭಾವ ಬೀರ ತೊಡಗಿದವು. ಅಭ್ಯಾಸ ಇಲ್ಲದ ಪ್ರಯುಕ್ತ ಬೆವರು ಧಾರಾಕಾರವಾಗಿ ಸುರಿಯುತ್ತಿತ್ತು. ನನ್ನ ಪ್ರಿಯತಮೆ–ಕರುಣೆ ತೋರಿ–ಎರಡು ಮೂರು ಭಾರಿ ಹ್ಯಾಂಡ್ ಕೀ ಇಂದ ನನ್ನ ಬೆವರು ಒರೆಸಿ ಔದಾರ್ಯ ಮೆರೆದಳು. ಯಾವಾಗ 'ಆರತಿ'ಎತ್ತುತ್ತಾರೋ ಎಂದು ಕಾದಿದ್ದು

ಆದಕೂಡಲೇ ರೂಮಿಗೆ ಧಾವಿಸಿ ಮ್ಯಾರೇಜ್ ಸೂಟನ್ನು ಕಿತ್ತೆಸೆದು ನನ್ನ ಕ್ರೋಧ ಇಳಿಸಿಕೊಂಡೆ.

ಆದೇನೋ ಕಾಣೆ ನಮ್ಮ ಹನಿಮೂನಿಗೆ ಕಾಲ ಒದಗಿಬರಲೇ ಇಲ್ಲ. ಪುಣ್ಯಕ್ಕೆ ಮಧು ಚಂದ್ರಕ್ಕೆ ಸೂಟಿಗೆ ಡಿಮ್ಯಾಂಡ್ ಬರಲಿಲ್ಲ.

ನಂತರ ದಿನದಲ್ಲಿ ಮದುವೆಯ ರಿಸೆಪ್ಷನ್‌ನ ಫೋಟೋಗಳಲ್ಲಿ, ಸೂಟ್‌ನಲ್ಲಿ ಮಿಂಚಿ ಮೆರೆಯುತ್ತಾ ಇದ್ದ ನನ್ನನ್ನು ನನ್ನ ಹೆಂಡತಿಯ ಆಪ್ತಗೆಳತಿಯರು "ಪ್ರಣಯರಾಜ" ನಿಗೆ ಹೋಲಿಸಿ ಹೊಗಳಿದ್ದ ಕೇಳಿ ನನ್ನವಳು ಗಾಳಿಯಲ್ಲೇ ತೇಲುತ್ತಾ ಇದ್ದಳು.

ಸೊಗಸಾದ–ಬಲವಾದ–ಹ್ಯಾಂಗರ್‌ಗೆ ಮ್ಯಾರೇಜ್ ಸೂಟನ್ನು ನೇತು ಹಾಕಿ ಮುಂದಿನ ದಿನಗಳಲ್ಲಿ ಅದರ ಜೇಬುಗಳಲ್ಲಿ ಬಹು ಮುಖ್ಯವಾದ ಸಣ್ಣ ಸಣ್ಣ ವಸ್ತುಗಳನ್ನು ಇಡಲು ತೊಡಗಿದೆವು.

ಕಾಲ ಉರುಳಿತು. ಮಗನ ಮದುವೆ ರೆಸೆಪ್ಷನ್‌ಗೆ ಸೂಟು ಹಾಕಿಕೊಳ್ಳಿರೀ ಎಂದರು ಮೇಮ್ ಸಾಬ್. ಒಂದು ಟ್ರಯಲ್ಲೋಡಿದರೆ ಸೂಟು ಓ.ಕೆ. ಪ್ಯಾಂಟಿನ ಹೊಟ್ಟೆ ಭಾಗ ಕುಗ್ಗಿ ಹೋಗಿದೆ ಕಣೇ ಟೈಟೋಟೈಟು ಕಣೆ ಎಂದೆ. ಪ್ಯಾಂಟ್ ಕುಗ್ಗಿಲ್ಲ ಸಾಹೇಬರೇ ನಿಮ್ಮ ಹೊಟ್ಟೆ ಉಬ್ಬಿದೆ. ಮಗನ ಬೆಲ್ಟ್ ಹಾಕಿಕೊಳ್ಳಿ ಎಂದು ಫರ್ಮಾನ್ ಬಂದಿತು. ಬೆಲ್ಟು ಬಿಗಿದು ಆ ಅವತಾರ ಕೂಡಾ ಮುಗಿಸಿದೆ.

ಮಗಳ ಮದುವೆಯಲ್ಲೂ ಈ ಸೀನ್ ರಿಪೀಟು ಆದರೂ ಕಿರಿಯರ ಮೇಲೆ ಹಾಗೂ ಹಿರಿಯ ಗಂಡಸರ ದೃಷ್ಟಿ ಸಿಂಗಾರಿಯರ ಮೇಲೆ ಸುರಿಯುತ್ತಿದ್ದ ಕಾರಣ ನನ್ನನ್ನು ಯಾರೂ ಅಷ್ಟಾಗಿ ಗಮನಿಸಲಿಲ್ಲ.


ಬೆಳೆಯುತ್ತಿದ್ದ ನನ್ನ ಸಂಸಾರ ಹಾಗೂ ನನ್ನ ಹೊಟ್ಟೆಯಿಂದಾಗಿ ಅತಿ ಮುಖ್ಯವಾಗಿ ಕಾಪಿಟ್ಟನೈಲ್ ಕಟರ್, ಕೀಬಂಚ್, ಪರ್ಸ್, ಚಿಕ್ಕಕೂಂಬ್, ನನ್ನ ದೌರ್ಬಲ್ಯ ದಪೆನ್ ಸೆಟ್‌ಗಳು ಶಾರ್ಪನರ್‌ಗಳ ಅವಶ್ಯಕತೆ ಬಿದ್ದಾಗ ಮಾತ್ರ ಸೂಟ್ ನೆನಪಿಗೆ ಬರುತ್ತಿತ್ತೇ ವಿನಹ ಮಿಕ್ಕ ಕಾಲದಲ್ಲಿ ತಲೆ ಮರೆಸಿಕೊಂಡು ಬೇತಾಳನ ಹಾಗೆ ನೇತಾಡುತ್ತಿತ್ತು.

ನನ್ನ ಹೆಂಡತಿ ಮೊಬೈಲ್ ನೋಡುತ್ತಾ ಪಲ್ಲಂಗದಲ್ಲಿ ವಿರಮಿಸಿದ್ದಳು. ನಾನು ಬರೆಯುತ್ತಿದ್ದ ಪೆನ್‌ನ ರೀಫಿಲ್ ಖಾಲಿ ಆಯಿತು. ಬಂದು–ಹ್ಯಾಂಗರಿನಲ್ಲಿದ್ದ ಕೋಟಿನ ಜೇಬಿನಲ್ಲಿ ತಡಕಿಯೇ ತಡಕಿದೆ. ಊಹುಂ ಕೈಗೆ ಹತ್ತಲಿಲ್ಲ. ರೇಗಿಹೋಗಿ ಹ್ಯಾಂಗರಿನಿಂದ ಕೋಟ್ ತೆಗೆದು ಮಂಚದ ಮೇಲೆ ಎಸೆದೆ.

ಅದು ಯಾವಾಗ ಹೇಗೆ ಬಂದು ಸೇರಿತ್ತೋ ಕಾಣೆ, ಕೋಟಿನ ಜೇಬಿನಿಂದ ಪುಳಪುಳ ಎಂದು ವಿವಿಧ ಸೈಜುಗಳ ಜಿರಳೆ ಸಂಸಾರ ಹೊರಗೆ ಬಂದು ಹರಿಯ ತೊಡಗಿತು. ಹುಲಿಗೂ ಹೆದರದ ನನ್ನ ಹೆಂಡತಿ ಹಾತೆ ಯಾನೆ ಜಿರಳೆಗೆ ಹೆದರಿ ನಡುಗುತ್ತಾಳೆ. ಅವಳ ಬಾಯಿಂದ ಚೀತ್ಕಾರ ಹಾಗೂ ನನ್ನ ಮೇಲೆ ಬೈಗುಳ ಧಾರಾವಾಹಿಯಂತೆ ಹರಿಯಿತು. ಕೂಡಲೇ ಜಾಗೃತನಾಗಿ ಕಾರ್ಯಪ್ರವೃತ್ತನಾಗಿ ಪೊರಕೆ–ಮೊರ ತಂದು–ಒಂದೊಂದೇ ಜಿರಳೆಯನ್ನ ಬಲಿ ಹಾಕಿ ಕೋಟ್ ಹಾಗೂ ನನ್ನ ಹೆಂಡತಿಯನ್ನು ತೃಪ್ತಿಪಡಿಸಿದೆ. ಅರ್ಧ ಘಂಟೆ ಉಗಿದು ಬುದ್ಧಿ ಹೇಳಿದ ಹೆಂಡತಿಯ ಮಾತಿನಂತೆ ಕೋಟಿನ ಜೇಬು ಮತ್ತು ಪ್ಯಾಂಟಿನ ಜೇಬಿನಲ್ಲಿದ್ದ ಸರಕು–ಸಾಮಗ್ರಿಗಳನ್ನು ಮೂಟೆ ಕಟ್ಟಿ ಮ್ಯಾರೇಜ್ಸೂಟನ್ನು ಹೇಗೋ ಒಂದು ಮಡಿಚಿ–ದೊಡ್ಡ ಪಾಲಿಥಿನ್ ಬ್ಯಾಗಿನಲ್ಲಿ ತುರುಕಿ ಗಂಟು ಕಟ್ಟಿ, ಮೇಲಿನ ಬೋರ್ಡ್ ಗೂಡಿನಲ್ಲಿ ತಳ್ಳಿ, ಸುಸ್ತಾಗಿ, ಅಡುಗೆ ಮನೆಗೆ ಹೋಗಿ ಒಂದು ಡೋಸ್ ಕಾಫಿ ಕುಡಿದು ಹಾಯ್ ನನ್ನ ಸೂಟಿಗೆ ವಂದನಾರ್ಪಣೆ ಸಲ್ಲಿಸಿದೆ. ■

ಶಿವಕುಮಾರ್

## ನಗೋಣು ಬಾರಾ




ನಮ್ಮ ನಿಮ್ಮೆಲ್ಲರ ಅಪರಂಜಿಯ ಉಪಸಂಪಾದಕರಾದ ಶ್ರೀ ಬೇಲೂರು ರಾಮಮೂರ್ತಿಯವರ ಇತ್ತೀಚಿನ ಪುಸ್ತಕ. ಲೆಕ್ಕಕ್ಕೆ ತೆಗೆದುಕೊಂಡರೆ 104. 68ನೇ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಕುಮಾರ ಪಾರ್ಕ್ ಗಾಂಧಿ ಭವನದಲ್ಲಿ 9.12.2023 ರಂದು ಲೋಕಾರ್ಪಣೆಯಾದ ಕೃತಿ.

ಒಟ್ಟು 31 ಲೇಖನಗಳಿರುವ ಇದರಲ್ಲಿ ಒಳ್ಳೊಳ್ಳೆಯ ಪ್ರಬಂಧಗಳಿವೆ, ಹಾಸ್ಯಲೇಖನಗಳಿವೆ ಮತ್ತು ವ್ಯಕ್ತಿ ಚಿತ್ರಗಳೂ ಇವೆ. ಅಪ್ಪ ಅಂದ್ರೆ ವಿಲ್ಲನ್ನಾ, ಅಪ್ಪ ಎನ್ನುವ ಮಗು, ಹೆಸರೇನ ನಾ ಹೇಳಲಿ, ಮಗುವಿನ ಮಮ್ಮು ಎನ್ನುವ ಧ್ಯಾನ ಮುಂತಾದ ಬರಹಗಳು ಆಪ್ತವಾಗಿವೆ. ಇನ್ನು ಹಾಸ್ಯ ಲೇಖನಗಳ ಸಾಲಿನಲ್ಲಿ ಹುಚ್ಚರಲ್ಲ ನೀವು ಹುಚ್ಚರಲ್ಲ, ಕಪಿನೀಪತಿಯೂ ಕರೋನ ವೈರಸ್ಸೂ, ಮಾತು ಬಿಡೋದು, ಸನ್ಯಾಸಿ ಸನ್ಯಾಸಿ ಅರ್ಜುನ ಸನ್ಯಾಸಿ ಇವು ಹೆಚ್ಚು ಗಮನ ಸೆಳೆಯುತ್ತವೆ. ಒಟ್ಟಿನಲ್ಲಿ ವಿರಾಮದ ಓದಿಗೆ ಮುದ ಕೊಡುವ ಗ್ರಂಥ

ಪುಸ್ತಕವನ್ನು ಕೊಳ್ಳುವವರು ಅಂಕಿತ, ಸಪ್ನ ಮತ್ತು ನವಕರ್ನಾಟಕ ಇಲ್ಲಿ ಆನ್ ಲೈನ್ ನಲ್ಲಿಯೂ ಕೊಳ್ಳಬಹುದು.

ಗ್ರಂಥವನ್ನು ನಿಮಗೆ ಪರಿಚಯ ಮಾಡಿಕೊಟ್ಟು ಬೇಲೂರರಿಗೆ ಶುಭ ಹಾರೈಸುವುದು ನನಗೆ ಅಚ್ಚುಮೆಚ್ಚು.

**ಪ್ರತಿಗಳಿಗಾಗಿ ಸಂಪರ್ಕಿಸಿ :**

### ನಗೋಣು ಬಾರಾ

**(ಪ್ರಬಂಧಗಳು, ಹಾಸ್ಯ ಲೇಖನಗಳು, ವ್ಯಕ್ತಿಚಿತ್ರಗಳು)**

**ಲೇಖಕರು : ಬೇಲೂರು ರಾಮಮೂರ್ತಿ**

**ಪ್ರಕಾಶಕರು : ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು,**

**ಪುಟಗಳು : 4 + 241 = 247**

**ಬೆಲೆ : ರೂ. 225/-**

**ನವಕರ್ನಾಟಕ, ಸಪ್ನ ಮತ್ತು ಅಂಕಿತ ಆನ್ ಲೈನ್‌ನಲ್ಲಿಯೂ ಕೊಳ್ಳಬಹುದು**

# ಸ್ವರ್ಗಲೋಕದಲ್ಲಿ ಔಷಧಿ ಅಂಗ್ಡಿ ಇರುತ್ತೇನ್ರೀ...?

ಎನ್. ರಾಮನಾಥ್

ಸ್ಮಶಾನದಲ್ಲಾದರೂ ಕಾಗೆಗಳು ಕೂಗುತ್ತವೆ. ಇಲ್ಲಿ ಇಷ್ಟೂ ಸದ್ದಿಲ್ಲದ ಸುಡುಗಾಡು ಮೌನ!

'ಮಿಸ್ಟರ್ ಇಂದ್ರ, ಹೌ ಎಬೌಟ್ ಸಮ್ ಮ್ಯೂಸಿಕ್?' ಎಂದು ಕೇಳಿದಿರೆ? ಕುನ್ನಕುಡಿ, ಪಟ್ಟಮ್ಮಾಳ್, ಬಿಡಾರಂ, ಮಹಾಲಿಂಗಂ ಮುಂತಾದವರು ತಮ್ಮ ಪಿಟೀಲು, ಕಂಠ, ಕೊಳಲುಗಳ ಸಮೇತ ಹಾಜರ್. ಒಂದು ಮೈಕಲ್ ಜ್ಯಾಕ್ಸನ್ ಮೂನ್ವಾಕ್ ಇಲ್ಲ, ಒಂದು ಮೆಟಲ್ ರಾಕ್ ಇಲ್ಲ, ಒಂದು ಹೈ ಆಲ್ಟೋ ಓಪ್ರಾ ಮ್ಯೂಸಿಕ್ ಅಲ್ಲ... ಬರೀ ತರನನ್ನನ್ನಾ ಅನ್ನೋ ಮ್ಯೂಸಿಕ್ ಕೇಳೀ ಕೇಳೀ ಐ ಹ್ಯಾವ್ ಬಿಕಮ್ ಸಿಕ್ಕೂ!

ಸಂಗೀತವಿಲ್ಲದಿದ್ದರೆ ಬೇಡ, ಡ್ಯಾನ್ಸ್ ಆದ್ರೂ ನೋಡೋಣಾಂದ್ರೆ ಅದೇ ಒಂಬತ್ತಜ ಸೀರೆ ಸುತ್ಕೊಂಡು ಅದೇ ಭರತನಾಟ್ಯ ಮಾಡುವ ಸೇಮ್ ಓಲ್ಡ್ ಊರ್ವಶಿ, ಮೇನಕೆ ಎಟ್ಸೆಟ್ರಾ. 'ದೂರದಿಂದ ಬಂದಂಥ ಸುಂದರಾಂಗ ಜಾಣ' ಅಂತ ಹಾಡ್ಕೊಂಡೋ, 'ಲೈಲಾ ಮೈ ಲೈಲಾ ಐಸೀ ಹೂ ಲೈಲಾ' ಅನ್ಕೊಂಡೋ ಹಾಫ್ ವೇ ಬಿಟ್ವೀನ್ ಡ್ಯಾನ್ಸ್ ಅಂಡ್ ಡ್ರಿಲ್ ಮಾಡಿ ಥ್ರಿಲ್ ಕೊಡ್ತಿದ್ದ ಡ್ಯಾನ್ಸರ್ಸು ಎತ್ಲಾಗ್ಹೋದ್ರೂಂತೀನಿ! 'ತತ್ತತಾರತ್ತ ತತ್ತತಾರತ್ತ ಇಲ್ಲೇ ಬಂತು ಸ್ವರ್ಗ' ಅಂತ ಕುಣಿದವಳು ಸ್ವರ್ಗದಲ್ಲಿ ಹುಡುಕಿದರೂ ಸಿಗಲಿಲ್ಲವಲ್ಲ, ಇದೇನನ್ಯಾಯಾಂತೀನಿ.

ಹಾಡುಹಸೆಗಳ ವಿಷಯ ಅತ್ಲಾಗೆ ಬಿಡೋಣ. ಸಿಂಪಲ್ ಡೈಲಿ ಸ್ಪೋರ್ಟ್ಸ್ ಕೂಡ ಇಲ್ಲವಲ್ಲ ಇಲ್ಲಿ! ಮೊಬೈಲ್ನಲ್ಲಿ ಊಬರ್ನೋ, ಓಲಾನೋ ಬುಕ್ ಮಾಡಿ ಸ್ಕ್ರೀನಲ್ಲಿ ಆ ಕಾರಿನ ನಿಶ್ಚಲಭಂಗಿಯನ್ನು ನೋಡುತ್ತಾ

ಕ್ಯಾಬ್ ಹೋ ತುಮ್ ಯಾ ಕೋಯೀ ಹಕೀಕತ್ ಏ ತೋ ತುಮ್ ಬತಲಾವೋ **ದೂರ್ ತೂ ಇತನೀ ಕ್ಯೋ ಖಡೀ ಹೋ ಔರ್ ಕರೀಬ್ ಆ ಜಾವೋ। ಎಂದು ನಿಂತಲ್ಲೇ ಪ್ರಾರ್ಥಿಸಿದರೂ ಫಲಿತಾಂಶ ಮಾತ್ರ ಶೂನ್ಯ ಸಂಪಾದನೆಯೇ...**

ಓಹ್! ನಾಟ್ ರಿಯಲಿ. ಅವನು ಬರುವುದೇ ಇಲ್ಲ ಎಂದು ಖಾತ್ರಿಯಾಗಿ ನಾವೇ ಟ್ರಿಪ್ ಕ್ಯಾನ್ಸಲ್ ಮಾಡಿದರೆ ನಮ್ಮ ಬ್ಯಾಂಕ್ ಬ್ಯಾಲೆನ್ಸ್ ಟ್ರಿಪ್ ಆಗೋದ್ರಿಂದ 'ಇಟ್ ಈಸ್ ಎ ಮೈನಸ್ ಡ್ಯೂ ಟು ಹಿಸ್ ಹೈನೆಸ್'. ಆದ್ದರಿಂದ ಶೂನ್ಯಕ್ಕಿಂತ ಕೆಳಗಿನ ಋಣಾತ್ಮಕ ಸಂಪಾದನೆ! ನಾನಿರುವ ಸ್ವರ್ಗದಲ್ಲಿ ಟ್ಯಾಕ್ಸಿಯೂ ಇಲ್ಲ, ಅಂತಹ ಟ್ರ್ಯಾಕ್ಸಿಂಗ್ ಅನುಭವವೂ ಇಲ್ಲ. ಹೀಗಾಗಿ 'ಗೋಕುಲದಿ ಹೊರಟಿಹನು; ಜಗಶುಭವ ಹೊತ್ತಿಹನು; ಬರುವನೇಂ ಕೃಷ್ಣ, ಮತ್ತೆ ಬರುವನೇಂ?' ಎಂದು ರಾಧೆಯು ಕೃಷ್ಣನಿಗಾಗಿ ತಪಿಸುವಂತೆಯೇ ನಾವು ಕ್ಯಾಬ್ಗಾಗಿ ತಪಿಸುವುದರಲ್ಲಿ ಇರುವ ಅನಿಶ್ಚಿತತೆ, ಚಂಚಲತೆ, ರೋದನಗಳ ಸುಖವೇ ಇಲ್ಲವಾಗಿದೆಯಲ್ಲ! ಛೆ! ಇದೂ ಒಂದು ಬಾಳೆ?

ನಮ್ಮದೇ ವಾಹನದಲ್ಲಿ ಹೋಗುವಾಗ ಎಂತೆಂತಹ ಆಟಗಳನ್ನಾಡುತ್ತೇವೆ! ದೆಹಲಿಯಲ್ಲಿ ಡ್ರೈವ್ ಮಾಡುವಾಗ 'ಸ್ಮೋಕ್ ಸ್ಕ್ರೀನ್ ಕೇ ಪೀಛೇ ಕ್ಯಾ ಹೈ; ಧೂಲೋಂಕೇ ಪೀಛೇ' ಎಂದು ಊಹೆ ಮಾಡುವುದೇ ಚೆನ್ನ. ವಾಯುಮಾಲಿನ್ಯದ ಕಾರಣದಿಂದ ಇಪ್ಪತ್ತು ಅಡಿಗಳ ಆಚೆಯಿರುವ ವಾಹನವೂ ಕಾಣದಾಗಿ 'ಆಲ್ವೇಸ್ ಆನ್ ಯುವರ್ ಟೋಸ್' ಇರಬೇಕಾಗಿದ್ದು ಅಡ್ರೆನಲಿನ್ ಪಂಪ್ ಆಗುವ ಆಮೋದವೇ ಇಲ್ಲಿಲ್ಲ.

ದೆಹಲಿಯ ಕಥೆ ಅಂತಾದರೆ ಬೆಂಗಳೂರಿನಲ್ಲಿನ ಹಲವು ಬಡಾವಣೆಗಳಲ್ಲಿ 'ಸ್ಪಾಟ್‌ದ ಕಾಂಕ್ರೀಟ್ ಕಾಂಟೆಸ್ಟ್' ನಡೆಯುತ್ತದೆ. ಬಿಬಿಎಂಪಿ (ಇದೊಂದು ವಿಚಿತ್ರ ಸಂಸ್ಥೆ. ಮನೆಯಲ್ಲಿ ಬೀಬೀ ಯಾರ ಮಾತೂ ಕೇಳುವುದಿಲ್ಲ; ಸದನದಲ್ಲಿ ಎಂ.ಪಿ. ಯಾರಿಗೂ ಕ್ಯಾರೇ ಅನ್ನುವುದಿಲ್ಲ. ಬಿಬಿಎಂಪಿ ಎಲ್ಲಿಯೂ, ಕೋರ್ಟಿನ ಆದೇಶವನ್ನೂ ಒಳಗೊಂಡು ಯಾರ ಮಾತನ್ನೂ ಕೇಳುವುದಿಲ್ಲ!) ತನ್ನ ಬಿಲ್ಲುಗಳಲ್ಲಿ ಕಾಂಕ್ರೀಟ್ ಹಾಕಿದೆಯೆಂದು ನಮೂದಿಸಿರುವ ರಸ್ತೆಗಳಲ್ಲಿ ಲಂಕೆಗೆ ಹನುಮಂತನು ಹಾರುವಾಗ ಅವನನ್ನು ನುಂಗಿಹಾಕಲು ತೆರೆದ ಸುರಕನ್ಯೆ ಟರ್ನ್ಡ್ ರಕ್ಕಸಿ ಸುರಸೆಯ ಬಾಯಿಯಷ್ಟು ಅಗಲದಿಂದ ಹಿಡಿದು ರಾಜ್ಯೋತ್ಸವದ ಕಂಬಕ್ಕೆಂದು ಅಗೆದ ಗುಂಡಿಯ ಅಗಲದವರೆಗೆ ಇರುವ ಹೊಂಡ, ಹಳ್ಳ, ಕೊಳ್ಳಗಳ ಮಧ್ಯದಲ್ಲಿ ಅಕಸ್ಮಾತ್ ಕಂಡುಬರಬಹುದಾದ ಕಾಂಕ್ರೀಟನ್ನು ಗುರುತಿಸಿ 'ಅನ್ಫಾರ್ಚುನೇಟ್ ರೋಡ್ ಯೂಸರ್ಸ್ ಅಸೋಸಿಯೇಷನ್' ನೀಡುವ ಬಹಮಾನವನ್ನು ಪಡೆಯುವ ಮಜ ಇಲ್ಲಿನ ಸಪಾಟು ರಸ್ತೆಗಳಲ್ಲಿ ದೊರಕುವುದು ಕನಸೇ ಸರಿ.

ಕೆಲವು ನಗರಗಳ ಕೆಲವು ಬಡಾವಣೆಗಳಲ್ಲಿ ನೀರಿನ ಸಮಸ್ಯೆ ಇರುತ್ತದೆ. ಅಂತಹ ಜಾಗಗಳಲ್ಲಿ 'ಸಾಮೂಹಿಕ ಸೀರಿಯಲ್ ವ್ಯೂಯಿಂಗ್' ಎಂಬ ಸಮಾರಂಭವನ್ನು ಹಮ್ಮಿಕೊಂಡು, ಎತ್ತರದ ಸ್ಥಳಗಳಲ್ಲಿ ವೀಕ್ಷಕರನ್ನು ಕೂರಿಸಿ ಗೋಳಾತಿಗೋಳು ಸೀರಿಯಲ್ಲುಗಳನ್ನು ರೈಲ್ವೇ ಬೋಗಿಗಳೋಪಾದಿಯಲ್ಲಿ ಒಂದರ ಹಿಂದೆ ಒಂದನ್ನು ಪ್ರದರ್ಶಿಸುತ್ತಾ, **'ಇಳಿದು ಬಾ ಅಶ್ರು ಇಳಿದು ಬಾ; ಏಕೆ ಅಡಗಿರುವೆ ರೆಪ್ಪೆ ಹಿಂದಿರುವೆ; ಕಣ್ಣ ಪಾತ್ರೆಯನು ತುಳುಕಿ ಬಾ; ಕೆನ್ನೆ ಇಳಿದು ಬಾ ಗದ್ದ ಜಿಗಿದು ಬಾ ಬಾರೆ ಬಾ ಅಶ್ರು ಇಳಿದು ಬಾ'** ಎಂಬ ಹಿನ್ನೆಲೆಗಾಯನವನ್ನು ಹಾಕಿ, ಸಂದ ಅಶ್ರುವನ್ನು ಜಾಲರಿಗಳ ಮೂಲಕ ಪೈಪಿಗೆ ಹರಿಯಿಸಿ ಅಶ್ರುಜಲಾಶಯದಲ್ಲಿ ತುಂಬಿದ ದ್ರವವನ್ನು ಡಿಸ್ಟಿಲೇಷನ್ನಿಗೆ ಒಳಪಡಿಸಿ ಉಪ್ಪನ್ನೇ ಬೇರೆ (ಇತರರ ಕಷ್ಟಕ್ಕೆ ಅಯ್ಯೋ ಎಂದುದರಿಂದ ಸುರಿದ ಕಣ್ಣೀರಿನಲ್ಲಿ ಅಡಗಿರುವ ಉಪ್ಪಾದ್ದರಿಂದ ಇದು ಅಯ್ಯೋಡೈಜ್ಡ್ ಸಾಲ್ಟ್!) ಮಾಡಿ, ನೀರನ್ನು ಕುಡಿಯಲು ಬಳಸುವ ಆಮೋದವೆಲ್ಲಿ! ಏನೇನೂ ಕಷ್ಟ ಪಡದೆ ಅಮಲ ವಿಮಲ ಜಲವನ್ನು ಕುಡಿಯುವ ಸ್ವರ್ಗದ ಬೋರ್ಡಮ್ ಎಲ್ಲಿ!

ನನಗೆ ಈವರೆಗೆ ಇಲ್ಲಿನ ಕಾನ್ಸೆಪ್ಟೇ ಅರ್ಥ ಆಗಿಲ್ಲ ಕಣ್ರೀ. ರಾಜಕಾರಣಿಗಳು, ಅವರ ಐಲುತನಗಳು ಇಲ್ಲದ ಜಾಗವನ್ನ ಸ್ವರ್ಗ ಅನ್ನೋಕ್ಕಾಗತ್ತಾ? 'ಆಲೂಗೆಡ್ಡೆಯಿಂದ ಚಿನ್ನ ತಯಾರಿಸ್ತೀನಿ', 'ಯೆಸ್ಟರ್ಡೇ ಮಾರ್ನಿಂಗ್ ಐ ವೋಕ್ ಅಪ್ ಎಟ್ ನೈಟ್', 'ಲಿಪ್ಸ್ಟಿಕ್ಕು ಪೌಡರ್ರು ಹಾಕ್ಕೊಳ್ಳೋ ಮಹಿಳೆಯರು ಉಗ್ರಗಾಮಿಗಳಿಗೆ ಸಮ' ಮುಂತಾದ ಸ್ಟೇಟ್ಮೆಂಟ್ಗಳೇ ಇಲ್ಲ ಇಲ್ಲಿ. ಆರ್ನಬ್ ಗೋಸ್ವಾಮಿಯ ವರ್ಬಲ್ ಕ್ಯಾಲಿಸ್ತೆನಿಕ್ಸ್, ಟಿವಿಯಲ್ಲಿನ ಸ್ಕಾಲ್ಗಳ ಇನ್ ಚಾರ್ಜ್ ಆದ 'ಶುದ್ಧ ಕನ್ನಡ ಕೊಲೆಗಾರರ ಸಂಘ'ದವರು ಪ್ರದರ್ಶಿಸುವ ಹಿಲೇರಿಯಸ್ ಹೇಳಿಕೆಗಳು, ಇವ್ಯಾವುವೂ ಇಲ್ಲ ಇಲ್ಲಿ. ಎಲ್ನೋಡಿದ್ರೂ ಶಾಂತಿ, ನೆಮ್ಮದಿ, ಸಮಾಧಾನ. ಛೆ! ರ್ಯಾಲಿಗಳು ನಡೆಯುವಾಗಿನ ಊಳುಗೀಳು ಹೇಷಾರವದ ಮಿಕ್ಸೆಡ್ ಕೂಗು, ಬೀದಿಬದಿಯಲ್ಲಿ ಧೂಮಧೂಳೋಚ್ಛಿಷ್ಠ ಭರಿತ ಪಾನಿಪುರಿಯ ಟೇಸ್ಟು 'ಕೊಟ್ಯಲ್ಲ ಗಸ್ತು, ಕುಡಿದಿದ್ಯ ರಸ್ತೆ' ಅನ್ನೋದನ್ನ ನೆನಪಿಸುವಂತಹ ಹೈಕ್ಲಾಸ್ ಕುಡುಕರು, ಇವುಗಳೆಲ್ಲ ಇಲ್ಲದಿರುವ ಊರೂ ಒಂದು ಊರೇ. ಊಹೂಂ; ಇದು ಊರು ಭಂಗ!

ಇನ್ನೂ ಬೇಸಿಕ್ ವಿಷಯಗಳ ಬಗ್ಗೆ ಹೇಳ್ತೀನಿ ಕೇಳಿ. ಇಲ್ಲಿ ಬೆಳಗಾಗೆದ್ದು ಕಾಫಿ ಕೂಡ ಸಿಗಲ್ಲ ಕಣ್ರೀ. 'ಕಾಫಿಯಲ್ಲಿ ಕೆಫಿನ್ ಇದೆ. ಸ್ವರ್ಗದಲ್ಲಿ ವಿಷಕರವಾದ ಎಲ್ಲವೂ

ನಿಷೇಧ' ಅಂದ್ಬಿಟ್ಟ ಇಲ್ಲಿನ ಚೀಫ್ ಷೆಫ್ಫು. ಡ್ರಿಂಕ್ಸ್ ಅಂದ್ರೆ ಸುರೆ ಒಂದೇ. 'ಸುಖವೀವ ಸುರಾಪಾನವಿದು ಸ್ವರ್ಗಸಮಾನಂ' ಅಂತ ದೇವದಾಸಿ ನಾಟಕದಲ್ಲಿ ನಾಜೂಕಯ್ಯ ಹಾಡಿರಬಹುದು, ಹಾಗಂತ ದಿನಾ ಸುರೆಯನ್ನೇ ಕುಡಿಯೋದೇ? ಬಡಪಾಯಿ ಇಂದ್ರ & ಕೋಗೆ ಕಾಕ್ಟೈಲ್ಗಳ ಕಿಕ್ಕಿನ ಗಮ್ಮತ್ತೇ ಗೊತ್ತಿಲ್ಲಾನ್ಸತ್ತೆ.

ಇವೆಲ್ಲವನ್ನೂ ಹೇಗೋ ಸಹಿಸಿಕೊಳ್ಳೋಣ ಅಂದರೆ ಇಲ್ಲಿ ನನಗೆ ಒಬ್ಬರೂ ಫ್ರೆಂಡ್ಸೇ ಇಲ್ಲ ಕಣ್ರೀ. ದೇವಲೋಕದ ಟೂರಿಸ್ಟ್ ಲಿಸ್ಟ್ ರೆಫರ್ ಮಾಡಿದರೆ ಅವರೆಲ್ಲ ನೆಕ್ಸ್ಟ್ ಡೋರಲ್ಲಿ, ಅಂದರೆ ನರಕದಲ್ಲಿ, ಇದ್ದಾರಂತೆ. ನೀವೇ ಹೇಳಿ ಸಾರ್, ಫ್ರೆಂಡ್ಸ್ ಒಟ್ಟಿಗೆ ಇರುವ ಜಾಗ ಸ್ವರ್ಗಾನೋ, ಒಬ್ಬಂಟಿಯಾಗಿ ಕಳೆಯೋ ಜಾಗ ಸ್ವರ್ಗಾನೋ? ಫ್ರೆಂಡ್ಲೆಸ್ನೆಸ್ ಜೊತೆಗೆ ಇಲ್ಲಿನ ಕ್ಲೀನ್ ಏರ್, ಕ್ಲೀನ್ ವಾಟರ್, ಕಾವ್ ಅಟ್ಮಾಸ್ಫಿಯರ್ಗಳನ್ನು ನನಗೆ ಒಗ್ಗದೆ ನನ್ನ ಮೈ ಹಾಳಾಗ್ಹೋಗಿದೆ. ನನಗೆ ತುರ್ತಾಗಿ ಒಂದಷ್ಟು ಮೆಡಿಸನ್ಸ್ ಬೇಕಾಗಿವೆ.

ಒಂದೇ ಡೌಟು–ನನಗೆ ಸುತ್ತಾಡಕ್ಕೆ ಸಿಕ್ಕ ಅವಕಾಶದಲ್ಲಿ ಇಲ್ಲಿ ಕ್ಲಿನಿಕ್ಕು, ಮೆಡಿಕಲ್ ಸ್ಟೋರ್ ಕಾಣಲಿಲ್ಲ. ಆದ್ದರಿಂದಲೇ ಇಂದ್ರನಿಗೊಂದು ಎಸ್ಸೆಮ್ಮೆಸ್ ಕಳುಹಿಸಿದ್ದೇನೆ. ಏನು ಮೆಸೇಜು ಅಂದ್ರೇನು?

'ಮಿಸ್ಟರ್ ಇಂದ್ರ, ಸ್ವರ್ಗಲೋಕದಲ್ಲಿ ಔಷಧಿ ಅಂಗ್ಡಿ ಇರುತ್ತೇನ್ರೀ...?'

■

